ದುಡಿಯುವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 16 | ಸಂಚಿಕೆ 17 | ಏಪ್ರಿಲ್ 18–24, 2022 | ಪುಟ 16 | ರೂ.10/-

https://janashakthi.wordpress.com e-mail : js_weekly@yahoo.com



ಅಗಲಿದ
ಹೋರಾಟಗಾರ್ತಿ
ಎಂ.ಸಿ. ಜೋಸೆಫೀನ್



ಬಲಿಪೀಠವಾದ ಭ್ರಷ್ಟ ಸರ್ಕಾರ

ಹುಬ್ಬಳ್ಳಿ ಗಲಭೆಗೆ ಪ್ರಚೋದನೆ ಏನು?

ಫೆಲೋಶಿಪ್ ಕೇಳಿದರೆ ವಜಾಗೊಳಿಸುವ ಬೆದರಿಕೆ ಹಾಕಿದ ಕನ್ನಡ ವಿಶ್ವವಿದ್ಯಾಲಯ





ಪೆಟ್ರೋಲ್ ಬೆಲೆ ಏರಿಕೆ ಅನಿವಾರ್ಯವೇ?

ಯುವ ಪೀಳಿಗೆಯ ದಿಕ್ಕು ತಪ್ಪಿಸುತ್ತಿರುವ ಕೋಮು ಧ್ರುವೀಕರಣ



ಕೋಮುಶಕ್ತಿಗಳ ಪ್ರತಿಗಾಮಿ ಮಾನದಂಡಗಳಿಗೆ ಸವಾಲು ಹಾಕಿದ್ದ ಎಂ.ಸಿ. ಜೋಸೆಫೀನ್–ಎಐಡಿಡಬ್ಲ್ಯುಎ ಶ್ರದ್ಧಾಂಜಲಿ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ)ಯ ರಾಷ್ಟ್ರೀಯ ಉಪಾಧ್ಯಕ್ಷರೂ, ಕೇರಳ ರಾಜ್ಯ ಅಧ್ಯಕ್ಷರೂ ಆಗಿ ಸೇವೆ ಸಲ್ಲಿಸಿದ್ದ ಎಂ ಸಿ ಜೋಸೆಫೀನ್ ಹೃದಯಾಘಾತದಿಂದ ಏಪ್ರಿಲ್ 10, 2022 ರಂದು ನಿಧನರಾದರು. ಆಕೆಗೆ 74 ವರ್ಷ ವಯಸ್ಸಾಗಿತ್ತು. ಸಿಪಿಐ(ಎಂ)ನ ಕೇಂದ್ರ ಸಮಿತಿಯ ಸದಸ್ಯರಾಗಿದ್ದ ಅವರು ನಿಧನದ ವೇಳೆಗೆ ಕಣ್ಣೂರಿನಲ್ಲಿ ನಡೆಯುತ್ತಿದ್ದ ಪಕ್ಷದ ಮಹಾಧಿವೇಶನದಲ್ಲಿ ಭಾಗವಹಿಸಿದ್ದರು.

ಕೇರಳದ ಎರ್ನಾಕುಲಂ ಜಿಲ್ಲೆಯ ವೈಪಿನ್ ದ್ವೀಪದಲ್ಲಿ ಸಾಂಪ್ರದಾಯಿಕ ಕ್ರಿಶ್ಚಿಯನ್ ಕುಟುಂಬದಲ್ಲಿ ಜನಿಸಿದ ಜೋಸೆಫೀನ್ ಬಾಲ್ಯದಿಂದಲೂ ಸಾರ್ವಜನಿಕ ಸೇವೆಯಲ್ಲಿ ತನ್ನನ್ನು ತೊಡಗಿಸಿಕೊಂಡ ಕಾರ್ಯಕರ್ತೆ. ಕೋಮುವಾದಿ ಶಕ್ತಿಗಳನ್ನು ಪ್ರಬಲವಾಗಿ ಎದುರಿಸುತ್ತಿದ್ದ ಆಕೆ ಈ ಶಕ್ತಿಗಳ ಪ್ರತಿಗಾಮಿ ಮಾನದಂಡಗಳಿಗೆ ಸವಾಲು ಹಾಕಿದ್ದರು. ಆಳುವಾದಲ್ಲಿರುವ ಸೇಂಟ್ ಕ್ಸೇವಿಯರ್ಸ್ ಕಾಲೇಜಿನಲ್ಲಿ ಪದವಿ ಶಿಕ್ಷಣವನ್ನು ಪೂರ್ಣಗೊಳಿಸಿದ ಜೊಸೆಫಿನ್ 1978 ರಲ್ಲಿ ವಿದ್ಯಾರ್ಥಿಯಾಗಿ ಕಮ್ಯುನಿಸ್ಟ್ ಚಳವಳಿಯತ್ತ ಆಕರ್ಷಿತರಾದರು. ಎರ್ನಾಕುಲಂನ ಮಹಾರಾಜ ಕಾಲೇಜಿನಲ್ಲಿ ಮಲಯಾಳಂನಲ್ಲಿ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿ ಅವರು ಚಲಕ್ಕುಡಿ ಸ್ಪೆನ್ಸರ್ ಕಾಲೇಜಿನಲ್ಲಿ ಅಧ್ಯಾಪಕಿಯಾದರು. ಮುಂದೆ ಈ ಕೆಲಸವನ್ನು ತೊರೆದು ಎಡ ಚಳುವಳಿಯಲ್ಲಿ ಪೂರ್ಣಾವಧಿ ತೊಡಗಿಸಿಕೊಂಡರು.

ಜೋಸೆಫೀನ್ 1997 ರಿಂದ 2006 ರವರೆಗೆ ಎಐಡಿಡಬ್ಲ್ಯುಎ ದ ಕೇರಳ ರಾಜ್ಯ ಅಧ್ಯಕ್ಷರಾಗಿದ್ದರು. ಅವರು ಎಐಡಿಡಬ್ಲ್ಯುಎ ರಾಷ್ಟ್ರೀಯ ಉಪಾಧ್ಯಕ್ಷರಾಗಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಅವರು 2017 ರಿಂದ 2021 ರವರೆಗೆ ಕೇರಳ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾಗಿದ್ದರು, ತಮ್ಮ ಅಧಿಕಾರಾವಧಿಯಲ್ಲಿ ಮಹಿಳೆಯರಿಗೆ ಪರಿಹಾರ ನೀಡುವ ಅನೇಕ ಪ್ರಶ್ನೆಗಳನ್ನು ನಿಭಾಯಿಸಿದರು.

ಅವರು ವೇರ್‌ಹೌಸಿಂಗ್ ಕಾರ್ಪೊರೇಷನ್ ಎಂಪ್ಲಾಯಿಸ್ ಯೂನಿಯನ್‌ನ ಕಾರ್ಯದರ್ಶಿ ಮತ್ತು ಸಿಐಟಿಯುಗೆ ಸಂಯೋಜಿತವಾಗಿರುವ ಖಾಸಗಿ ಆಸ್ಪತ್ರೆಗಳ ಕಾರ್ಮಿಕರ ಸಂಘದ ಅಧ್ಯಕ್ಷರೂ ಆಗಿದ್ದರು.

ಅವರು ಕೇರಳ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ನಿಯಮಿತ ಮತ್ತು ಬೃಹತ್ ಕೊಚ್ಚಿನ್ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹುದ್ದೆಯಲ್ಲಿ ಜಾರ್ಯನಿರ್ವಹಿಸಿದ್ದರು ಹಾಗೂ. ಅಂಗಮಾಲಿ ಪುರಸಭೆಯ ಕೌನ್ಸಿಲರ್ ಆಗಿ 13 ವರ್ಷಗಳ ಕಾಲ ಆಯ್ಕೆಯಾಗಿದ್ದರು.

ಅವರು ಉತ್ತಮ ವಾಗ್ಮಿ ಮತ್ತು ಮಹಿಳೆಯರ ನಡುವೆ ಜನಪ್ರಿಯರಾಗಿದ್ದ ಮುಖಂಡರಾಗಿದ್ದು ನಿಧನದವರೆಗೂ ಎಐಡಿಡಬ್ಲ್ಯುಎ ಕೇಂದ್ರ ಸಮಿತಿ ಸದಸ್ಯರಾಗಿ ಮುಂದುವರಿದಿದ್ದರು. ಕೇಂದ್ರ ಸಮಿತಿಯಲ್ಲಿ ಪ್ರಮುಖ ಮಹಿಳಾ ಸಮಸ್ಯೆಗಳ ಕುರಿತು ಚರ್ಚೆಗಳಲ್ಲಿ ಅವರ ಕೊಡುಗೆಗಳು ಇನ್ನು ಮುಂದೆ ಸಿಗುವುದಿಲ್ಲ ಎಂದು ಎಐಡಿಡಬ್ಲ್ಯುಎ ಅಧ್ಯಕ್ಷರಾದ ಮಾಲಿನಿ ಭಟ್ಟಾಚಾರ್ಯ ಮತ್ತು ಪ್ರಧಾನ ಕಾರ್ಯದರ್ಶಿ ಮರಿಯಮ್ ಧವಳೆ ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ನೀಡಿರುವ ಹೇಳಿಕೆಯಲ್ಲಿ ದುಃಖ ವ್ಯಕ್ತಪಡಿಸಿದ್ದಾರೆ.

ಈ ಕೋಮು ಪ್ರಚೋದನೆಗಳು ನಿಲ್ಲಬೇಕು

–ಸಿಪಿಐ(ಎಂ) ಪೊಲಿಟ್‌ಬ್ಯುರೊ

“ಏಳು ರಾಜ್ಯಗಳಲ್ಲಿ ಕೋಮು ಹಿಂಸಾಚಾರ ನಡೆದರೂ ಪ್ರಧಾನಿಗಳ ದಿವ್ಯಮೌನ ಇನ್ನಷ್ಟು ಆತಂಕಕಾರಿ”

ಭಾರತದ ಹಲವಾರು ರಾಜ್ಯಗಳಲ್ಲಿ–ಮಧ್ಯಪ್ರದೇಶ, ಬಿಹಾರ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಜಾರ್ಖಂಡ್ ಇತ್ಯಾದಿಗಳಲ್ಲಿ ರಾಮ ನವಮಿಯ ಮೆರವಣಿಗೆಗಳ ಸಂದರ್ಭಗಳಲ್ಲಿ ಕೋಮು ಹಿಂಸಾಚಾರ ಒಂದು ಆಳವಾದ ಕಳವಳ ಉಂಟುಮಾಡುವ ವಿಷಯವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಈ ಘಟನೆಗಳಲ್ಲಿ ಒಂದು ನಿರ್ದಿಷ್ಟ ವಿಧಾನ ಇದೆ ಎಂಬುದನ್ನು ಇವು ನಡೆದ ಪ್ರದೇಶಗಳಿಂದ ಬಂದಿರುವ ವರದಿಗಳು ಸೂಚಿಸುತ್ತವೆ. ಹಬ್ಬದ ಸಂದರ್ಭವನ್ನು ಬಳಸಿಕೊಂಡು ಆಕ್ರಮಣಕಾರಿ ಶಸ್ತ್ರಸಜ್ಜಿತ ಮೆರವಣಿಗೆಗಳನ್ನು ನಡೆಸಿ ಅವು ಅಲ್ಪಸಂಖ್ಯಾತರು ವಾಸಿಸುವ ಕಾಲನಿಗಳ ಮೂಲಕ ಹಾದುಹೋಗುವಾಗ ಅತ್ಯಂತ ಪ್ರಚೋದನಕಾರಿ ಘೋಷಣೆಗಳನ್ನು ಕೂಗುವುದು, ಅದು ವಾಗ್ವಾದಗಳಿಗೆ, ನಂತರ ಕಲ್ಲು ತೂರಾಟಕ್ಕೆ ಕಾರಣವಾಗುವುದು ಕಂಡು ಬಂದಿದೆ.

ಖಾರ್ಗೋನ್‌ನಲ್ಲಿ ಸಂಭವಿಸಿದ ಅಂತಹ ಮೊದಲ ಘಟನೆಯ ಸಂದರ್ಭದಲ್ಲಿ ಬಿಜೆಪಿ ನಾಯಕ ಕಪಿಲ್ ಶರ್ಮಾ, ರಾಜಧಾನಿಯಲ್ಲಿ ನಡೆದ ಕೋಮುಗಲಭೆಯ ಮೊದಲು ಮಾಡಿದಂತಹ ದ್ವೇಷದ ವಿಷ ತುಂಬಿದ ಭಾಷಣ ಮಾಡುವ ಸರಣಿ ಅಪರಾಧಿ, ಆ ಪ್ರದೇಶದಲ್ಲಿದ್ದರು ಎಂಬುದು ಕಾಕತಾಳೀಯವಲ್ಲ ಎಂದು ಪೊಲಿಟ್‌ಬ್ಯುರೊ ಟಿಪ್ಪಣಿ ಮಾಡಿದೆ. ಬಿಹಾರದಲ್ಲಿ ಪೊಲೀಸರ ಸಮ್ಮುಖದಲ್ಲಿ ಮಸೀದಿಯ ಮೇಲೆ ಕೇಸರಿ ಧ್ವಜವನ್ನು ನೆಟ್ಟಂತಹ ಅತ್ಯಂತ ಆಕ್ಷೇಪಾರ್ಹ ಘಟನೆಗಳು ನಡೆದಿವೆ. ದಿಲ್ಲಿಯಲ್ಲಿ ಜೆಎನ್‌ಯು ಕ್ಯಾಂಪಸ್‌ನಲ್ಲಿ, ಸಂಘ ಪರಿವಾರಕ್ಕೆ ಸೇರಿರುವ ಎಬಿವಿಪಿ ರಾಮನವಮಿ ಹೆಸರಿನಲ್ಲಿ ಹಾಸ್ಟೆಲ್ ಕ್ಯಾಂಟೀನ್‌ನಲ್ಲಿ ಮಾಂಸಾಹಾರಿ ಆಹಾರವನ್ನು ನೀಡುವುದನ್ನು ತಡೆಯಲು ಮೆಸ್ ಕಾರ್ಮಿಕರ ಮೇಲೆ ಹಲ್ಲೆ ನಡೆಸಿತು ಮತ್ತು ನಂತರ ಅವರನ್ನು ರಕ್ಷಿಸಲು ಬಂದ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿತು.

ಮಧ್ಯಪ್ರದೇಶ, ಗುಜರಾತ್ ಮತ್ತು ಬಿಹಾರದ ಆಡಳಿತಗಳು ಸಾಕಷ್ಟು ಪೂರ್ವಸಿದ್ಧತೆಗಳಿಲ್ಲದೆ ಇಂತಹ ಮೆರವಣಿಗೆಗಳನ್ನು ಅಲ್ಪಸಂಖ್ಯಾತರ ಪ್ರದೇಶಗಳಲ್ಲಿ ಹಾದುಹೋಗಲು ಅನುಮತಿ ನೀಡಿರುವುದು ಬಹಳಷ್ಟು ಸಂದೇಹಗಳಿಗೆ ಎಡೆಮಾಡಿ ಕೊಡುತ್ತದೆ.. ಇದರ ಜೊತೆಗೆ, ಮಧ್ಯಪ್ರದೇಶದಲ್ಲಿ ಕಾನೂನು ಪ್ರಕ್ರಿಯೆಯಿಲ್ಲದೆ, "ಗಲಭೆಕೋರರು" ಎಂದು ಆರೋಪಿಸಲ್ಪಟ್ಟವರ ಬಹುತೇಕ ಎಲ್ಲಾ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರ ಆಸ್ತಿಗಳನ್ನು ನೆಲಸಮ ಮಾಡಲಾಗಿದೆ. ಇದು ಭಾರತದ ಕಾನೂನನ್ನು ಮತ್ತು ಸಂವಿಧಾನವನ್ನು ಮಟ್ಟಹಾಕುವ ಕೆಲಸವಲ್ಲದೆ ಬೇರೇನೂ ಅಲ್ಲ ಎಂದು ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ. ಏಳು ರಾಜ್ಯಗಳಲ್ಲಿ ಇಂತಹ ಘಟನೆಗಳು ನಡೆದಿದ್ದರೂ ಪ್ರಧಾನಿಗಳು ದಿವ್ಯಮೌನ ತಾಳಿರುವುದು ಈ ಘಟನೆಗಳಿಗೆ ಅಧಿಕಾರದಲ್ಲಿರುವವರ ಕೃಪಾಪೋಷಣೆ ಇದೆ ಎಂಬ ಸೂಚನೆ ಮತ್ತಷ್ಟು ಆತಂಕಕಾರಿ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಧಾರ್ಮಿಕ ಹಬ್ಬಗಳನ್ನು ಕೋಮು ರಾಜಕೀಯವನ್ನು ಉತ್ತೇಜಿಸಲು ಆರ್‌ಎಸ್‌ಎಸ್ ಸಂಘ ಪರಿವಾರ ಬಳಸುವುದನ್ನು ಸಿಪಿಐ(ಎಂ) ಖಂಡಿಸುವುದಾಗಿ ಹೇಳಿರುವ ಪೊಲಿಟ್‌ಬ್ಯುರೊ ಶಾಂತಿ ಕಾಪಾಡಬೇಕು ಮತ್ತು ಧರ್ಮದ ಹೆಸರಿನಲ್ಲಿ ಜನರನ್ನು ವಿಭಜಿಸಲು ಬಯಸುವವರ ಉದ್ದೇಶವನ್ನು ವಿಫಲಗೊಳಿಸಬೇಕು ಎಂದು ಎಲ್ಲ ಜನವಿಭಾಗಗಳಿಗೆ ಮನವಿ ಮಾಡಿದೆ. ಸೂಕ್ತ ಚಟುವಟಿಕೆಗಳ ಮೂಲಕ ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡಲು ಕೆಲಸ ಮಾಡಬೇಕೆಂದು ಅದು ತನ್ನ ಘಟಕಗಳಿಗೆ ಕರೆ ನೀಡಿದೆ.

ಕನಿಷ್ಟ ಬೆಂಬಲ ಬೆಲೆ ಕುರಿತ ಸಮಿತಿ: ಸರಕಾರ ಸ್ಪಷ್ಟೀಕರಣ ಕೊಡುತ್ತಿಲ್ಲವೇಕೆ?–ಸಂಯುಕ್ತ ಕಿಸಾನ್ ಮೋರ್ಚಾ

ಡಿಸೆಂಬರ್ 9, 2021 ರಂದು ಒಕ್ಕೂಟ ಸರಕಾರ ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ) ಕ್ಕೆ ನೀಡಿದ ಲಿಖಿತ ಆಶ್ವಾಸನೆಗಳ ಪತ್ರದಲ್ಲಿ ಎಲ್ಲ ಬೆಳೆಗಳಿಗೆ ಎಲ್ಲ ರೈತರಿಗೆ ಕನಿಷ್ಟ ಬೆಂಬಲ ಬೆಲೆಯ ಪ್ರಶ್ನೆಯನ್ನು ಪರಿಶೀಲಿಸಲು ಒಂದು ಸಮಿತಿಯನ್ನು ನೇಮಿಸಲಾಗುವುದು ಎಂದು ಹೇಳಲಾಗಿತ್ತು. ಆದರೆ ಎಲ್ಲರಿಗೂ ತಿಳಿದಿರುವಂತೆ, ಡಿಸೆಂಬರ್‌ನಲ್ಲಿ ಈ ಸಮಿತಿಯನ್ನು ರಚಿಸಲು ಸರ್ಕಾರ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಇದನ್ನು ಪ್ರತಿಭಟಿಸಲು ಎಸ್‌ಕೆಎಂ ಜನವರಿ 31 ರಂದು ‘ವಿಶ್ವಾಸದ್ರೋಹ ದಿನ’ವನ್ನು ಆಚರಿಸಿತು. ಅದರ ನಂತರ ಸರ್ಕಾರವು ಚುನಾವಣಾ ನೀತಿ ಸಂಹಿತೆಯ ನೆಪವನ್ನು ತನ್ನ ನಿಷ್ಕ್ರಿಯತೆಯನ್ನು ಸಮರ್ಥಿಸಿಕೊಳ್ಳಲು ಒಡ್ಡಿತು. ನಿಜಸಂಗತಿಯೇನೆಂದರೆ, ಚುನಾವಣಾ ನೀತಿ ಸಂಹಿತೆ ಇಂತಹ ಪೂರ್ವ–ಘೋಷಿತ ನಿರ್ಧಾರದ ಅನುಷ್ಠಾನವನ್ನು ನಿಷೇಧಿಸುವುದಿಲ್ಲ.

ಅಂತಿಮವಾಗಿ, ಮಾರ್ಚ್ 22 ರಂದು, ಎಸ್‌ಕೆಎಂ ಸಮನ್ವಯ ಸಮಿತಿಯ ಸದಸ್ಯ ಯುಧ್ವೀರ್ ಸಿಂಗ್ ಅವರಿಗೆ ಕೃಷಿ ಕಾರ್ಯದರ್ಶಿ ಶ್ರೀ. ಸಂಜಯ್ ಅಗರ್ವಾಲ್ ಅವರಿಂದ ಕರೆ ಬಂತು. ಭಾರತ ಸರ್ಕಾರವು ರಚಿಸುವ ಸಮಿತಿಗೆ ಎಸ್‌ಕೆಎಂ ನಿಂದ ಅವರು ಎರಡು ಮೂರು ಹೆಸರುಗಳನ್ನು ಆಹ್ವಾನಿಸಿದರು.

ಆದರೆ ಈ ಕರೆಯಲ್ಲಿ ಅವರು ಈ ಸಮಿತಿಯ ಕುರಿತು ನಿರ್ಣಾಯಕ ವಿವರಗಳನ್ನು, ಅದರ ಸದಸ್ಯರು ಯಾರು, ಅದರ ವಿಷಯವ್ಯಾಪ್ತಿಯೇನು, ಅದಕ್ಕೆ ನೀಡಿರುವ ಕಾರ್ಯದೇಶ ಏನು ಎಂಬ ಬಗ್ಗೆ ಏನೂ ಹೇಳಲಿಲ್ಲ.

ಎಸ್‌ಕೆಎಂ ಮಾರ್ಚ್ 24 ರಂದು ಶ್ರೀ. ಸಂಜಯ್ ಅಗರ್ವಾಲ್ ಅವರಿಗೆ ಇಮೇಲ್‌ನಲ್ಲಿ ಈ ಕೆಳಗಿನ ಸ್ಪಷ್ಟೀಕರಣಗಳನ್ನು ವಿನಂತಿಸಿತು:

1. ಈ ಸಮಿತಿಯ ವಿಷಯವ್ಯಾಪ್ತಿ (**TOR**) ಏನಾಗಿರುತ್ತದೆ?
2. ಸಂಯುಕ್ತ ಕಿಸಾನ್ ಮೋರ್ಚಾವನ್ನು ಹೊರತುಪಡಿಸಿ, ಈ ಸಮಿತಿಯಲ್ಲಿ ಇತರ ಯಾವ ಸಂಸ್ಥೆಗಳು, ವ್ಯಕ್ತಿಗಳು ಮತ್ತು ಪದಾಧಿಕಾರಿಗಳನ್ನು ಸೇರಿಸಿಕೊಳ್ಳಲಾಗುವುದು?
3. ಸಮಿತಿಯ ಅಧ್ಯಕ್ಷರು ಯಾರು ಮತ್ತು ಅದು ಹೇಗೆ ಕಾರ್ಯನಿರ್ವಹಿಸುತ್ತದೆ?
4. ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ಎಷ್ಟು ಸಮಯವನ್ನು ಪಡೆಯುತ್ತದೆ?
5. ಸಮಿತಿಯ ಶಿಫಾರಸಿಗೆ ಸರ್ಕಾರ ಬದ್ಧವಾಗಿದೆಯೇ?

ಮಾರ್ಚ್ 30 ರಂದು ಮತ್ತೊಮ್ಮೆ ಈ ಪತ್ರವನ್ನು ಮರು ಕಳುಹಿಸಲಾಯಿತು. ಆದರೆ, ಇಲ್ಲಿಯವರೆಗೆ ಯಾವುದೇ ಸ್ಪಷ್ಟೀಕರಣ ಬಂದಿಲ್ಲ ಎಂದು ಎಸ್‌ಕೆಎಂ ಹೇಳಿದೆ.

ಈ ಸಮಿತಿಯು ಸ್ಪಷ್ಟ ಮತ್ತು ಪರಸ್ಪರ ಒಪ್ಪಿಗೆಯಾದ ಶರತ್ತುಗಳ ಮೇಲೆ ಮೇಲೆ ರಚನೆಯಾಗಬೇಕು ಎಂದು ತಾನು ನಿರೀಕ್ಷಿಸುವುದಾಗಿ ಎಸ್‌ಕೆಎಂ ಹೇಳಿದೆ. ಈ ಸಮಿತಿಯ ಸ್ವರೂಪ ಮತ್ತು ಕಾರ್ಯಸೂಚಿಯ ಬಗ್ಗೆ ನಮಗೆ ಸಂಪೂರ್ಣವಾಗಿ ತಿಳಿಯದೆ, ಹೊರತು, ಅಂತಹ ಯಾವುದೇ ಸಮಿತಿಯಲ್ಲಿ ಭಾಗವಹಿಸುವುದು ನಿರರ್ಥಕ ಎಸ್‌ಕೆಎಂ ಸ್ಪಷ್ಟ ಪಡಿಸಿದೆ.

ಎಪ್ರಿಲ್ 1 ರಂದು ನೀಡಿರುವ ಈ ಹೇಳಿಕೆಗೆ ಎಸ್‌ಕೆಎಂ ನ ಅಖಿಲ ಭಾರತ ಮುಖಂಡರಾದ ಡಾ. ದರ್ಶನ್ ಪಾಲ್, ಹನ್ನನ್ ಮೊಲ್ಲಾ, ಜಗಜಿತ್ ಸಿಂಗ್ ದಲ್ಲೆವಾಲ್, ಜೋಗಿಂದರ್ ಸಿಂಗ್ ಉಗ್ರನ್, ಶಿವಕುಮಾರ್ ಶರ್ಮಾ (ಕಾಕ್ಕಾ ಜಿ), ಯುಧ್ವೀರ್ ಸಿಂಗ್, ಮತ್ತು ಯೋಗೇಂದ್ರ ಯಾದವ್ ಸಹಿ ಹಾಕಿದ್ದಾರೆ.

ಶಿಕ್ಷಣ ಸಂಸ್ಥೆಗಳ ಆವರಣಗಳಲ್ಲಿ ಕೋಮುವಾದಿ ಪ್ರಚಾರವನ್ನು ತಿರಸ್ಕರಿಸಿ! ಎಬಿವಿಪಿಯ ವಿಭಜಕ ತಂತ್ರಗಳ ವಿರುದ್ಧ ಒಂದಾಗಿ–ಎಸ್‌ಎಫ್‌ಐ ಕರೆ

ಎಪ್ರಿಲ್ 11 ರಂದು ಎಬಿವಿಪಿ ಗೂಂಡಾಗಳು ಜೆಎನ್‌ಯು ಕ್ಯಾಂಪಸ್‌ನಲ್ಲಿ ಹಿಂಸಾತ್ಮಕ ವಾತಾವರಣವನ್ನು ಸೃಷ್ಟಿಸಿ ತಮ್ಮ ದ್ವೇಷರಾಜಕಾರಣ ಮತ್ತು ವಿಭಜಕ ಅಜೆಂಡಾದ ಸಂಪೂರ್ಣ ಪ್ರದರ್ಶನವನ್ನು ನೀಡಿದ್ದಾರೆ ಎಂದು ಎಸ್‌ಎಫ್‌ಐ ಕೇಂದ್ರ ಕಾರ್ಯಕಾರಿ ಸಮಿತಿ ಹೇಳಿದೆ. ಅಂದು ಸಂಜೆಯಿಂದ ಎಬಿವಿಪಿಯವರು ಹಾಸೆಲಿನಲ್ಲಿ ಊಟದ ಮೆನು ಬದಲಾಯಿಸುವಂತೆ ಮೆಸ್ ಸಮಿತಿಯ ಮೇಲೆ ದಾಳಿ ನಡೆಸಿದರು ಮತ್ತು ಎಲ್ಲಾ ವಿದ್ಯಾರ್ಥಿಗಳಿಗೂ ಸಾಮಾನ್ಯವಾಗಿ ಉಣಬಡಿಸುತ್ತಿದ್ದ ಮಾಂಸದ ಅಡುಗೆಗಳನ್ನು ಮಾಡಬಾರದು ಎಂದು ಒತ್ತಡ ಹಾಕಿದರು. ಹಾಸ್ಟೆಲ್‌ಗಳಾದ್ಯಂತ ಯಾವಾಗಲೂ ಸಸ್ಯಾಹಾರಿ ಮತ್ತು ಮಾಂಸಾಹಾರಿ ವಿದ್ಯಾರ್ಥಿಗಳಿಗೆ ಆಹಾರ ಪದಾರ್ಥಗಳನ್ನು ನೀಡಲಾಗುತ್ತದೆ, ವಿದ್ಯಾರ್ಥಿಗಳು ವರ್ಷವಿಡೀ ತಮ್ಮ ವೈಯಕ್ತಿಕ ಆಯ್ಕೆಯ ಆಧಾರದ ಮೇಲೆ ಅದನ್ನು ಸೇವಿಸಬಹುದಾಗಿದೆ.

ವಿದ್ಯಾರ್ಥಿಗಳು ಇಂತಹ ಅನೈತಿಕ ಪೋಲೀಸ್‌ಗಿರಿಯ ವಿರುದ್ಧ ನಿಂತಾಗ, ಎಬಿವಿಪಿ ಸಂಪೂರ್ಣ ಗದ್ದಲವನ್ನು ಸೃಷ್ಟಿಸಲು ಮತ್ತು ಕ್ಯಾಂಪಸ್ ಅನ್ನು ಕೋಮುಗ್ರಸ್ತಗೊಳಿಸುವ ಹಿಂದುತ್ವದ ಅಜೆಂಡಾವನ್ನು ಬಲಪಡಿಸಲು ಭುಜಬಲವನ್ನು ಬಳಸಲು ಗೂಂಡಾಗಿರಿ ನಡೆಸಲು ಆರಂಭಿಸಿತು. ವಿದ್ಯಾರ್ಥಿಗಳು ಹಾಗೂ ಭದ್ರತಾ ಸಿಬ್ಬಂದಿಯ ಮೇಲೆ ಹಲ್ಲೆಗಳು ನಡೆದಿದ್ದು ಹಲವಾರು ವಿದ್ಯಾರ್ಥಿಗಳು ಗಾಯಗೊಂಡರು.

ವಿಭಿನ್ನ ಭೌಗೋಳಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯ ವಿದ್ಯಾರ್ಥಿಗಳು ವಿಭಿನ್ನ ಆಹಾರದ ಆದ್ಯತೆಗಳನ್ನು ಹೊಂದಿದ್ದಾರೆ, ಎಬಿವಿಪಿಯ ಈ ಕೃತ್ಯ ಜೆಎನ್‌ಯು ನಂತಹ ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ಜಾಗಗಳನ್ನು ನಾಶಮಾಡುವ ಅವರ ಸಂಕುಚಿತ ರಾಜಕೀಯ ಮತ್ತು ಬಲಪಂಥೀಯ ಹಿಂದುತ್ವದ ಅಜೆಂಡಾವನ್ನು ಸೂಚಿಸುತ್ತದಷ್ಟೇ ಎಂದಿರುವ ಎಸ್‌ಎಫ್‌ಐ ಕೇಂದ್ರ ಕಾರ್ಯಕಾರಿ ಮಂಡಳಿ ಮತ್ತೆ–ಮತ್ತೆ ಇಂತಹ ಘಟನೆಗಳ ಮೂಲಕ ವೈವಿಧ್ಯತೆಗೆ ಕುತ್ತು ತರುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂದು ಖೇದ ವ್ಯಕ್ತಪಡಿಸಿದೆ.

ಶೈಕ್ಷಣಿಕ ಆವರಣಗಳಲ್ಲಿ ಎಬಿವಿಪಿಯ ಕೋಮುವಾದಿ ಮತ್ತು ವಿಭಜಕ ತಂತ್ರಗಳ ವಿರುದ್ಧ ಒಗ್ಗಟ್ಟಾಗಿ ನಿಲ್ಲುವಂತೆ ಎಸ್‌ಎಫ್‌ಐ ಪ್ರಧಾನ ಕಾರ್ಯದರ್ಶಿ ಮಯೂಖ್ ಬಿಸ್ವಾಸ್ ಮತ್ತು ಅಧ್ಯಕ್ಷ ವಿ.ಪಿ.ಸಾನು ವಿದ್ಯಾರ್ಥಿ ಸಮುದಾಯಕ್ಕೆ ಮನವಿ ಮಾಡಿದ್ದಾರೆ.

ಸಂಪಾದಕೀಯ

ಬಲಿಪೀಠವಾದ ಭ್ರಷ್ಟ ಸರ್ಕಾರ

ಸರಕಾರ ಅಭಿವೃದ್ಧಿ ಯೋಜನೆಗಳ ಜಾರಿಯಲ್ಲಿ ಸಾರ್ವಜನಿಕ ಕಾಮಗಾರಿಗಳನ್ನು ಗುತ್ತಿಗೆ ನೀಡುವುದು ಪ್ರಮುಖ ವಿಧಾನವಾಗಿದೆ. ಸಾವಿರಾರು ಕೋಟಿ ರೂ.ಗಳ 'ಆದಾಯ' ತರುವ ಲೋಕೋಪಯೋಗಿ, ಪಂಚಾಯತ್ ಮುಂತಾದ ಇಲಾಖೆಗಳನ್ನು ಪಡೆಯಲು ಸಚಿವಾಕಾಂಕ್ಷಿ ಗಳಲ್ಲಿ ವಿಪರೀತ ಸ್ಪರ್ಧೆ ಮತ್ತು ಪಕ್ಷಪಾತ ಇದ್ದೇ ಇರುತ್ತದೆ. ಇಲಾಖೆಯ ಸಚಿವರು ಮತ್ತು ಅಧಿಕಾರಿಗಳು ಅಭಿವೃದ್ಧಿ ಯೋಜನೆಗಳನ್ನು ತಮ್ಮವರಿಗೇ ಗುತ್ತಿಗೆ ಕೊಡಲು ಬಯಸುತ್ತಾರೆ. ಸರಕಾರದಲ್ಲಿ ಯಾವುದೇ ಕಾಮಗಾರಿಗಳನ್ನು ಗುತ್ತಿಗೆ ಕೊಡುವಾಗ ಖಚಿತವಾದ ಹಲವಾರು ರೀತಿ ನೀತಿ ನಿಯಮಗಳೇನೋ ಇವೆ. ಆದರೆ ವಾಸ್ತವದಲ್ಲಿ ಲಿಖಿತ ಆದೇಶ ಇಲ್ಲದಿದ್ದರೂ ಕಾಮಗಾರಿಗಳನ್ನು ನಡೆಸುವುದು ನಂತರದಲ್ಲಿ ಅದರ ಬಿಲ್ ಮೊತ್ತವನ್ನು ಪಡೆಯುವ ಪದ್ಧತಿ ಇರುವುದನ್ನು ಎಲ್ಲಾ ಸರಕಾರಗಳಲ್ಲಿದ್ದ ಸಚಿವರೇ ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ. ಒಂದೆಡೆ, ಮುಖ್ಯವಾಗಿ, ಇಲಾಖಾ ಮಂತ್ರಿ, ಇಲಾಖೆಯ ಉನ್ನತ ಅಧಿಕಾರಿಗಳು ಮತ್ತು ಗುತ್ತಿಗೆದಾರರ ನಡುವೆ ಅಲಿಖಿತವಾದ ಒಪ್ಪಂದಗಳು ಇರುತ್ತವೆ. ಕಾಮಗಾರಿಗಳ ಹಣವನ್ನು ಪಡೆಯಲು ಒಂದು ಒಳ ತಿಳುವಳಿಕೆಯನ್ನು ಕಾಯ್ದುಕೊಳ್ಳುವುದು ಅವರಿಗೆ ಅನಿವಾರ್ಯವಾಗಿರುತ್ತದೆ. ಹೀಗಾಗಿ ಸಚಿವರು, ಅವರ ಆಪ್ತರುಗಳೇ ಇಂತಹ ಗುತ್ತಿಗೆಗಳನ್ನು ಪಡೆಯುವುದು ಸಾಮಾನ್ಯವಾಗಿ ಬಿಟ್ಟಿದೆ. ಇಂತಹ ಅನೈತಿಕ ದಂಧೆ ಒಪ್ಪಿತ ನಿಯಮದಂತೆ ನಡೆಯುತ್ತಿರುವುದೇ ಇಂದಿನ ನಮ್ಮ ರಾಜಕೀಯ ಮತ್ತು ಆಡಳಿತಾತ್ಮಕ ವ್ಯವಸ್ಥೆಯ ಅಧಃಪತನವನ್ನು ಎತ್ತಿ ತೋರಿಸುತ್ತದೆ. ನಾಯಕರನ್ನು ನಂಬಿ ಬದುಕು ಕಟ್ಟಿಕೊಳ್ಳಲು ಯತ್ನಿಸಿದವರು ಹೆಣವಾಗುತ್ತಿರುವ ದುರಂತ ಪ್ರಕರಣಗಳು ರಾಜ್ಯದಲ್ಲಿ ಮರು ಕಳಿಸುತ್ತಿವೆ.

'ನ ಖಾವೂಂಗಾ ಖಾನೇ ದೂಂಗಾ' ಎಂದು ದೊಡ್ಡ ಗಂಟಲಲ್ಲಿ ಹೇಳಿದ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ರವರ ಆಡಳಿತದ ಅಡಿಯಲ್ಲಿಯೇ ಕೇಂದ್ರ ಮತ್ತು ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಭ್ರಷ್ಟ ಹಗರಣಗಳು ಪುಂಖಾನುಪುಂಖವಾಗಿ ಹೊರಬರುತ್ತಲೇ ಇವೆ. ಕರ್ನಾಟಕದಲ್ಲಿ ಗುತ್ತಿಗೆ ಕಾಮಗಾರಿಗಳ ಮೊತ್ತ ಪಡೆಯಲು ಅದರ ಶೇ. 40ರಷ್ಟು ಹಣವನ್ನು ಮಂತ್ರಿ, ಮಹೋದಯರಿಗೆ ಲಂಚವಾಗಿ ನೀಡಬೇಕೆಂಬ ಅಲಿಖಿತ ನಿಯಮವನ್ನು ವಿಧಿಸಲಾಗಿದೆ. ಅಷ್ಟು ಹಣವನ್ನು ಕೊಡದೇ ಯಾವುದೇ ಬಿಲ್ಲುಗಳೂ ಪಾಸಾಗುತ್ತಿಲ್ಲ. ಆದ್ದರಿಂದ ಕೂಡಲೇ ಮಧ್ಯಪ್ರವೇಶಿಸಿ ಹಣ ಕೊಡಿಸಿ ಎಂದು ಕೇಳಿ ವಿವರವಾದ ದೂರನ್ನು ಕರ್ನಾಟಕದ ಗುತ್ತಿಗೆದಾರರ ಸಂಘದ ಅಧ್ಯಕ್ಷರಾದ ಕೆಂಪಣ್ಣನವರು ನೇರವಾಗಿ ಪ್ರಧಾನಿಗೆ ಪತ್ರ ಬರೆದು ಕ್ರಮವಹಿಸುವಂತೆ ಈ ಹಿಂದೆಯೇ ಕೋರಿದ್ದರು. ಈ ಬಗ್ಗೆ ಪ್ರಧಾನಿಯವರ ದೀರ್ಘ ಮೌನದ ಅರ್ಥವೇನು? ಹಿಂದಿದ್ದ ಕಾಂಗ್ರೆಸ್, ಜೆಡಿಎಸ್ ಸರ್ಕಾರ ಶೇ.10ರ ಸರ್ಕಾರ ಎಂದು ಹೇಳಿದ್ದ ಮೋದಿಯವರು ತಮ್ಮ ಆಡಳಿತದಲ್ಲಿ ಅದು ಶೇ.40ಕ್ಕೆ ಹೆಚ್ಚಿಸಿರುವುದು ಪ್ರಗತಿಯ ಸೂಚ್ಯಂಕವೇ? ಇಲ್ಲಿ ಪ್ರಧಾನಿಯವರ ಮೌನ ಸಮ್ಮತಿ ತಿಳಿಯದ್ದೇನಲ್ಲ.

ಇದೀಗ ಪಂಚಾಯಿತಿ ಇಲಾಖೆಯಲ್ಲಿ ಅಭಿವೃದ್ಧಿ ಕಾಮಗಾರಿಯನ್ನು ಮಾಡಿದ ಬೆಳಗಾವಿ ಜಿಲ್ಲೆಯ ಗುತ್ತಿಗೆದಾರ ಸಂತೋಷ್ ಪಾಟೀಲ್ ಅವರ ಆತ್ಮಹತ್ಯೆ ಎನ್ನಲಾಗುವ ಕೊಲೆ ಈ ಸರ್ಕಾರದ ಅಮಾನವೀಯ ಮತ್ತು ಭ್ರಷ್ಟತೆಯ ಕರಾಳ ಮುಖವನ್ನು ತೆರೆದು ತೋರಿಸಿದೆ. ಮಾಡಲಾದ ಕಾಮಗಾರಿಯ ಸುಮಾರು 4 ಕೋಟಿ ರೂ.ಗಳ ಬಿಲ್ಲಿನ ಹಣ ಪಾವತಿಸಲು ಶೇ.40 ಲಂಚವಾಗಿ ಕೊಟ್ಟರೆ ಮಾತ್ರ ಹಣವನ್ನು ಬಿಡುಗಡೆ ಮಾಡುವುದಾಗಿ ಹಾಕಲಾದ ಶರತ್ತಿನ ಉರುಳು ಅವರನ್ನು ಬಲಿ ತೆಗೆದುಕೊಂಡಿದೆ. ಇದನ್ನು ಸ್ವತ ಸಚಿವ ಕೆ.ಎಸ್. ಈಶ್ವರಪ್ಪ ನವರೇ ಕೇಳಿರುವುದಾಗಿ ಸಾವಿಗೀಡಾದ ಸಂತೋಷ್ ಪಾಟೀಲ್ ಅವರು ಬರೆದ ಡೆತ್ ನೋಟ್ ನಲ್ಲಿದೆ. ಸಾಲಸೋಲ ಮಾಡಿ ಕಾಮಗಾರಿಗಳನ್ನು ನಡೆಸಿರುವ ಅವರು ಶೇ 40 ಎಂದರೆ ಸುಮಾರು 1.6 ಕೋಟಿ ಯಷ್ಟು ಹಣ ಲಂಚವಾಗಿ ನೀಡಿದರೆ ಉಳಿಯುವುದಾದರೂ ಏನು? ಅದನ್ನು ಹೊಂದಿಸುವುದು ಹೇಗೆ ಎನ್ನುವ ಪ್ರಶ್ನೆ ಸಹಜವಾಗಿ ಕಾಡಿದೆ. ಸಚಿವ ಈಶ್ವರಪ್ಪನವರು ಎಳ್ಳಷ್ಟು ಕರಗದಿರುವಾಗ ತೀರಾ ಅನಿವಾರ್ಯವಾಗಿ ವಸ್ತುಸ್ಥಿತಿ ವಿವರಿಸಿ ತನ್ನ ನೆಚ್ಚಿನ ಪ್ರಧಾನಮಂತ್ರಿಗಳ ಗಮನಕ್ಕೂ ಪತ್ರಮುಖೇನ ತಂದಿದ್ದಾರೆ. ರಾಜ್ಯದ ಮುಖ್ಯಮಂತ್ರಿಯಾಗಲಿ, ಪ್ರಧಾನಿಯಾಗಲೀ ಕ್ರಮ ವಹಿಸದೇ ಇರುವಾಗ, ದೂರು ಕೊಟ್ಟ ತನ್ನ ಮೇಲೆಯೇ ಕೇಸು ದಾಖಲಾದ ಹಿನ್ನೆಲೆಯಿಂದಾಗಿ ದಿಕ್ಕುಕಾಣದೆ ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆ ಇದೆ. ತೆರೆಯ ಮರೆಯಲ್ಲಿ ನಡೆದು ಹೋಗುವ ಇಂತಹ ಪ್ರಸಂಗಗಳು ಜಗಜ್ಜಾಹೀರಾಗಿ ಹೋಗಿರುವಾಗ ಸಂಭವಿಸಿರುವ ಸಂತೋಷ್ ಅವರ ಸಾವು ಆತ್ಮಹತ್ಯೆಯೋ ಕೊಲೆಯೋ ಎನ್ನುವ ಪ್ರಶ್ನೆ ಹಾಕಿದೆ. ತನ್ನ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾದ ಸಂತೋಷ್ ಪಾಟೀಲನ ಸಂಕಟವನ್ನು ಕಿವಿಗೇ ಹಾಕಿಕೊಳ್ಳದ ಬಿಜೆಪಿಯದ್ದು ಕ್ರಿಮಿನಲ್ ವರ್ತನೆ. ಇವರ ಹಿಂದುತ್ವ, ದೇಶಪ್ರೇಮ ಎನ್ನುವುದು ಧನದಾಹದ ಲೂಟಿಯಲ್ಲಿ ಗಿಲೀಟಿನ ಮಾತುಗಳು, ಮೂರುಕಾಸಿಗೂ ಬೆಲೆ ಇಲ್ಲದ್ದು ಎನ್ನುವುದನ್ನು ನಾಯಕರು ನಿದರ್ಶಿಸಿದ್ದಾರೆ.

ಪ್ರಕರಣ ಇಷ್ಟು ಸ್ಪಷ್ಟವಾಗಿರುವಾಗ ಈಶ್ವರಪ್ಪನವರ ಭಾಗಿತ್ವ ಆತ್ಮಹತ್ಯೆಗೂ ಮೊದಲು ಸಂತೋಷ್ ಬರೆದು ಕಳುಹಿಸಿದ ಸಂದೇಶ ಸಂದರ್ಭಗಳ ಸಾಕ್ಷ್ಯ ಈಶ್ವರಪ್ಪನವರತ್ತಲೇ ಬೆಟ್ಟು ಮಾಡುತ್ತಿವೆ. ಆದರೆ ಆರೋಪ ಬಂದಾಗ ಈಶ್ವರಪ್ಪನವರು ನಿರಾಕರಿಸಿದ್ದು ಮಾತ್ರವಲ್ಲ, ಕಾಮಗಾರಿಯೇ ನಡೆದಿಲ್ಲ ಎನ್ನುವ ಮಟ್ಟಕ್ಕೆ ಹೋಗಿದ್ದು ಭಂಡತನ ಪರಮಾವಧಿ. ಸಚಿವ ನಿರಾಣಿ ಮಾಜಿ ಸಚಿವ ರಮೇಶ್ ಜಾರಕಿಹೊಳಿ ಈ ಪ್ರಕರಣದ ಪ್ರತಿ ವಿವರಗಳು ತಮಗೆ ಗೊತ್ತು ಎಂದು ಬಹಿರಂಗವಾಗಿಯೇ ಹೇಳಿದ್ದಾರೆ. ಹೀಗಿರುವಾಗ ವಾಟ್ಸಪ್ ಸಂದೇಶಕ್ಕೆ ಸಾಕ್ಷಿ ಕೇಳುವುದು ವಂಚಕತನ ವಾಗಿದೆ.

ಉಡುಪಿಯಲ್ಲಿ ಸಂತೋಷ್ ಸಾವು ಮತ್ತು ಇದಕ್ಕೆ ಈಶ್ವರಪ್ಪನವರಿಗಿದ್ದ ನಂಟು ಹೊರ ಬರುತ್ತಿರುವಂತೆ ರಾಜೀನಾಮೆ ಕೊಟ್ಟು ವಸ್ತುನಿಷ್ಠ ತನಿಖೆಗೆ ತನ್ನನ್ನು ಒಡ್ಡಿಕೊಳ್ಳಬೇಕಿತ್ತು. ಅಂತಹ ನೈತಿಕ ಸೂಕ್ಷ್ಮತೆಯನ್ನು ತೋರಿಸದಿರುವುದು ರಾಜೀನಾಮೆ ನೀಡಲು ಸಾರ್ವಜನಿಕ ಒತ್ತಡ ಹೆಚ್ಚಾದ ಬಳಿಕವೂ ಅದಕ್ಕೆ ತಲೆಬಾಗದೆ ಇರುವುದು ಖಂಡನೀಯ. ಪ್ರಕರಣದ ವಿವರಗಳು ಇನ್ನಷ್ಟು ಬಯಲಾಗುವ ಮತ್ತು ಸಮರ್ಥಿಸಿಕೊಳ್ಳಲು ಅಸಾಧ್ಯವೆನಿಸುವ ಸ್ಥಿತಿ ಬಂದಾಗ ಅನಿವಾರ್ಯವಾಗಿ ರಾಜೀನಾಮೆ ಕೊಡಲು ಹೈಕಮಾಂಡ್ ಸೂಚಿಸಿ ಕೆಳಗಿಳಿಸ ಬೇಕಾಗಿ ಬಂತು. ವಿಚಿತ್ರವೆಂದರೆ ಈಶ್ವರಪ್ಪನವರ ಒಳಹೊರಗು ಎಲ್ಲವೂ ಗೊತ್ತಿರುವ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರು ಇಂತಹ ಭ್ರಷ್ಟ ನೈತಿಕ ಅಧಃಪತನದ ಸಮರ್ಥನೆ ಮಾಡಿಕೊಳ್ಳಲು ಮುಂದಾಗಿದ್ದು ಜವಾಬ್ದಾರಿಯುತ ಸ್ಥಾನ ಹೊಂದಿರುವ ಅವರ ವ್ಯಕ್ತಿತ್ವಕ್ಕೆ ಕಳಂಕ ತಂದಿದೆ. ರಾಜೀನಾಮೆ ಕೊಡುವಾಗಲೂ ಎಳ್ಳಷ್ಟೂ ಅಳುಕು ತೋರದ ಈಶ್ವರಪ್ಪ ವಿಚಾರಣೆ ಬಳಿಕ ಆರೋಪದಿಂದ ಮುಕ್ತರಾಗುವುದಾಗಿ ವಿಚಾರಣೆಗೆ ಮೊದಲೇ ಭರವಸೆಯ ತೀರ್ಪು ನೀಡುವ ಮುಖ್ಯಮಂತ್ರಿಗಳು, ಗೃಹ ಮಂತ್ರಿಗಳು ಈ ಪ್ರಕರಣವನ್ನು ಅಧಿಕಾರ ಬಳಸಿ ಮುಚ್ಚಿಹಾಕುವ ಹವಣಿಕೆ ಇರುವುದನ್ನು ಬಯಲುಗೊಳಿಸಿದೆ. ಹೀಗೆ ಪಡೆಯುವ ಶೇ 40ರಲ್ಲಿ ಇಂತಹವರ ಪಾಲೆಷ್ಟು ಎನ್ನುವ ಪ್ರಶ್ನೆಯೂ ಎದುರಾಗಿದೆ.

ಅನೈತಿಕ ಮಾರ್ಗದಿಂದ ಅಧಿಕಾರಕ್ಕೇರಿದ ಬಿಜೆಪಿಯ ಒಟ್ಟು ಆಡಳಿತದ ಅವಧಿಯಲ್ಲಿ ನಡೆದಿರುವ ಹಗರಣಗಳು, ಭ್ರಷ್ಟತೆಯ ಪ್ರಕರಣಗಳು ಮತ್ತು ಅನೈತಿಕ ವ್ಯವಹಾರಗಳನ್ನು ನೋಡಿದರೆ ಈ ಸರ್ಕಾರ ಕ್ಷಣಾರ್ಧದಲ್ಲಿ ಅಧಿಕಾರದಲ್ಲಿ ಮುಂದುವರಿಯುವ ನೈತಿಕತೆಯನ್ನು ಎಂದೋ ಕಳೆದುಕೊಂಡಿದೆ.

ಇತ್ತೀಚೆಗೆ ನಡೆದ 585 ಪೊಲೀಸ್ ಸಬ್ ಇನ್ಸ್ಪೆಕ್ಟರ್‌ಗಳ ಹುದ್ದೆಗಳ ಆಯ್ಕೆಯಲ್ಲಿ ನಡೆದ ಭಾರಿ ಭ್ರಷ್ಟಾಚಾರದ ಹಗರಣದಲ್ಲಿ ಬಿಜೆಪಿಯ ಪ್ರಮುಖ ದಿವ್ಯಾ ಹಾಗರಗಿ ಎಂಬ ನಾಯಕಿ ಕೇಂದ್ರವಾಗಿರುವುದು ಮತ್ತು

ಪುಟ 4 ಕ್ಕೆ

ಜಿ.ವಿ. ಶ್ರೀರಾಮರೆಡ್ಡಿಯವರಿಗೆ ಸಿಪಿಐ(ಎಂ) ಶ್ರದ್ಧಾಂಜಲಿ



ಎರಡು ಬಾರಿ ವಿಧಾನ ಸಭೆಯಲ್ಲಿ ಸಿಪಿಐ(ಎಂ) ಪಕ್ಷದ ಶಾಸಕರಾಗಿದ್ದ ಮತ್ತು ಸಿಪಿಐ(ಎಂ) ಪಕ್ಷದ ಮಾಜಿ ಕೇಂದ್ರ ಸಮಿತಿ ಸದಸ್ಯರು ಹಾಗೂ ರಾಜ್ಯ ಸಮಿತಿ ಕಾರ್ಯದರ್ಶಿ ಗಳಾಗಿ ಕಾರ್ಯ ನಿರ್ವಹಿಸಿದ್ದ ಜಿ.ವಿ. ಶ್ರೀರಾಮರೆಡ್ಡಿಯವರು ನೆನ್ನೆ (ಏಪ್ರಿಲ್ 15, 2022) ಬೆಳಿಗ್ಗೆ ಹೃದಯಾಘಾತದಿಂದ ನಿಧನರಾಗಿರುತ್ತಾರೆ. ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯು ಅಗಲಿದ ಜಿ.ವಿ.ಎಸ್. ಅವರಿಗೆ ತನ್ನ ಭಾವ ಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ. ಅದೇ ರೀತಿ, ಅವರ ಅಗಲಿಕೆಯಿಂದ ದುಃಖತಪ್ತರಾದ ಅವರ ಕುಟುಂಬದ ಸದಸ್ಯರು, ದೊಡ್ಡ ಸಂಖ್ಯೆಯ ಬೆಂಬಲಿಗರು, ಅಪಾರ ಅಭಿಮಾನಿಗಳಿಗೆ ತನ್ನ ಸಂತಾಪವನ್ನು ಸಲ್ಲಿಸುತ್ತದೆ.

ಜಿ.ವಿ. ಶ್ರೀರಾಮರೆಡ್ಡಿಯವರು ವಿದ್ಯಾರ್ಥಿ ದೆಸೆಯಲ್ಲಿಯೇ ಮಾರ್ಕ್ಸ್‌ವಾದ ಹಾಗೂ ಲೆನಿನ್ ವಾದಕ್ಕೆ ಆಕರ್ಷಿತರಾಗಿ, ಚಳುವಳಿಗೆ ಧುಮುಕಿದವರು.

ರಾಜ್ಯದಲ್ಲಿ ಪ್ರಗತಿಪರ, ಪ್ರಜಾಸತ್ತಾತ್ಮಕ ವಿದ್ಯಾರ್ಥಿ(SFI) ಹಾಗೂ ಯುವಜನ (DYFI) ಚಳುವಳಿಯ ಸಂಸ್ಥಾಪನಾ ಮುಖಂಡರಾಗಿದ್ದವರು ಮತ್ತು ರೈತ ಚಳುವಳಿ (KPRS) ಬೆಳವಣಿಗೆಯಲ್ಲಿ ತೊಡಗಿಸಿಕೊಂಡಿದ್ದರು. ಭೂಮಿ ಹೋರಾಟದಲ್ಲಿ ಜೈಲು ವಾಸವನ್ನು ಅನುಭವಿಸಿದ್ದರು.

ಮುಖ್ಯವಾಗಿ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ನೆಲೆ ಹೊಂದಿದ್ದ ಕಮ್ಯೂನಿಸ್ಟ್ ಪ್ರಭಾವವನ್ನು ಉಳಿಸಿಕೊಂಡು ಬೆಳೆಸುವಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು. ಇದರ ಪರಿಣಾಮವಾಗಿ ವಿಧಾನ ಸಭೆಯಲ್ಲಿ ಎರಡು ಬಾರಿ ಸಿಪಿಐ(ಎಂ) ಪಕ್ಷದ ಶಾಸಕರಾಗಿ ರಾಜ್ಯದ ದುಡಿಯುವ ಜನರ ಪರವಾದ ಬಲವಾದ ಧ್ವನಿಯಾಗಿದ್ದರು.

ಬೆಂಗಳೂರು ನಗರದ ಲಕ್ಷಾಂತರ ಕೋಟಿ ರೂ ಮೌಲ್ಯದ ಸರಕಾರಿ ಜಮೀನಿನ ಭೂ ಕಬಳಿಕೆಯ ಭೂ ಮಾಫಿಯಾದ ವಿರುದ್ಧ ದೃಢವಾದ ಧ್ವನಿ ಎತ್ತಿದವರು ಮಾತ್ರವಲ್ಲಾ, ಶ್ರೀ ಎ.ಟಿ. ರಾಮಸ್ವಾಮಿ ನೇತೃತ್ವದ ಸದನದ ಸಮಿತಿ ಸದಸ್ಯರಾಗಿ ಕಾರ್ಯ ನಿರ್ವಹಿಸಿದರು.

ಬಳ್ಳಾರಿ ಗಣಿ ಮಾಫಿಯಾದ ವಿರುದ್ಧ ಬಲವಾದ ಚಾಟಿ ಬೀಸಿದವರು.

ಸಿಪಿಐ(ಎಂ) ಮುತುವರ್ಜಿಯಲ್ಲಿ ರಾಜ್ಯದ ಸಮಗ್ರ ನೀರಾವರಿಗಾಗಿ ಮತ್ತು ನೀರಾವರಿ ತಜ್ಞರಾದ ಡಾ.ಪರಮಶಿವಯ್ಯ ರವರ ವರದಿ ಜಾರಿಗಾಗಿ ಸಂಘಟಿಸಲಾದ ವಿಶಾಲ ಐಕ್ಯ ಚಳುವಳಿಯಲ್ಲಿ ಬಾಗೇಪಲ್ಲಿಯಿಂದ ಸಾವಿರಾರು ಜನರ ಪಾದಯಾತ್ರೆಯನ್ನು ಸಂಘಟಿಸಿದರು.

ಅದೇ ರೀತಿ, ನೀಚ, ಜಾತಿ ತಾರತಮ್ಯವನ್ನು ಮೆರೆಯುತ್ತಿದ್ದ ,ಮಡೆ, ಮಡೆ ಸ್ನಾನ ಮತ್ತು ಉಡುಪಿ ಶ್ರೀ ಕೃಷ್ಣ ಮಠದ ಪಂಕ್ತಿ ಭೇದವನ್ನು ವಿರೋಧಿಸಿ ನಡೆಸಲಾದ ಸಿಪಿಐ(ಎಂ) ರಾಜ್ಯ ಮಟ್ಟದ ಹೋರಾಟದ ನೇತೃತ್ವ ವಹಿಸಿದ್ದರು.

ಬಾಗೇಪಲ್ಲಿ ಶಾಸಕರಾಗಿ ಅವರು ಅದರ ಅಭಿವೃದ್ಧಿಗಾಗಿ ಕೈಗೊಂಡ ಕಾರ್ಯಗಳು ಜನ ಮಾನಸದಲ್ಲಿ ಅಚ್ಚಳಿಯದೇ ಉಳಿದಿವೆ.

ಅವರ ರಾಜಕೀಯ ಹಾಗೂ ಸಂಘಟನಾ ಮತ್ತಿತರೆ ತಪ್ಪಾದ ನಡವಳಿಕೆಗಳಿಂದಾಗಿ ಸಿಪಿಐ(ಎಂ) ಅವರನ್ನು ಉಚ್ಚಾಟಿಸಿದ ನಂತರ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪ್ರಜಾ ಸಂಘರ್ಷ ಸಮಿತಿಯನ್ನು ಸ್ಥಾಪಿಸಿ ನೇತೃತ್ವ ವಹಿಸಿದ್ದರು.

ಅಂತಿಮ ನಮನ

ಮಾಜಿ ಶಾಸಕ ಕಾಂ. ಜಿ.ವಿ ಶ್ರೀರಾಮರೆಡ್ಡಿಯವರು ಎಪ್ರಿಲ್ 15 ರಂದು ಮನೆಯಲ್ಲಿರುವಾಗಲೇ ಬೆಳಗ್ಗೆ 6 ಗಂಟೆ ಸುಮಾರಿಗೆ ತೀವ್ರ ಹೃದಯಾಘಾತಕ್ಕೆ ಒಳಗಾದರು. ಅವರನ್ನು ತಕ್ಷಣ ಆಸ್ಪತ್ರೆಗೆ ಕೊಂಡೊಯ್ಯಲಾಯಿತಾದರೂ ಉಳಿಸಿಕೊಳ್ಳಲಾಗಲಿಲ್ಲ.

ನಂತರ ಅಂತಿಮ ದರ್ಶನಕ್ಕೆ ಬಾಗೇಪಲ್ಲಿಯ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ಪಾರ್ಥಿವ ಶರೀರವನ್ನು ಇಡಲಾಗಿತ್ತು. ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಕಾಂ. ಯು. ಬಸವರಾಜ್ ಹಾಗೂ ರಾಜ್ಯ ಸಮಿತಿಯ ಮುಖಂಡರು



ಪಾಲ್ಗೊಂಡು ಶ್ರದ್ಧಾಂಜಲಿ ಅರ್ಪಿಸಿದರು.

ಅವರ ಅಪಾರ ಅಭಿಮಾನಿಗಳು ಜನಚಳುವಳಿಯ ನಾಯಕರು, ವಿವಿಧ ಪಕ್ಷಗಳ ಹಾಗೂ ಸಮಾಜದ ಗಣ್ಯರು ಅಂತಿಮ ನಮನ ಸಲ್ಲಿಸಿದರು.

ಅವರ ಅಂತ್ಯಕ್ರಿಯೆ ಹುಟ್ಟೂರಾದ ಚಿಂತಾಮಣಿಯ ಬೈರಾಬಂಡ ಗ್ರಾಮದಲ್ಲಿ ಸರ್ಕಾರಿ ಗೌರವಗಳೊಂದಿಗೆ ನಡೆಯಿತು.

ಸಚಿವ ಈಶ್ವರಪ್ಪ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಬಂಧಿಸಿ-ಒಟ್ಟು ಗುತ್ತಿಗೆದಾರರ ಕಮಿಷನ್ ವ್ಯವಹಾರವನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಿ- ಸಿಪಿಐ(ಎಂ) ಒತ್ತಾಯ

ಬೆಳಗಾವಿಯ ಗುತ್ತಿಗೆದಾರ ಹಾಗೂ ಬಿಜೆಪಿ ಕಾರ್ಯಕರ್ತ ಶ್ರೀ ಸಂತೋಷ ಪಾಟೀಲ್, ತನ್ನ ಸಾವಿಗೆ ಸಚಿವ ಶ್ರೀ ಈಶ್ವರಪ್ಪರವರೇ ನೇರ ಹೊಣೆಗಾರರೆಂದು ಡೆತ್ ನೋಟ್ ಬರೆದು, ಉಡುಪಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮುಖ್ಯವಾಗಿ ಡೆತ್ ನೋಟ್ ನಲ್ಲಿ ಗುತ್ತಿಗೆ ಕೆಲಸದ ಸಂಬಂದ ಶೇ 40 ಕಮಿಷನ್ ಗಾಗಿ ಒತ್ತಡ ಹೇರಿದ ವಿಚಾರವನ್ನು ಪ್ರಸ್ತಾಪಿಸಿದ್ದಾರೆನ್ನಲಾಗಿದೆ. ಇದೊಂದು ಅತ್ಯಂತ ಗಂಭೀರ ಪ್ರಕರಣವಾಗಿದೆ. ಆದ್ದರಿಂದ, ರಾಜ್ಯ ಸರಕಾರ ಈ ಕೂಡಲೇ ಸಚಿವ ಶ್ರೀ ಈಶ್ವರಪ್ಪರವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ಬಂದಿಸುವಂತೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಒತ್ತಾಯಿಸಿದೆ.

ಪ್ರತಿಯೊಂದು ಗುತ್ತಿಗೆ ಕೆಲಸದಲ್ಲಿ ರಾಜ್ಯ ಸರಕಾರದ ಸಚಿವರು, ಶಾಸಕರು, ಅಧಿಕಾರಿಗಳು, ಒಟ್ಟು ಕಾಮಗಾರಿಯ ಶೇ 40 ರಷ್ಟು ಕಮಿಷನ್ ಪಡೆಯುತ್ತಿರುವುದಾಗಿ ಮತ್ತು ಇದರಿಂದ ಕಾಮಗಾರಿ ನಿರ್ವಹಣೆಗೆ, ಗುತ್ತಿಗೆದಾರರಿಗೆ ತೀವ್ರ ತೊಂದರೆಯಾಗಿದೆಯೆಂದು, ಇದನ್ನು ತಡೆಯಲು ಅಗತ್ಯ ಕ್ರಮವಹಿಸುವಂತೆ ಸ್ವತಃ ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘವು ದೇಶದ ಪ್ರಧಾನ ಮಂತ್ರಿಗಳಿಗೆ ಬಹಿರಂಗ ಪತ್ರ ಬರೆದು ಕಳೆದ ಐದಾರು ತಿಂಗಳುಗಳ ಹಿಂದೆಯೇ ಒತ್ತಾಯಿಸಿದುದನ್ನು ಇಲ್ಲಿ ಸಕಾರಣವಾಗಿ ನೆನಪಿಸಿಕೊಳ್ಳಬಹುದು. ಆಗ ಸಿಪಿಐಎಂ ಪಕ್ಷವು ಸದರಿ ಪ್ರಕರಣವನ್ನು ಸ್ವತಂತ್ರ ನ್ಯಾಯಾಂಗ ತನಿಖೆಗೊಳಪಡಿಸಬೇಕೆಂದು ಮತ್ತು ಕಾಮಗಾರಿಗಳ ಕಳಪೆತನವನ್ನು ಹಾಗೂ ಕಾಮಗಾರಿಗಳು ನಡೆಯದೇ ಬಿಲ್ ಮಾಡುವುದನ್ನು ತಡೆಯುವಂತೆ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದು ಒತ್ತಾಯಿಸಿತ್ತು.

ಪ್ರಧಾನ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಆ ಕುರಿತು ಸೂಕ್ತ ಕ್ರಮವಹಿಸಿದ್ದರೇ ಈ ದಿನ ದೇಶಕ್ಕೆ ಗುತ್ತಿಗೆ ಸೇವೆಯನ್ನು ಒದಗಿಸುತ್ತಿದ್ದ ಒಂದು ಅಮೂಲ್ಯ ಜೀವ ಶ್ರೀ ಸಂತೋಷ ಪಾಟೀಲ್ ನೊಂದು ಆತ್ಮಹತ್ಯೆ ಮಾಡಿಕೊಂಡ ಪ್ರಕರಣವನ್ನು ತಡೆಯ ಬಹುದಿತ್ತು. ಇದರಿಂದಾಗಿ ಅವರ ಕುಟುಂಬ ಬೀದಿಗೆ ಬೀಳುವಂತಾಯಿತು. ಈ ಕುರಿತು ಪರಿಣಾಮಕಾರಿ ಕ್ರಮ ತಗೆದುಕೊಳ್ಳದೇ ಜವಾಬ್ದಾರಿ ಹೀನ ರೀತಿಯ ವರ್ತನೆ ತೋರಿರುದು ತೀವ್ರ ಖಂಡನೀಯವಾಗಿದೆ.

ಈಗಲಾದರೂ ಇನ್ನಷ್ಟು ಗುತ್ತಿಗೆದಾರರು ಆತ್ಮಹತ್ಯೆಗಿಳಿಯದಂತೆ ಮತ್ತು ಅವರ ಕುಟುಂಬಗಳು ಬೀದಿ ಪಾಲಾಗದಂತೆ ತಡೆಯಲು ಶ್ರೀ ಸಂತೋಷ ಪಾಟೀಲ ಪ್ರಕರಣವೂ ಸೇರಿದಂತೆ ಒಟ್ಟು ಈ ಕಮಿಷನ್ ಹಗರಣವನ್ನು ಸ್ವತಂತ್ರ ನ್ಯಾಯಾಂಗ ತನಿಖೆಗೊಳಪಡಿಸುವಂತೆ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯು ಮರಳಿ ಒಕ್ಕೂಟ ಹಾಗೂ ರಾಜ್ಯ ಸರಕಾರಗಳನ್ನು ಬಲವಾಗಿ ಒತ್ತಾಯಿಸಿದೆ.



ಮೀನು ಕಾರ್ಖಾನೆಯಲ್ಲಿ ದುರ್ಮರಣ: ಪರಿಹಾರಕ್ಕಾಗಿ ಪಟ್ಟು ಹಿಡಿದ ಸಂಘಟನೆಗಳು-ತಲಾ 15 ಲಕ್ಷ ರೂ. ಘೋಷಣೆ

ಮೀನಿನ ಕಾರ್ಖಾನೆಯಲ್ಲಿ ವಿಷಾನಿಲ ಸೋರಿಕೆಯಾಗಿ ಐವರು ಕಾರ್ಮಿಕರು ಮೃತಪಟ್ಟಿರುವ ಘಟನೆ ಇತ್ತೀಚೆಗೆ ನಡೆದಿತ್ತು. ಮೃತಪಟ್ಟ ಕಾರ್ಮಿಕ ಕುಟುಂಬಗಳಿಗೆ ಕಾರ್ಖಾನೆಯು ಪರಿಹಾರ ನೀಡಬೇಕೆಂದು ಡಿವೈಎಫ್ಐ ಹಾಗೂ ಸಿಐಟಿಯು ಸಂಘಟನೆಯ ನಾಯಕರು ಪಟ್ಟು ಹಿಡಿದರು. ಪರಿಣಾಮ ತಲಾ 15 ಲಕ್ಷ ರೂಪಾಯಿ ಪರಿಹಾರ ನೀಡಲು ಕಾರ್ಖಾನೆ ಒಪ್ಪಿಗೆ ಸೂಚಿಸಿದೆ.

ಭಾನುವಾರ (ಏಪ್ರಿಲ್ 17) ತಡರಾತ್ರಿ ವಿಶೇಷ ಆರ್ಥಿಕ ವಲಯ(ಎಸ್‌ಇಝೆಡ್) ವ್ಯಾಪ್ತಿಯ ಉಲ್ಕಾ ಫಿಷ್ ಮಿಲ್ ಕಾರ್ಖಾನೆಯಲ್ಲಿ ವಿಷಾನಿಲ ಸೋರಿಕೆಯಾಗಿ ಪಶ್ಚಿಮ ಬಂಗಾಳ ಮೂಲದ ಐದು ಮಂದಿ ಕಾರ್ಮಿಕರು ಮೃತಪಟ್ಟರು. ದುರ್ಘಟನೆಯ ನಂತರ ಸ್ಥಳಕ್ಕೆ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್ಐ), ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) ಸಂಘಟನೆಯ ಮುಖಂಡರು ಧಾವಿಸಿ ಕಾರ್ಮಿಕರೊಂದಿಗೆ ಸುದೀರ್ಘವಾಗಿ ಚರ್ಚಿಸಿದರು.

ಕಾರ್ಮಿಕ ಕುಟುಂಬಗಳಿಗೆ ಕಾರ್ಖಾನೆಯು ಪರಿಹಾರ ಧನ ನೀಡಬೇಕು, ಅಲ್ಲಿಯವರಗೆ ಮೃತ ದೇಹ ಕಳುಹಿಸಿಕೊಡಲು ಸಮ್ಮತಿ ನೀಡಲಾಗುವುದಿಲ್ಲ ಎಂದು ಪಟ್ಟು ಹಿಡಿದರು. ಹಲವು ಹಂತಗಳ ಮಾತುಕತೆಯ ನಂತರ ಕಾರ್ಖಾನೆಯು ಮೃತಪಟ್ಟ ಪ್ರತಿಯೊಂದು ಕುಟುಂಬಕ್ಕೆ ರೂ. 15 ಲಕ್ಷ ಪರಿಹಾರ ಮೊತ್ತ ನೀಡುವುದಾಗಿ ಭರವಸೆ ನೀಡಿತು.

ಅಲ್ಲದೆ, ಹದಿನೈದು ದಿನಗಳಲ್ಲಿ ಕುಟುಂಬದ ಬ್ಯಾಂಕ್ ಖಾತೆಗೆ ಹಣ ವರ್ಗಾಯಿಸುವುದಾಗಿ ಲಿಖಿತವಾಗಿ ಕುಟುಂಬದ ಸದಸ್ಯರಿಗೆ ಪತ್ರ ನೀಡಿತು. ಮಾತುಕತೆಯ ಸಂದರ್ಭ ಕುಟುಂಬ ಸದಸ್ಯರ ಜೊತೆಗೆ ಸಿಐಟಿಯು ಮುಖಂಡ ಸುನಿಲ್ ಕುಮಾರ್ ಬಜಾಲ್, ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂತೋಷ್ ಬಜಾಲ್, ಮುಖಂಡರಾದ ಬಿ ಕೆ ಇಮ್ತಿಯಾಜ್, ಮನೋಜ್ ಉರ್ವಸ್ಟೋರ್, ಪ್ರಶಾಂತ್ ಎಮ್. ಬಿ., ಬಜ್ಪೆ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಶಾಹುಲ್ ಹಮೀದ್, ಸಾಲಿ ಮರವೂರು ಮತ್ತಿತರರು ಹಾಜರಿದ್ದರು.

ಇಷ್ಟು ದೊಡ್ಡ ದುರಂತ ನಡೆದು ಸಾವು ನೋವು ಸಂಭವಿಸಿದರೂ ಸ್ಥಳೀಯ ಜನಪ್ರತಿನಿಧಿಗಳು ಕನಿಷ್ಠ ಸ್ಥಳಕ್ಕೆ ಭೇಟಿಯನ್ನೂ ನೀಡದಿರುವುದು ದುರದೃಷ್ಟಕರ ಎಂದಿರುವ ಸಂಘಟನೆಯ ಮುಖಂಡರು ಪಶ್ಚಿಮ ಬಂಗಾಳ ಸರಕಾರ ಮೃತ ಕುಟುಂಬಗಳಿಗೆ ತಲಾ ಎರಡು ಲಕ್ಷ ಪರಿಹಾರ ಧನ ಘೋಷಿಸಿದೆ. ಕರ್ನಾಟಕ ಸರಕಾರವು ಸಹ ತಲಾ ಹತ್ತು ಲಕ್ಷ ರೂಪಾಯಿ ನೀಡಬೇಕು ಎಂದು ಆಗ್ರಹಿಸಿವೆ.

ವರದಿ: ವಿನೋದ ಶ್ರೀರಾಮಪುರ

ವಿದ್ಯುತ್ ದರ ಏರಿಕೆ ವಿರುದ್ಧ ಡಿವೈಎಫ್ಐ ನೇತೃತ್ವದಲ್ಲಿ ಕರಾವಳಿ ಜಿಲ್ಲೆಗಳಲ್ಲಿ ಪ್ರತಿಭಟನೆ

ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ದರವನ್ನು ಕೇಂದ್ರ ಸರಕಾರವು ಹೆಚ್ಚಿಸುತ್ತಿರುವುದರ ಬೆನ್ನಲ್ಲೇ, ಕರ್ನಾಟಕ ರಾಜ್ಯ ಸರಕಾರವು ಏಕಾಏಕಿ ವಿದ್ಯುತ್ ದರವನ್ನು ಏರಿಕೆ ಮಾಡಿರುವುದರ ವಿರುದ್ಧ ಪ್ರತಿಭಟನೆಯನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳಲು ಡಿವೈಎಫ್ಐ ಕರೆ ನೀಡಿದ ಮೇರೆಗೆ ದ.ಕ.ಮತ್ತು ಉಡುಪಿ ಜಿಲ್ಲೆಗಳಲ್ಲೂ ಪ್ರತಿಭಟನೆಗಳು ನಡೆದಿವೆ.

ಮಂಗಳೂರು ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿ ಜೊತೆ ಎಸ್‌ಎಫ್ಐ ಹಾಗೂ ಜನವಾದಿ ಮಹಿಳಾ ಸಂಘಟನೆಗಳ ಜಿಲ್ಲಾ ಸಮಿತಿಗಳು ಜೊತೆಗೂಡಿ ಎಪ್ರಿಲ್ 11ರಂದು ಮಂಗಳೂರಿನ ಮೆಸ್ಕಾಂ ಕೇಂದ್ರ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನವನ್ನು ಏರ್ಪಡಿಸಿತ್ತು. ಪ್ರತಿಭಟನೆಗೂ ಮೊದಲು ಮಂಗಳೂರು ಪಾಲಿಕೆ ಕಚೇರಿ ಬಳಿಯಿಂದ ಮೆಸ್ಕಾಂ ಕೇಂದ್ರ ಕಚೇರಿವರೆಗೆ ಪ್ರತಿಭಟನಾಕಾರರು ಮೆರವಣಿಗೆ ನಡೆಸಿದರು. ಪ್ರತಿಭಟನೆಯನ್ನುದ್ದೇಶಿಸಿ ಡಿವೈಎಫ್ಐ ದ.ಕ.ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಜೆಎಂಎಸ್ ಜಿಲ್ಲಾ ಕಾರ್ಯದರ್ಶಿ ಭಾರತಿ ಬೋಳಾರ್ ಮಾತನಾಡಿದರು. ಪ್ರತಿಭಟನೆಯಲ್ಲಿ ಡಿವೈಎಫ್ಐ ಮುಖಂಡರಾದ ಮನೋಜ್ ವಾಮಂಜೂರು, ನವೀನ್ ಕೊಂಚಾಡಿ, ನಿತಿನ್ ಕುತ್ತಾರ್, ವಿದ್ಯಾರ್ಥಿ ಮುಖಂಡರಾದ ವಿನೀತ್, ಮಾಧುರಿ ಬೋಳಾರ್, ಮಹಿಳಾ ಸಂಘಟನೆಯ ಜಯಲಕ್ಷ್ಮೀ, ಅಸುಂತಾ ಡಿಸೋಜ, ಪ್ರಮೀಳಾ ದೇವಾಡಿಗ ಪ್ರತಿಭಟನೆಯಲ್ಲಿ ಉಪಸ್ಥಿತರಿದ್ದರು.

ಉಡುಪಿ ಜಿಲ್ಲೆಯ ಕುಂದಾಪುರ ಶಾಸ್ತ್ರಿ ಸರ್ಕಲ್‌ನಲ್ಲಿ ಎಪ್ರಿಲ್ 11 ರಂದು ನಡೆದ ಪ್ರತಿಭಟನೆಯ ನೇತೃತ್ವವನ್ನು ಡಿವೈಎಫ್ಐ ಕುಂದಾಪುರ ತಾಲೂಕು ಸಮಿತಿ ವಹಿಸಿತ್ತು. ಪ್ರತಿಭಟನೆಯನ್ನುದ್ದೇಶಿಸಿ ಡಿವೈಎಫ್ಐ ಮುಖಂಡರಾದ ರವಿ ವಿ.ಎಂ, ತಾಲೂಕು ಉಪಾಧ್ಯಕ್ಷ ಸುರೇಶ್ ಕಲ್ಲಾಗರ, ಮಾಜಿ ಅಧ್ಯಕ್ಷರಾದ ಎಚ್.ನರಸಿಂಹ ಮಾತನಾಡಿದರು. ಆದಿವಾಸಿ ಸಂಘಟನೆಯ ಜಿಲ್ಲಾ ಮುಖಂಡ ಶ್ರೀಧರ ನಾಡ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.




ಬಲಿಪೀಠವಾದ ಭ್ರಷ್ಟ ಸರ್ಕಾರ..... ಪುಟ 3 ರಿಂದ


ಗೃಹ ಸಚಿವರು ಆ ಕುಟುಂಬದೊಂದಿಗೆ ಅತಿ ನಿಕಟ ಸಂಬಂಧ ಇರಿಸಿಕೊಂಡಿರುವುದು ಬೆಚ್ಚಿ ಬೀಳಿಸುವ ಪ್ರಕರಣ. ಇಂತಹ ಭೀಕರ ಭ್ರಷ್ಟಾಚಾರದ ಪ್ರಕರಣವನ್ನು ಗೃಹಮಂತ್ರಿಗಳ ಸುಪರ್ದಿಯಲ್ಲಿಯೇ ವಿಚಾರಣೆ ನಡೆಯುತ್ತಿರುವುದು ಅತ್ಯಂತ ಹಾಸ್ಯಾಸ್ಪದ ಮತ್ತು ನ್ಯಾಯ ಸಿಗುವುದು ಅನುಮಾನಾಸ್ಪದ. ಸುಮಾರು 53 ಕ್ಕೂ ಹೆಚ್ಚು ಜನರನ್ನು ಬಲಿತೆಗೆದುಕೊಂಡಿರುವ ಇನ್ನೂ ಇತ್ಯರ್ಥ ಕಾಣದ ಮಧ್ಯಪ್ರದೇಶದ 'ವ್ಯಾಪಂ' ಹಗರಣ ನಡೆದದ್ದು ಬಿಜೆಪಿಯ ದುರಾಡಳಿತದಲ್ಲಿ ಎನ್ನುವುದನ್ನು ನೆನಪಿಸಿಕೊಳ್ಳಬೇಕು.


ಜೊತೆಯಲ್ಲಿ ಪಶುಸಂಗೋಪನಾ ಇಲಾಖೆಗೆ ಖರೀದಿಸಿದ ಮೇವಿನ ಬಿಲ್ ಪಾವತಿಗೆ ಶೇ.40 ಕ್ಕೆ ಬೇಡಿಕೆಯಿಟ್ಟು ಸತಾಯಿಸುತ್ತಿರುವುದು ಬೆಳಕಿಗೆ ಬಂದ ಮತ್ತೊಂದು ಪ್ರಕರಣ. ನೀರಾವರಿ ಇಲಾಖೆಯಲ್ಲಿ ನಡೆದ ಕಾಮಗಾರಿಗಳ ಸುಮಾರು 1280 ಕೋಟಿ ರೂ. ಗಳ ಬಿಲ್ ಪಾವತಿ ಆಗದಿರುವ ಹಗರಣ ಮತ್ತೊಂದು. ಈ ಎಲ್ಲವುಗಳ ಬಗ್ಗೆ ತನ್ನ ಈ ದೇಶಭಕ್ತ ಕಾರ್ಯಕರ್ತರ ಅನೈತಿಕತೆ, ಭ್ರಷ್ಟಾಚಾರಗಳ ಬಗ್ಗೆ ಪ್ರಧಾನಿ ಮೌನವಹಿಸಿರುವುದು ಏನನ್ನು ಸೂಚಿಸುತ್ತದೆ? ಮಾತೃಭೂಮಿಗೆ ಸದಾ ವಂದಿಸುವ ಶಾಖೆಯಲ್ಲಿ ಕಲಿಸಿದ ಸಂಸ್ಕೃತಿಯಾದರೂ ಎಂತಹದು?

ಬಿಜೆಪಿ ಆಡಳಿತದಲ್ಲಿ ಪರಿಸ್ಥಿತಿ ಸುಧಾರಿಸುವ ಮಾತಿರಲಿ ಕಾನೂನು ಸುವ್ಯವಸ್ಥೆ ನಾಗರಿಕ ನೆಮ್ಮದಿ ತೀರ ಹದಗೆಟ್ಟು ಹೋಗಿದೆ. ಭ್ರಷ್ಟಾಚಾರ ಸಾಂಸ್ಥಿಕ ಸ್ವರೂಪ ಪಡೆದು ಆಳಕ್ಕಿಳಿದು ತನ್ನ ಬಿಳಲುಗಳನ್ನು ಭದ್ರವಾಗಿ ವಿಸ್ತರಿಸಿಕೊಂಡಿದೆ. ಇದನ್ನು ಕಾಯ್ದುಕೊಳ್ಳುವ ಮತ್ತು ಮತ್ತಷ್ಟು ಭಂಡತನದಿಂದ ಬಲಿಷ್ಠಗೊಳಿಸುವ ವರೆಗೆ ಅಧಿಕಾರದಲ್ಲಿ ಇರಬೇಕು ಎನ್ನುವುದು ಒಪ್ಪಿತ ಮೌಲ್ಯವಾಗಿದೆ! ಎಲ್ಲ ಪ್ರಕರಣಗಳನ್ನು ಗಮನಿಸಿದರೆ ಶಾಂತಿ ಸುವ್ಯವಸ್ಥೆಗೆ ಹೆಸರಾಗಿದ್ದ ಕರ್ನಾಟಕ ಅತ್ಯಂತ ಅರಾಜಕತೆ ಸರ್ವಾಧಿಕಾರತ್ವ ದತ್ತ, ದಮನಕಾಂಡ ಮೇಲುಗೈ ಸಾಧಿಸಿರುವ ಮಧ್ಯಪ್ರದೇಶ, ಉತ್ತರ ಪ್ರದೇಶಗಳ ಸಾಲಿಗೆ ಸರಿಯುತ್ತದೆ ಎನ್ನುವುದೇ ದೊಡ್ಡ ದುರಂತ.

ಸಂತೋಷ್ ಪಾಟೀಲರ ಸಾವಿನ ಬಗ್ಗೆ ಆಳವಾದ ತನಿಖೆ ನಡೆಯಲೇಬೇಕು ಈಶ್ವರಪ್ಪನವರ ಕೇವಲ ರಾಜೀನಾಮೆ ಅವರು ಎಸಗಿದ್ದಾರೆ ಎನ್ನಲಾಗುವ ಅಪರಾಧಕ್ಕೆ ಶಿಕ್ಷೆಯೇನಲ್ಲ. ಕೂಡಲೇ ಅವರನ್ನು ಬಂಧಿಸಿ ನಿಷ್ಠುರ, ನ್ಯಾಯಾಂಗ ತನಿಖೆ ನಡೆಸಬೇಕು. ಇಂತಹವರು ಅನಿವಾರ್ಯವಾಗಿ ರಾಜೀನಾಮೆ ಕೊಡುವ ಮೊದಲೇ ಸಂಪುಟದಿಂದ ಹೊರ ದಬ್ಬಿದ್ದರೆ ಮುಖ್ಯಮಂತ್ರಿ ಬೊಮ್ಮಾಯಿ ಯವರ ಕುಸಿದು ಹೋಗಿರುವ ಮಾನ ಸ್ವಲ್ಪವಾದರೂ ಉಳಿಯುತ್ತಿತ್ತು. ಆದರೆ ಅಂತಹ ನೈತಿಕ ಸೂಕ್ಷ್ಮತೆ, ಸಾರ್ವಜನಿಕ ದನಿಗೆ ಮಾನ್ಯತೆ ನೀಡುವುದನ್ನು ಈ ಭಂಡ ಸರ್ಕಾರದಿಂದ ನಿರೀಕ್ಷಿಸಲು ಸಾಧ್ಯವೇ? ಈ ದುರಾಡಳಿತಕ್ಕೆ ಇನ್ನೆಷ್ಟು ಜನ ಬಲಿಯಾಗಬೇಕು? ಜನತೆಯ ಪಾಲಿಗೆ ಈ ಸರಕಾರವೇ ಒಂದು ಬಲಿಪೀಠ.







"ನಮ್ಮ ಕಷ್ಟ ಆಲಿಸಿ" ಎಂದಿದ್ದಕ್ಕೆ ದಲಿತ ವಿದ್ಯಾರ್ಥಿಯ ಪಿಎಚ್‌ಡಿ ನೋಂದಣಿ ರದ್ದಿಗೆ ಸೂಚನೆ

ಹಂಪಿ ಕನ್ನಡ ವಿವಿಯಲ್ಲಿ ಏ.16 ರಂದು ನಡೆದ ಕಾರ್ಯಕ್ರಮದಲ್ಲಿ, ಸಂಶೋಧನಾರ್ಥಿಗಳ ಪ್ರೋತ್ಸಾಹಧನಕ್ಕೆ ಮನವಿ ಮಾಡಲು ಮುಂದಾಗಿದ್ದ ಪಿ.ಎಚ್.ಡಿ. ವಿದ್ಯಾರ್ಥಿಯ ನೋಂದಣಿ ರದ್ದುಗೊಳಿಸುವ ಕುರಿತು ವಿವಿ ಆಡಳಿತ ಮಂಡಳಿ ನೋಟಿಸ್ ನೀಡಿದೆ. ಆ ಮೂಲಕ ವಿದ್ಯಾರ್ಥಿಗಳ ಹಕ್ಕುಗಳನ್ನು ದಮನ ಮಾಡಿದೆ.

ಗುರುರಾಜ ದೇಸಾಯಿ

ಅಭಿವೃದ್ಧಿ ಅಧ್ಯಯನ ವಿಭಾಗದ ಪಿಎಚ್.ಡಿ ವಿದ್ಯಾರ್ಥಿ ಎ.ಕೆ.ದೊಡ್ಡಬಸಪ್ಪ ಅವರಿಗೆ ಕಾಯಂ ನೋಂದಣಿ ರದ್ದುಗೊಳಿಸಿ ವಿವಿಯಿಂದ ನಿಮ್ಮನೇಕೆ ಬಿಡುಗಡೆಗೊಳಿಸಬಾರದು ಎಂದು ಕಾರಣ ಕೇಳಿ ನೋಟಿಸ್ ನೀಡಿದ್ದು, ಮೂರು ದಿನಗಳಲ್ಲಿ ಸಮಜಾಯಿಷಿ ನೀಡಬೇಕು. ಇಲ್ಲದಿದ್ದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ಕುಲಸಚಿವ ಪ್ರೊ. ಸುಬ್ಬಣ್ಣ ರೈ ನೋಟಿಸ್‌ನಲ್ಲಿ ತಿಳಿಸಿದ್ದಾರೆ. ಕುಲಸಚಿವರ ಈ ನಡೆಗೆ ವಿದ್ಯಾರ್ಥಿ ಸಂಘಟನೆಗಳು ಹಾಗೂ ವಿವಿಯ ವಿದ್ಯಾರ್ಥಿಗಳು ವ್ಯಾಪಕ ಆಕ್ರೋಶ ಹೊರಹಾಕಿದ್ದು, ನಮ್ಮ ಕಷ್ಟವನ್ನು ತೋಡಿಕೊಂಡರೆ ವಿವಿಯಿಂದ ಹೊರದಬ್ಬುವ ಕೊಡುಗೆ ನೀಡುತ್ತೀರಾ? ಎಂದು ಖಾರವಾಗಿಯೇ ಪ್ರಶ್ನಿಸಿದ್ದಾರೆ.

ಸಿಎಂಗೆ ಮನವಿ ನೀಡುವುದು ಅಪರಾಧವೇ

2018 ರಿಂದಲೂ ಹಂಪಿ ವಿವಿಯಲ್ಲಿ ಅಧ್ಯಯನ ನಡೆಸುತ್ತಿರುವ ಸಂಶೋಧನಾ ವಿದ್ಯಾರ್ಥಿಗಳಿಗೆ ಫೆಲೋಶಿಪ್ ನೀಡಿಲ್ಲ. ಅಂದಿನಿಂದ ಇಂದಿನವರೆಗೆ ಫೆಲೋಶಿಪ್ ನೀಡುವಂತೆ ವಿದ್ಯಾರ್ಥಿಗಳು ಪ್ರತಿಭಟನೆ, ಮನವಿ ಇತ್ಯಾದಿ ವಿಧಾನಗಳ ಮೂಲಕ ಗಮನ ಸೆಳೆಯುತ್ತಲೆ ಬರುತ್ತಿದ್ದಾರೆ. ಆದರೆ ಫೆಲೋಶಿಪ್ ಮಾತ್ರ ವಿದ್ಯಾರ್ಥಿಗಳಿಗೆ ಸಿಕ್ಕಿರಲಿಲ್ಲ. ಇದು ಸಹಜವಾಗಿಯೇ ವಿದ್ಯಾರ್ಥಿಗಳ ಪಿತ್ತ ನೆತ್ತಿಗೇರುವಂತೆ ಮಾಡಿತ್ತು. ನಮ್ಮ ಆವರಣದಲ್ಲಿಯೇ ಮುಖ್ಯಮಂತ್ರಿಗಳು ಬರುತ್ತಿದ್ದಾರೆ, ಮತ್ತೊಮ್ಮೆ ಮನವಿ ಮಾಡೋಣ ಎಂದು ಆಸೆಗಣ್ಣಿನಿಂದ ವಿದ್ಯಾರ್ಥಿಗಳು ಮನವಿ ನೀಡಿದ್ದಾರೆ. ಆದರೆ ವಿವಿ ನೀಡಿರುವ ನೋಟಿಸ್‌ನಲ್ಲಿ ಮುಖ್ಯಮಂತ್ರಿಗಳ ಭಾಷಣಕ್ಕೆ ಅಡ್ಡಿಪಡಿಸಿದ್ದಾರೆ ಎಂದು ಸುಳ್ಳು ಹೇಳಲಾಗಿದೆ. ಅವರು ಮನವಿ ನೀಡಿದ್ದು ಸಿಎಂ ವೇದಿಕೆ ಹತ್ತುವ ಮುಂಚೆ. ಆದರೆ ಇಲ್ಲಿ ಘಟನೆಯನ್ನು ತಿರುಚುವ ಮೂಲಕ ವಿದ್ಯಾರ್ಥಿಗಳ ಹಕ್ಕನ್ನು ದಮನಿಸುವ ಕೆಲಸ ಮಾಡಲಾಗಿದೆ. ಮುಖ್ಯಮಂತ್ರಿಗೆ ಮನವಿ ನೀಡುವುದುನ್ನು ಅಪರಾಧ ಎಂದು ಬಿಂಬಿಸಿ ವಿದ್ಯಾರ್ಥಿಯ ನೋಂದಣಿಯನ್ನು ರದ್ದು ಮಾಡಲಾಗುತ್ತದೆ. ಜ್ಞಾನದ ಕಣಜವನ್ನೆ ತಲೆಯ ಮೇಲೆ ಹೊತ್ತುಕೊಂಡಿರುವ ಕುಲಸಚಿವರಿಗೆ "ನೋಂದಣಿ ರದ್ದು" ಎಂಬ ಪದ ಬಳಸಲು ಮನಸ್ಸಾದರೂ ಹೇಗೇ ಬಂತು? ಅಜ್ಞಾನವನ್ನು ಪ್ರದರ್ಶಿಸುವುದರ ಜೊತೆಗೆ ದಲಿತ ವಿದ್ಯಾರ್ಥಿಯ ಉನ್ನತ ಶಿಕ್ಷಣಕ್ಕೆ ಕೊಡಲಿ ಹಾಕಿದ್ದಾರೆ. ಸಿಎಂಗೆ ಮನವಿ ಮಾಡಿದರೆ, ನ್ಯಾಯ ಕೇಳಿದರೆ ಶಿಕ್ಷಣದಿಂದ ಹೊರದಬ್ಬುವ ಹೊಸ ಕಾಯ್ದೆಯನ್ನು ಈಗ ಹಂಪಿ ವಿವಿ ಪರಿಚಯಿಸಿದೆ.

ಸೇಡಿನ ಕ್ರಮಕ್ಕೆ ಮುಂದಾಯ್ತಾ ವಿವಿ

ಎ.ಕೆ. ದೊಡ್ಡಬಸಪ್ಪ ಭಾರತ ವಿದ್ಯಾರ್ಥಿ ಫೆಡರೇಷನ್ (SFI) ಸಂಘಟನೆಯ ನಾಯಕ. ಕಳೆದ ನಾಲ್ಕು ವರ್ಷದಿಂದ ಸಂಶೋಧನಾ ವಿದ್ಯಾರ್ಥಿಗಳ ಫೆಲೊಶಿಪ್ ವಿತರಣೆಗೆ ಹೋರಾಡುತ್ತಾ ಬಂದಿದ್ದಾರೆ. ಜೊತೆಗೆ ಅವರು ಈಗ ಹಂಪಿ ವಿವಿಯಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ. ಹಾಗಾಗಿ ಹೋರಾಟಕ್ಕೆ ಚುರುಕು ತುಂಬುವ ಕೆಲಸ ಮಾಡಿದ್ದಾರೆ. ಬಳ್ಳಾರಿ ವಿಶ್ವವಿದ್ಯಾಲಯದಲ್ಲಿ ಸ್ನಾತಕ್ಕೋತ್ತರ ಪದವಿ ಮಾಡುವಾಗಲೂ ಅಲ್ಲಿನ ಅನ್ಯಾಯಗಳ ವಿರುದ್ಧ ಹೋರಾಡುತ್ತಾ ಬಂದಿದ್ದಾರೆ. ಹಾಸ್ಟೇಲ್ ನಲ್ಲಿನ ಗುಣಮಟ್ಟದ ಊಟ ನೀಡದಿದ್ದಾಗ ಪ್ರತಿಭಟನೆ ನಡೆಸಿದ್ದಾರೆ. ಇದನ್ನು ಸಹಿಸದ ಉಪನ್ಯಾಸಕ ಮೋಹನ್ ದಾಸ್ ಎನ್ನುವವರು ಹಲ್ಲೆ ನಡೆಸಿ, "ವಿವಿಯೊಳಗೆ ಕಾಲಿಟ್ಟರೆ ಕಾಲು ಕಡಿಯುವೆ, ಕೈ ಕತ್ತರಿಸುವೆ" ಎಂದು ಬೆದರಿಕೆ ಹಾಕಿ, ಜಾತಿ ನಿಂದನೆ ಮಾಡಿದ್ದರು. ಇದರ ವಿರುದ್ಧ ಬಸವರಾಜ ಬಳ್ಳಾರಿ ಗ್ರಾಮೀಣ ಠಾಣೆಯಲ್ಲಿ ದೂರು ದಾಖಲಿಸಿದ್ದರು. ನಂತರ ಮೋಹನ್ ದಾಸ್ ಪ್ರತಿದೂರು ದಾಖಲಿಸಿದ್ದರು. ಇದನ್ನೆ ಈಗ ಗಣನೆಗೆ ತೆಗೆದುಕೊಂಡು ವಿದ್ಯಾರ್ಥಿಯ ವರ್ತನೆ ಸರಿ ಇಲ್ಲ ಎಂದು ಸೇಡಿನ ಕ್ರಮಕ್ಕೆ ಮುಂದಾಗಿದ್ದಾರೆ ಎಂಬ ಅನುಮಾನ ದಟ್ಟವಾಗಿದೆ.

ಕುಲಸಚಿವರ ಉದ್ಧಟತನ

ತನ್ನದೆ ವಿವಿಯಲ್ಲಿ, ವಿದ್ಯಾರ್ಥಿಗಳಿಗೆ ಆಗಿರುವ ಅನ್ಯಾಯವನ್ನು ಸರಿ ಪಡಿಸಿ ಎಂದು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದ ವಿದ್ಯಾರ್ಥಿ ಕಾರ್ಯಕ್ಕೆ ಬೆನ್ನು ತಟ್ಟಬೇಕಿದ್ದ ಕುಲಸಚಿವರು, ಕತ್ತು ಹಿಡಿದು ಹೊರಹಾಕುತ್ತಿರುವುದು ವಿಪರ್ಯಾಸವೇ ಸರಿ. ಕುಲಸಚಿವರನ್ನು ಜನಶಕ್ತಿ ಮೀಡಿಯಾ ಸಂಪರ್ಕಿಸಿದಾಗ." ಅವರು ಕೊಟ್ಟ ನೋಟಿಸ್"ನ್ನು ಸರ್ಥಿಸಿ ಕೊಳ್ಳುತ್ತಿದ್ದಾರೆ. "ವಿ.ವಿ ನಡೆಸುವ ಕಾರ್ಯಕ್ರಮಗಳಲ್ಲಿ ಅಡ್ಡಿಯಾಗುವಂತೆ ಪದೇ ಪದೆ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಹೊರಗಿನ ಸಂಘಟನೆಗಳ ಜತೆ ಮುಷ್ಕರ ನಡೆಸಿ ಶೈಕ್ಷಣಿಕ ವಾತಾವರಣ ಕಲುಷಿತಗೊಳಿಸುವ ದುರ್ನಡತೆ ತೋರಿದ್ದಾರೆ" ಅದಕ್ಕಾಗಿ ನೋಟಿಸ್ ಕೊಡಲಾಗಿದೆ ಎಂದು ಹೇಳುತ್ತಾರೆ. ಸಿಗಬೇಕಾದ ಫೆಲೋಶಿಪ್ ಕೇಳುವುದು ಹಕ್ಕಲ್ಲವೇ? ಅವರಿಗೆ ಫೆಲೋಶಿಪ್ ಕೊಡಿಸಲು ನಿಮ್ಮಂದ ನಡೆಸಿದ ಪ್ರಯತ್ನವೇನು? ನೀವು ಪ್ರಯತ್ನ ಮಾಡಿದ್ದರೆ, ಅವರು ಯಾಕೆ ಮುಖ್ಯ ಮಂತ್ರಿಯ ಬಳಿ ಅಳಲು ತೋಡಿಕೊಳ್ಳುತ್ತಿದ್ದರು? ಎಂದು ಮರು ಪ್ರಶ್ನೆ ಹಾಕಿದ್ದಕ್ಕೆ ಉತ್ತರಿಸದೆ ಫೋನ್ ಕಟ್ ಮಾಡಿದರು. ಮಕ್ಕಳ ಬಗ್ಗೆ ಕಾಳಜಿ ವಹಿಸುವ ಸ್ಥಾನದಲ್ಲಿರುವ ಕುಲಸಚಿವರು ದುರ್ನಡೆತೆ ತೋರುವ ಮೂಲಕ ವಿದ್ಯಾರ್ಥಿಯ ಭವಿಷ್ಯಕ್ಕೆ ಕಲ್ಲು ಹಾಕಲು ಮುಂದಾಗಿದ್ದಾರೆ.


ನಮ್ಮ ಹಕ್ಕು ಕೇಳಿದ್ದೇವೆ:

ನಮಗೆ ಆಗಿರುವ ಅನ್ಯಾಯವನ್ನು ಪ್ರಶ್ನಿಸುವುದು, ಅದಕ್ಕಾಗಿ ನಮ್ಮ ಕಷ್ಟವನ್ನು ಹೇಳಿ ಕೊಳ್ಳುವುದು ನಮ್ಮ ಹಕ್ಕು ಎಂದು ದೊಡ್ಡಬಸಪ್ಪ, ಜನಶಕ್ತಿ ಮೀಡಿಯಾಗೆ ಪ್ರತಿಕ್ರಿಯಿಸಿದ್ದಾರೆ. 40 ತಿಂಗಳಿಂದ ಫೆಲೋಶಿಪ್ ಇಲ್ಲದ ಕಾರಣ ಆರ್ಥಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳು ಸಾಕಷ್ಟು ಸಂಕಷ್ಟಗಳನ್ನು ಎದುರಿಸಿದ್ದಾರೆ. ಮನೆಯಲ್ಲಿದ ಒಡವೆಗಳನ್ನು ಒತ್ತೆ ಇಟ್ಟು ಶೈಕ್ಷಣಿಕ ನಿರ್ವಹಣೆ ಮಾಡಿದ್ದಾರೆ. ನಾವೇನು ಹೆಚ್ಚಿನ ಹಣ ಕೇಳುತ್ತಿಲ್ಲ. ನಮಗೆ ಕೊಡಬೇಕಾದ ಫೆಲೋಶಿಪ್ ನೀಡಿ ಎಂದರೆ ನನ್ನ ನೋಂದಣಿಯನ್ನೆ ರದ್ದು ಮಾಡುವುದಾಗಿ ನೋಟೀಸ್ ನೀಡಿದ್ದಾರೆ. ಹಕ್ಕನ್ನು ಕೇಳುವುದು ತಪ್ಪಾ? ನಮ್ಮ ಜೊತೆ ನಿಲ್ಲಬೇಕಿದ್ದ ವಿವಿ ಆಡಳಿತ ಮಂಡಳಿ ಯಾರದೋ ಮಾತು ಕೇಳಿ ನಮ್ಮ ಶೈಕ್ಷಣಿಕ ಭವಿಷ್ಯವನ್ನು ಹಾಳು ಮಾಡುತ್ತಿದೆ. ನಾನು ಇದರ ವಿರುದ್ಧ ಹೋರಾಟ ನಡೆಸುತ್ತೇನೆ ಎಂದು ದೊಡ್ಡಬಸಪ್ಪ ತಿಳಿಸಿದ್ದಾರೆ.

ಕನ್ನಡ ವಿವಿ ಆಡಳಿತ ಮಂಡಳಿಯ ನಡೆ ಶಿಕ್ಷಣ ವಿರೋಧಿಯಾಗಿದೆ ಎಂದು ಎಸ್‌ಎಫ್‌ಐ ಆರೋಪಿಸಿದೆ. ಬಾಕಿ ಉಳಿಸಿಕೊಂಡಿರುವ ಫೆಲೋಶಿಪ್ ನೀಡುವ ಬದಲು, ಫೆಲೇಶಿಪ್ ನೀಡಿ ಎಂದವರ ನೋಂದಣಿಯನ್ನು ರದ್ದು ಮಾಡಲು ಮುಂದಾಗಿರುವುದು ವಿದ್ಯಾರ್ಥಿ ವಿರೋಧಿ ಕ್ರಮವಾಗಿದೆ. ಸಂಶೋಧನಾ ವಿದ್ಯಾರ್ಥಿ ಎ.ಕೆ. ಬಸವರಾಜ್ ರವರಿಗೆ ನೀಡಿರುವ ನೋಟಿಸ್ ವಾಪಸ್ ಪಡೆಯಬೇಕು. ಯಾವುದೇ ಕಾರಣಕ್ಕೂ ಅವರ ಪಿಎಚ್‌ಡಿ ನೋಂದಣಿಯನ್ನು ರದ್ದು ಮಾಡುವುದಿಲ್ಲ ಎಂದು ಘೋಷಿಸಬೇಕು. ಹಾಗೂ ವಿದ್ಯಾರ್ಥಿಗಳಿಗೆ 40 ತಿಂಗಳ ಫೆಲೋಶಿಪ್ ನೀಡಬೇಕು ಎಂದು ರಾಜ್ಯವ್ಯಾಪಿ ಹೋರಾಟ ನಡೆಸುತ್ತೇವೆ ಎಂದು ಎಸ್‌ಎಫ್‌ಐ ರಾಜ್ಯಾಧ್ಯಕ್ಷ ಅಮರೇಶ್ ಕಡಗದ ತಿಳಿಸಿದ್ದಾರೆ.

ಕನ್ನಡ ವಿವಿ ಆಡಳಿತ ಮಂಡಳಿ ಹಾಗೂ ಸರಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯಬೇಕು. ಕ್ಯಾಂಪಸ್‌ಗಳಲ್ಲಿನ ಪ್ರಜಾಪ್ರಭುತ್ವವನ್ನು ಉಳಿಸಲು ಮುಂದಾಗಬೇಕು. ವಿದ್ಯಾರ್ಥಿಗಳ ಶಿಕ್ಷಣಕ್ಕೆ ಬೆನ್ನೆಲುಬಾಗಿರುವ ಫೆಲೋಶಿಪ್‌ನ್ನು ಕೂಡಲೇ ಬಿಡುಗಡೆ ಮಾಡಲು ಮುಂದಾಗಬೇಕಿದೆ.





ರಾಜ್ಯದ ಕೃಷಿ ಕಾಯಿದೆಗಳನ್ನು ಹಿಂದೆಗೆಯಲು ಆಗ್ರಹಿಸಿ ಬೆಳ್ತಂಗಡಿಯಲ್ಲಿ ಕಾಲ್ನಡಿಗೆ ಜಾಥಾ ಮತ್ತು ಅಂಬೇಡ್ಕರ್ ಜಯಂತಿ

ಕೇಂದ್ರ ಸರಕಾರವು ಜಾರಿಗೊಳಿಸಿದ್ದ ರೈತ ವಿರೋಧಿ ಕೃಷಿ ಕಾಯ್ದೆಗಳನ್ನು ರೈತ ಹೋರಾಟದ ಪರಿಣಾಮವಾಗಿ ಸರಕಾರ ಹಿಂತೆಗೆಯುತ್ತಿದೆ. ಆದರೆ ಅದೇ ನಿಲುವುಗಳುಳ್ಳ ಕೃಷಿಭೂಮಿ ಪರಬಾರೆ ಕಾಯ್ದೆ, ಎಪಿಎಂಸಿ ಕಾಯ್ದೆ, ಜಾನುವಾರು ಹತ್ಯಾ ನಿಷೇಧ ಕಾಯ್ದೆಗಳನ್ನು ಕರ್ನಾಟಕ ರಾಜ್ಯ ಸರಕಾರ ಹಿಂದೆಗೆದುಕೊಂಡಿರುವುದಿಲ್ಲ. ಅಲ್ಲದೆ ವಿದ್ಯುತ್ ವಿತರಣೆ ಸಂಬಂಧ ರೈತ ವಿರೋಧಿ ಮಸೂದೆಯನ್ನು ಪ್ರಸ್ತಾಪಿಸಿದೆ ಮಾತ್ರವಲ್ಲ ತೀರಾ ಈಚೆಗೆ ವಿದ್ಯತ್ ದರಗಳನ್ನು ತೀವ್ರವಾಗಿ ಏರಿಕೆ ಮಾಡಿದೆ. ಕರ್ನಾಟಕ ರಾಜ್ಯದ ರೈತ ವಿರೋಧಿ ನೀತಿಗಳ ವಿರುದ್ಧ ಹಲವು ಜನಪರ ಸಂಘಟನೆಗಳ ಒಕ್ಕೂಟವಾದ 'ಸಂಯುಕ್ತ ಹೋರಾಟ ಕರ್ನಾಟಕ' ಪ್ರತಿಭಟನೆಗಳನ್ನು ವ್ಯಾಪಕವಾಗಿ ನಡೆಸಲು ಕರೆ ನೀಡಿರುತ್ತದೆ. ಈ ಹಿನ್ನೆಲೆಯಲ್ಲಿ ಬೆಳ್ತಂಗಡಿಯಲ್ಲಿ ಎಪ್ರಿಲ್ 13 ರಂದು ಸಂಯುಕ್ತ ಪ್ರತಿಭಟನೆ ನಡೆಯಿತು.

ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ರಾಜ್ಯ ರೈತ ಸಂಘ(ಹಸಿರು ಸೇನೆ), ದಸಂಸ (ಅಂಬೇಡ್ಕರ್‌ವಾದ), ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಗಳ ಬೆಳ್ತಂಗಡಿ ಘಟಕಗಳ ಜಂಟಿ ಆಶ್ರಯದಲ್ಲಿ ಗುರುವಾಯನಕೆರೆಯಿಂದ ಬೆಳ್ತಂಗಡಿವರೆಗೆ ಕಾಲ್ನಡಿಗೆ ಜಾಥಾ ನಡೆಸಲಾಯಿತು. ಬಳಿಕ ಬೆಳ್ತಂಗಡಿ ಮಿನಿ ವಿಧಾನಸೌಧದ ಎದುರು ಪ್ರತಿಭಟನಾ ಸಭೆಯನ್ನು ಏರ್ಪಡಿಸಲಾಯಿತು.

ಪ್ರತಿಭಟನೆಯನ್ನುದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಶಿವಕುಮಾರ್ ಎಸ್.ಎಂ., ರಾಜ್ಯ ರೈತ ಸಂಘದ ದ.ಕ.ಜಿಲ್ಲಾ ಅಧ್ಯಕ್ಷ ಪ್ರೇಮನಾಥ ಶೆಟ್ಟಿ ಬಾಳಿಲ, ಸಿಐಟಿಯು ಬಂಟ್ವಾಳ ತಾಲೂಕು ಅಧ್ಯಕ್ಷ ರಾಮಣ್ಣ ವಿಟ್ಲ, ಆದಿವಾಸಿ ಹಕ್ಕುಗಳ ಸಮಿತಿ ಮುಖಂಡ ಶೇಖರ ಲಾಯಿಲ ಮಾತನಾಡಿದರು.

ಬಳಿಕ ಅಂಬೇಡ್ಕರ್ ಜಯಂತಿಯನ್ನು ಬೆಳ್ತಂಗಡಿ 'ಅನನ್ಯ' ಅಂಗಳದಲ್ಲಿ ಏರ್ಪಡಿಸಲಾಯಿತು. ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ರವಿಕಿರಣ ಪುಣಚ ಮುಖ್ಯ ಅತಿಥಿಯಾಗಿ ಮಾತನಾಡಿದರು. ಚಿಂತಕ ಹರಿದಾಸ್ ಎಸ್.ಎಂ.ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಿಐಟಿಯು ಮುಖಂಡ ರಾಮಣ್ಣ ವಿಟ್ಲ, ಜೆಎಂಎಸ್ ನಾಯಕಿ ಸುಕನ್ಯಾ ಹರಿದಾಸ್ ಉಪಸ್ಥಿತರಿದ್ದರು.

ಅತಿಥಿ ಅಂಕಣ



ನಾ ದಿವಾಕರ

ಯುವ ಪೀಳಿಗೆಯ ದಿಕ್ಕು ತಪ್ಪಿಸುತ್ತಿರುವ ಕೋಮು ಧೃವೀಕರಣ

ಎರಡು ಮತೀಯ ಶಕ್ತಿಗಳ ಮೇಲಾಟದಲ್ಲಿ ಯುವಪೀಳಿಗೆ ಸಂಯಮ ಕಳೆದುಕೊಳ್ಳುತ್ತಿದೆ

ಕೋಮುವಾದಿ ರಾಜಕಾರಣಕ್ಕೆ ಭಾರತದಲ್ಲಿ ಶತಮಾನದ ಇತಿಹಾಸವಿದೆ. ಹಾಗೆಯೇ ರಾಜಕೀಯ ಕೋಮು ಧೃವೀಕರಣಕ್ಕೆ ದಶಕಗಳ ಇತಿಹಾಸವಿದೆ. ಭಾರತದ ಬಹುತ್ವ ಸಂಸ್ಕೃತಿಗೆ ಸವಾಲಾಗಿಯೇ ಪರಿಣಮಿಸಿರುವ ಏಕಸಂಸ್ಕೃತಿಯ ಪ್ರತಿಪಾದಕರು ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿ ಸ್ಥಾಪಿಸಲು ಪಣತೊಟ್ಟಿರುವುದರಿಂದ ಅನ್ಯ ಮತೀಯ ಜನಾಂಗಗಳು ಈ ಧೃವೀಕರಣದ ಕೇಂದ್ರ ಬಿಂದು ಆಗಿರುತ್ತವೆ. ಕಳೆದ ಮೂರು ದಶಕಗಳಲ್ಲಿ ಸಾಂಸ್ಕೃತಿಕ ರಾಜಕಾರಣ ತನ್ನದೇ ಆದ ಸ್ಪಷ್ಟ ರೂಪ ಪಡೆಯುತ್ತಿದ್ದು ಹಿಂದುತ್ವ ರಾಜಕಾರಣದ ಮುನ್ನಡೆಗೆ ಫಲವತ್ತಾದ ಭೂಮಿಕೆಯೂ ಸಿದ್ಧವಾಗುತ್ತಿದೆ. ಈ ನಡುವೆಯೇ ಅಪಾಯಕ್ಕೊಳಗಾಗಿರುವುದು ಈ ದೇಶದ ಬಹುಸಂಸ್ಕೃತಿ ನೆಲೆಗಳು ಮತ್ತು ಈ ಬಹುತ್ವ ನೆಲೆಗಳ ವಾರಸುದಾರರು. ಈಗಾಗಲೇ ಶತಮಾನಗಳ ಜಾತಿ ದೌರ್ಜನ್ಯ ಮತ್ತು ತಾರತಮ್ಯಗಳಿಂದ ಜರ್ಜರಿತವಾಗಿರುವ ಭಾರತೀಯ ಸಮಾಜವನ್ನು ಜನಾಂಗೀಯ ನೆಲೆಯಲ್ಲಿ ಮತ್ತಷ್ಟು ವಿಘಟನೆಗೊಳಪಡಿಸುವ ಪ್ರಯತ್ನಗಳು ನಮ್ಮ ಸುತ್ತಲಿನ ಸಮಾಜವನ್ನು ದ್ವೇಷ, ಆಕ್ರೋಶ, ಅಸೂಯೆ ಮತ್ತು ಶತ್ರುತ್ವದ ಕೂಪವನ್ನಾಗಿ ಮಾಡುತ್ತಿದೆ.

ಕಳೆದ ಹಲವು ದಿನಗಳಿಂದ ಕರ್ನಾಟಕದಲ್ಲಿ, ಮಧ್ಯಪ್ರದೇಶದಲ್ಲಿ, ದೆಹಲಿಯಲ್ಲಿ ಒಡಿಷಾದಲ್ಲಿ ನಡೆಯುತ್ತಿರುವ ಪ್ರಕ್ಷುಬ್ಧತೆ ಭಾರತವನ್ನು ಸಾಮಾಜಿಕ ಅರಾಜಕತೆಯತ್ತ ಕೊಂಡೊಯ್ಯುವಂತಿದೆ. ಕೋಮುವಾದಿ ಶಕ್ತಿಗಳು ತಮ್ಮ ಅಸ್ತಿತ್ವವನ್ನು ರಕ್ಷಿಸಿಕೊಳ್ಳಲು, ತಾವು ನಂಬುವ ಮತ್ತು ಪೋಷಿಸುವ ಒಂದು ಧಾರ್ಮಿಕ ನಂಬಿಕೆ ಮತ್ತು ಸಾಂಸ್ಥಿಕ ಅಸ್ಮಿತೆಗಳನ್ನು ಸಮರ್ಥಿಸಿಕೊಳ್ಳಲು ಕೋಮುವಾದಿಗಳು ಸದಾ ಮತ್ತೊಂದು ಕೋಮಿನ ವಿರುದ್ಧ ಕತ್ತಿ ಮಸೆಯುತ್ತಲೇ ಇರುತ್ತವೆ. ಒಂದು ಪ್ರೇಮ ವಿವಾಹ, ಒಂದು ಸಣ್ಣ ಮೆರವಣಿಗೆ, ಒಂದು ಪೂಜೆ ಅಥವಾ ಒಂದು ಪೂಜಾಸ್ಥಳದ ಗೋಡೆಯ ಮೇಲಿನ ಬರಹ ಈ ವಿಚ್ಛಿದ್ರಕಾರಿ ಶಕ್ತಿಗಳಲ್ಲಿರುವ ಕಿಚ್ಚನ್ನು ಹೊತ್ತಿಸಿ ಇಡೀ ಸಮುದಾಯಗಳನ್ನು ಆವರಿಸಿಬಿಡುತ್ತದೆ. ಬಡತನ, ನಿರುದ್ಯೋಗ, ಬೆಲೆ ಏರಿಕೆ, ವಸತಿಹೀನತೆ, ದುಬಾರಿ ಶಿಕ್ಷಣ, ಅಪೌಷ್ಟಿಕತೆ, ಅನಾರೋಗ್ಯ, ಅಶುಚಿತ್ವ, ಶಿಶುಮರಣ, ಮಹಿಳೆಯರ ಮೇಲಿನ ಅತ್ಯಾಚಾರ, ದೌರ್ಜನ್ಯ, ಜಾತಿ ದೌರ್ಜನ್ಯ, ಅಸ್ಪೃಶ್ಯತೆ ಈ ಎಲ್ಲ ಸಮಸ್ಯೆಗಳ ವಿರುದ್ಧ ಹೋರಾಡಲು ಸಜ್ಜಾಗಬೇಕಿರುವ ಒಂದು ಇಡೀ ಯುವ ಪೀಳಿಗೆ ಇಂದು ಹಿಜಾಬ್, ಹಲಾಲ್, ಜಟ್ಕಾ, ರಾಮನವಮಿ, ಹನುಮಜಯಂತಿ ಮುಂತಾದ ವಿವಾದಗಳಿಗೆ ಸ್ಪಂದಿಸುತ್ತಾ ತನ್ನೊಳಗಿನ ಅಪಾರ ಶಕ್ತಿಯನ್ನು ವ್ಯರ್ಥ ಮಾಡುತ್ತಿದೆ.

"ಧಾರ್ಮಿಕ ಭಾವನೆಗಳಿಗೆ ಧಕ್ಕೆ!" ಈ ಮೂರು ಪದಗಳು ಭಾರತದ ನೂರಾರು ಯುವ ಜೀವಗಳಿಗೆ ಮಾರಕವಾಗಿ ಪರಿಣಮಿಸಿವೆ. ಯಾವುದೋ ಒಬ್ಬ ತಿಳಿಗೇಡಿಯ ಸಾಮಾಜಿಕ ತಾಣದ ಪೋಸ್ಟ್ ಒಂದು ಇಡೀ ಸಮುದಾಯದೊಳಗಿನ ಕಿಚ್ಚನ್ನು ಭುಗಿಲೇಳಿಸುವ ಮಟ್ಟಕ್ಕೆ ನಮ್ಮ ನಡುವಿನ ಯುವ ಪೀಳಿಗೆ ದುರ್ಬಲವಾಗಿದೆ. ಈ ದೌರ್ಬಲ್ಯವೇ ಹಿಂದೂ ಮತೀಯವಾದಿಗಳಿಗೆ, ಮುಸ್ಲಿಂ ಮತಾಂಧ ಸಂಘಟನೆಗಳಿಗೆ ಬಂಡವಾಳವಾಗುತ್ತದೆ. ಹಿಂದೂ, ಇಸ್ಲಾಂ ಅಥವಾ ಇತರ ಯಾವುದೇ ಧಾರ್ಮಿಕ ನೆಲೆಗಳಾದರೂ ಒಬ್ಬ ವ್ಯಕ್ತಿಯ ಒಂದು ಕ್ಷುಲ್ಲಕ ಅಭಿವ್ಯಕ್ತಿಯಿಂದ ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುವಷ್ಟು ದುರ್ಬಲವಲ್ಲ ಎನ್ನುವುದನ್ನು ಇತಿಹಾಸ ನಿರೂಪಿಸಿದೆ. ಆದರೆ ಈ ರೀತಿಯ ಕ್ಷುಲ್ಲಕ ಘಟನೆಗಳೇ ಕೋಮು ದಳ್ಳುರಿಯನ್ನು ಹೆಚ್ಚಿಸಿ ನೂರಾರು ಅಮಾಯಕರ ಆಸ್ತಿಪಾಸ್ತಿಗಳ ನಷ್ಟಕ್ಕೆ, ಹತ್ತಾರು ಯುವಕರ ಸಾವಿಗೆ ಕಾರಣವಾಗುತ್ತದೆ ಎನ್ನುವುದನ್ನೂ ಸಮಕಾಲೀನ ಭಾರತೀಯ ಇತಿಹಾಸ ನಿರೂಪಿಸಿದೆ. ಯಾವುದೇ ಜನಸಮುದಾಯಗಳ ಧಾರ್ಮಿಕ ಅಥವಾ ಸಾಮುದಾಯಿಕ ಭಾವನೆಗಳಿಗೆ ಧಕ್ಕೆ ಉಂಟುಮಾಡುವ ಕೃತ್ಯವನ್ನು ಶಿಕ್ಷೆಗೊಳಪಡಿಸಲು ಒಂದು ಕಾನೂನು ವ್ಯವಸ್ಥೆ ಇದೆ ಎನ್ನುವ ಪರಿಜ್ಞಾನವೇ ಇಲ್ಲದಂತೆ ಕಾನೂನು ಕೈಗೆತ್ತಿಕೊಳ್ಳುವ ಬೃಹತ್ ಕಾವಲುಪಡೆಗಳನ್ನೇ ಮತೀಯ ಶಕ್ತಿಗಳು, ಮತಾಂಧ ಸಂಘಟನೆಗಳು ಸೃಷ್ಟಿಸಿವೆ.

ಈ ಹಾದಿ ತಪ್ಪಿದ ಯುವ ಪೀಳಿಗೆ ಯಾವ ಧರ್ಮವನ್ನು ರಕ್ಷಿಸಲು ಸೆಣಸಾಡುತ್ತಿದೆ? ಯಾರ ಧರ್ಮದ ಸಂರಕ್ಷಣೆಗಾಗಿ ಹೋರಾಡುತ್ತಿದೆ? ಬಹುಶಃ ಈ ಪ್ರಶ್ನೆಗೆ ಆ ಯುವಕರ ನಡುವೆಯೇ ಉತ್ತರ ದೊರಕಲಾರದು. ಸಮಾಜದ ತಳಮಟ್ಟದಲ್ಲಿ ತಮ್ಮದೇ ಆದ ನಿತ್ಯ ಬದುಕಿನ ಬವಣೆಯೊಂದಿಗೆ ಜೀವನೋಪಾಯದ ಮಾರ್ಗಗಳ ಶೋಧದಲ್ಲಿರುವ ಜನರನ್ನು ಸಮೂಹ ಸನ್ನಿಗೊಳಪಡಿಸಿ ತಮ್ಮ ಸಾಂಸ್ಥಿಕ ಅಸ್ತಿತ್ವವನ್ನು ರಕ್ಷಿಸಿಕೊಳ್ಳುವ ನಿಟ್ಟಿನಲ್ಲಿ ಮತೀಯವಾದಿ ಸಂಘಟನೆಗಳು ಸುಭದ್ರ ಬುನಾದಿಯೊಂದಿಗೆ ನೆಲೆ ಕಂಡುಕೊಂಡಿವೆ. ಈ ಸಾಂಸ್ಥಿಕ ನೆಲೆಗಳನ್ನು ನಿಯಂತ್ರಿಸುವ ನೈತಿಕ ಹೊಣೆಗಾರಿಕೆ ಸರ್ಕಾರಗಳ ಮೇಲಿರುತ್ತದೆ. ದುರಂತ ಎಂದರೆ ಚುನಾಯಿತ ಸರ್ಕಾರಗಳು ತಮ್ಮ ಸಾಂವಿಧಾನಿಕ ಜವಾಬ್ದಾರಿಯನ್ನೂ ಮರೆತು ಮತೀಯ ಪಡೆಗಳನ್ನು ಸಮರ್ಥಿಸುತ್ತಲೋ, ಖಂಡಿಸುತ್ತಲೋ ಕಾಲ ಕಳೆಯುತ್ತವೆ. ಹುಬ್ಬಳ್ಳಿಯ ಘಟನೆಗೆ ಕಾರಣರಾದವರು ಕಲ್ಲು ತೂರಿದ ಅಮಾಯಕ ಹುಡುಗರಷ್ಟೇ ಅಲ್ಲ. ಅಥವಾ ಪ್ರಚೋದನಕಾರಿ ಪೋಸ್ಟ್ ಹಾಕಿದ್ದ ಯುವಕ ಮಾತ್ರ ಅಲ್ಲ. ಈ ಯುವಕರ ಹಿಂದೆ ಒಂದು ಸಾಂಘಿಕ ಶಕ್ತಿ ಇದೆ. ತಮ್ಮ ನಿತ್ಯ ಬದುಕಿನಲ್ಲಿ ಯಾವುದೇ ವ್ಯಕ್ತಿಯೂ ಧಾರ್ಮಿಕ ಭಾವನೆಗಳ ಬಗ್ಗೆ ಚಿಂತಿತನಾಗುವುದಿಲ್ಲ. ಅಥವಾ ಧಾರ್ಮಿಕ ಆಚರಣೆಗಳಲ್ಲಿ ಉಂಟಾಗುವ ವ್ಯತ್ಯಯಗಳು ವ್ಯಕ್ತಿಗತವಾಗಿ ಯಾರನ್ನೂ ಬಾಧಿಸುವುದೂ ಇಲ್ಲ.

ಈ 'ಧಾರ್ಮಿಕ ಭಾವನೆಗಳಿಗೆ' ಒಂದು ಸಾಂಸ್ಥಿಕ ಸ್ವರೂಪ ನೀಡಿ, ಕಾಣದ ಕೈಗಳಿಂದ ನಿಯಂತ್ರಿಸಲ್ಪಡುವ ಈ ಸಾಂಸ್ಥಿಕ ಅಸ್ತಿತ್ವವನ್ನು ಸಂರಕ್ಷಿಸಲು ಸಮಾಜದ ಒಳಗಿನಿಂದಲೇ ಒಂದು ಸಂಘಟನಾತ್ಮಕ ಶಕ್ತಿಯನ್ನು ರೂಪಿಸಿ, ತಮ್ಮ ನಿಯಂತ್ರಣಾಧಿಕಾರವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಲು ಕಾವಲುಪಡೆಗಳನ್ನು ಸೃಷ್ಟಿಸುವ ಒಂದು ವ್ಯವಸ್ಥಿತ ಸಂಚು ಇಲ್ಲಿ ಕಾಣುತ್ತದೆ. ಜಾತಿ ಮತಗಳ ಅಸ್ಮಿತೆಗಳ ಚೌಕಟ್ಟಿನಲ್ಲಿ ನಿರ್ಬಂಧಿಸಲ್ಪಡುವ ಯುವ ಪೀಳಿಗೆಯ ಮನಸುಗಳನ್ನು ಸಮನ್ವಯದ ಬದುಕಿಗೆ ಹೊಂದಿಕೊಳ್ಳುವಂತೆ ಮಾಡಬೇಕಾದ ಈ ಸಾಂಸ್ಥಿಕ ನೆಲೆಗಳು, ಅಧಿಕಾರ ರಾಜಕಾರಣದಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಇದೇ ಯುವ ಪಡೆಗಳನ್ನು ಹಿಂಸಾತ್ಮಕ ಮಾರ್ಗಗಳಿಗೆ ಪ್ರಚೋದಿಸುತ್ತವೆ. ಹುಬ್ಬಳ್ಳಿಯಲ್ಲಿ ಪ್ರಚೋದನಕಾರಿ ಪೋಸ್ಟ್ ಒಂದನ್ನು ಸಾಮಾಜಿಕ ತಾಣದಲ್ಲಿ ಹರಡುವ ಯುವಕ, ಇದರಿಂದ ಕೆರಳಿ ಸಮಾಜದಲ್ಲಿ ಕ್ಷೋಭೆ ಉಂಟುಮಾಡುವ ಪುಂಡ ಪಡೆಗಳು, ದೆಹಲಿಯ ಜಹಂಗೀರ್‌ಪುರಿಯಲ್ಲಿ ಹನುಮ ಜಯಂತಿಯ ಮೆರವಣಿಗೆಯ ಮೇಲೆ ಕಲ್ಲೆಸೆಯುವ ಯುವಕರು ಈ ಎಲ್ಲರೂ ಇಂತಹ ಒಂದು ಅಗೋಚರ ಸಾಂಸ್ಥಿಕ ನೆಲೆಗಳಿಂದ ನಿಯಂತ್ರಿಸಲ್ಪಡುತ್ತಾರೆ. ತಮ್ಮ ಬದುಕನ್ನು ಸುಧಾರಿಸುವ ನಿಟ್ಟಿನಲ್ಲಿ ನಿಷ್ಪ್ರಯೋಜಕವಾದ ಚಟುವಟಿಕೆಗಳಿಗೆ ಈ ಯುವಕರು ಬಲಿಯಾಗುತ್ತಾರೆ. ಈ ಒಂದು ಪೀಳಿಗೆಯಲ್ಲಿ ಸೃಷ್ಟಿಸಲಾಗುವ ಭಾವಾವೇಶ, ಉನ್ಮಾದ, ಅಂಧಾಭಿಮಾನ ಮತ್ತು ಹಿಂಸಾತ್ಮಕ ಧೋರಣೆ, ಯಾವುದೋ ಅಗೋಚರ ಶಕ್ತಿಯೊಂದನ್ನು ರಕ್ಷಿಸುತ್ತದೆ. ಈ ಅಗೋಚರ ಶಕ್ತಿಗಳೇ ಸಾಮಾಜಿಕ ಕ್ಷೋಭೆ ಮತ್ತು ಸಾಮುದಾಯಿಕ ವಿಘಟನೆಯ ಫಲಾನುಭವಿಗಳಾಗಿರುತ್ತವೆ. ಯುವ ಮನಸುಗಳಲ್ಲಿ ಅನ್ಯಮತ ದ್ವೇಷ, ಜಾತಿ ಶ್ರೇಷ್ಠತೆ, ಪುರುಷ ಪ್ರಧಾನ ಅಹಮಿಕೆ, ಸಾಮಾಜಿಕ ಮೇಲರಿಮೆ ಮತ್ತು ಮತಭೇದದ ಬೀಜಗಳನ್ನು ಬಿತ್ತುವ ಮೂಲಕ, ಸಮಾಜದಲ್ಲಿ ಶಾಶ್ವತ ಬಿರುಕುಗಳನ್ನು ಸೃಷ್ಟಿಸುವುದರಲ್ಲಿ ಈ ಫಲಾನುಭವಿ ಸಂಘಟನೆಗಳು, ಸಂಸ್ಥೆಗಳು ಯಶಸ್ವಿಯಾಗುತ್ತವೆ.



ಈ ಸಾಂಸ್ಥಿಕ ನೆಲೆಗಳು ಅಧಿಕಾರ ರಾಜಕಾರಣದಲ್ಲಿ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳಲಾರಂಭಿಸಿದಾಗ ಇಡೀ ರಾಜಕೀಯ ಕ್ಷೇತ್ರವೇ ಕಲುಷಿತವಾಗಿಬಿಡುತ್ತದೆ. ಭಾರತ ಇಂತಹ ಒಂದು ವಿದ್ಯಮಾನಕ್ಕೆ ಸಾಕ್ಷಿಯಾಗಿದೆ. ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಲು ನೆರವಾಗಬೇಕಿದ್ದ ಬಹುಸಾಂಸ್ಕೃತಿಕ ನೆಲೆಗಳಲ್ಲಿ ಇದ್ದಂತಹ ಒಳಬಿರುಕುಗಳನ್ನೇ ಬಳಸಿಕೊಂಡ ಹಿಂದುತ್ವ ರಾಜಕಾರಣ ಭಾರತದ ಯುವ ಪೀಳಿಗೆಯನ್ನು ವಿಭಿನ್ನ ಮಾರ್ಗದಲ್ಲಿ ಕೊಂಡೊಯ್ದಿದೆ. ಬಹುತ್ವ ಸಂಸ್ಕೃತಿಯನ್ನು ಕಾಪಾಡಬೇಕಿದ್ದ ದಲಿತ ಮತ್ತು ಅಲ್ಪಸಂಖ್ಯಾತ ಸಮುದಾಯಗಳು ತಮ್ಮೊಳಗಿನ ವಿಘಟನೆಯ ಕಾರಣದಿಂದಾಗಿಯೇ ಇಂದು ಹಿಂದೂ ಮತ್ತು ಮುಸ್ಲಿಂ ಮತೀಯವಾದಕ್ಕೆ ಬಲಿಯಾಗುತ್ತಿವೆ. ಯುವ ಜನಾಂಗದಲ್ಲಿ ಇರುವ ಉತ್ಸಾಹ ಮತ್ತು ಸ್ಫೂರ್ತಿಯನ್ನು ಸಮಾಜಮುಖಿ ಮಾರ್ಗದಲ್ಲಿ ಬಳಸಿಕೊಂಡು ಒಂದು ಸೌಹಾರ್ದಯುತ ಸಮಾಜವನ್ನು ಕಟ್ಟಲು ಮುಂದಾಗಬೇಕಾದ ಹೊತ್ತಿನಲ್ಲಿ, ಹಿಂದೂ ಮತ್ತು ಮುಸ್ಲಿಂ ಸಂಘಟನೆಗಳು ಈ ಯುವ ಮನಸುಗಳಲ್ಲಿ ಧಾರ್ಮಿಕ ಉನ್ಮಾದವನ್ನು ಹೆಚ್ಚಿಸುವ ಮೂಲಕ ತಮ್ಮ ಸಾಂಸ್ಥಿಕ ನೆಲೆಗಳನ್ನು ವಿಸ್ತರಿಸಿಕೊಳ್ಳುತ್ತಿವೆ.

ತಾವು ಅನುಸರಿಸುವ, ಅನುಕರಿಸುವ ಮತ್ತು ಆಚರಿಸುವ ಧರ್ಮ ಮತ್ತು ಮತೀಯ ಆಚರಣೆಗಳ ಮೂಲ ಸ್ವರೂಪವನ್ನೂ ಅರಿಯದ ಯುವ ಪೀಳಿಗೆ, ಮತಾಂಧ ನಾಯಕರ ಅಣತಿಯಂತೆ ನಡೆಯುತ್ತಿರುವುದರಿಂದಲೇ ಹುಬ್ಬಳ್ಳಿ, ಜಹಂಗೀರಪುರ ಸಂಭವಿಸುತ್ತದೆ. ಅಥವಾ ಕೇರಳದಲ್ಲಿ ನಡೆಯುತ್ತಿರುವಂತಹ ಹತ್ಯಾಸರಣಿಗೆ ಕಾರಣವಾಗುತ್ತವೆ. ಎಡಪಕ್ಷಗಳು ಅಧಿಕಾರದಲ್ಲಿರುವ ಕೇರಳದಲ್ಲೂ ಸಹ ಎಸ್‌ಡಿಪಿಐ ಮತ್ತು ಆರೆಸ್ಸೆಸ್ ನಡುವಿನ ಸಂಘರ್ಷದಲ್ಲಿ ಅಮಾಯಕರು ಬಲಿಯಾಗುತ್ತಿದ್ದಾರೆ. ಇದನ್ನು ಸಾಂಸ್ಕೃತಿಕ ಸಂಘರ್ಷ ಎನ್ನುವುದಕ್ಕಿಂತಲೂ ಮತಾಂಧ ಸಂಘಟನೆಗಳ ನಡುವಿನ ಅಸ್ತಿತ್ವದ ಸಂಘರ್ಷ ಎಂದು ಪರಿಗಣಿಸಿದರೆ, ಮತಾಂಧತೆಯ ಒಳಸುಳಿಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ತಾವು ಹಿಂಸಾತ್ಮಕ ಮಾರ್ಗವನ್ನು ಅನುಸರಿಸುವುದಿಲ್ಲ ಎಂದು ಶಪಥ ಮಾಡುವ ಮತೀಯ ಸಂಘಟನೆಗಳು ಕೇರಳದಲ್ಲಿ ನಡೆದಂತಹ ಹತ್ಯೆಗಳು ಸಂಭವಿಸಿದಾಗ, ನೇಪಥ್ಯಕ್ಕೆ ಸರಿಯುತ್ತವೆ. ಹುಬ್ಬಳ್ಳಿಯಂತಹ ಘಟನೆಗಳು ಸಂಭವಿಸಿದಾಗ ಅದನ್ನು ಕಿಡಿಗೇಡಿಗಳ ಕೃತ್ಯ ಎಂದು ಬಣ್ಣಿಸಿ ಸುಮ್ಮನಾಗುತ್ತವೆ. ಸರ್ಕಾರದ ದೃಷ್ಟಿಯಲ್ಲಿ ಇಂತಹ ಘಟನೆಗಳು ಕೇವಲ ಕಾನೂನು ಸುವ್ಯವಸ್ಥೆಯ ಪ್ರಶ್ನೆಯಾಗಿಯೇ ಉಳಿಯುವುದರಿಂದ, ಅಗೋಚರ ಸಾಂಘಿಕ ನೆಲೆಗಳು ತಮ್ಮ ಭದ್ರಕೋಟೆಗಳಲ್ಲಿ ಸುರಕ್ಷಿತವಾಗಿ ಉಳಿಯುವುದು ಸಾಧ್ಯವಾಗುತ್ತದೆ.

ಆಡಳಿತಾರೂಢ ರಾಜಕೀಯ ಪಕ್ಷಗಳಿಗೆ ಸಮಾಜದ ನಾಡಿ ಮಿಡಿತ ಅರ್ಥವಾಗುವಂತಿದ್ದರೆ, ಈ ರೀತಿಯ ಕ್ಷೋಭೆಯ ಮೂಲ ಕಾರಣಗಳನ್ನು ಶೋಧಿಸಿ, ನಿಯಂತ್ರಿಸುವುದು ಕಷ್ಟವಾಗಲಿಕ್ಕಿಲ್ಲ. ದುರಂತ ಎಂದರೆ ಭಾರತದ ಪ್ರಜಾತಂತ್ರ ವ್ಯವಸ್ಥೆ ಇಂದು ಮತೀಯ ರಾಜಕಾರಣದ ನೆಲೆಯಾಗಿದೆ. ಸಂವಿಧಾನವನ್ನು ಮತ್ತು ಸಾಂವಿಧಾನಿಕ ಮೌಲ್ಯಗಳನ್ನು ಪ್ರತಿನಿಧಿಸಬೇಕಾದ ಜನಪ್ರತಿನಿಧಿಗಳು ಹಿಂದೂ ಅಥವಾ ಮುಸ್ಲಿಂ ಮತಾಂಧ ಸಂಘಟನೆಗಳ ವಕ್ತಾರರಂತೆ ವರ್ತಿಸುವುದು ಸಾಮಾನ್ಯವಾಗಿಹೋಗಿದೆ. ತಮ್ಮ ರಾಜಕೀಯ ಭೂಮಿಕೆಯ ವಿಸ್ತರಣೆಗಾಗಿ ಮತೀಯ ನೆಲೆಗಳನ್ನು ಬಳಸಿಕೊಳ್ಳುತ್ತಿರುವ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಮುಂತಾದ ಪಕ್ಷಗಳು ಸಾಮಾಜಿಕ ಸಮನ್ವಯಕ್ಕಿಂತಲೂ ಹೆಚ್ಚಿನ ಪ್ರಾಶಸ್ತ್ಯವನ್ನು ಸಾಮುದಾಯಿಕ ಅಸ್ಮಿತೆಗಳಿಗೆ ನೀಡುತ್ತಿರುವುದರಿಂದಲೇ ಓಲೈಕೆ ರಾಜಕಾರಣ, ತುಷ್ಟೀಕರಣ ಮುಂತಾದ ಪದಗಳು ಅರ್ಥಹೀನವಾಗುತ್ತಿವೆ. ಜಾತಿ, ಮತ ಮತ್ತು ಧಾರ್ಮಿಕ ಅಸ್ಮಿತೆಗಳನ್ನು ಅವಲಂಬಿಸದೆ ಹೋದರೆ ಈ ಮೂರೂ ಪಕ್ಷಗಳು ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತವೆ. ಅಧಿಕಾರ ರಾಜಕಾರಣಕ್ಕೆ ನೆರವಾಗುವ ಕಾರ್ಪೋರೇಟ್ ಮಾರುಕಟ್ಟೆಯ ಶಕ್ತಿಗಳನ್ನು ಓಲೈಸುತ್ತಲೇ ತಮ್ಮ ಈ ಅಸ್ತಿತ್ವವನ್ನು ವಿಸ್ತರಿಸಿಕೊಳ್ಳಲು ಹವಣಿಸುತ್ತಿರುವ ಮೂರೂ ರಾಜಕೀಯ ಪಕ್ಷಗಳು, ಯುವ ಪೀಳಿಗೆಗೆ ಒಂದು ಮೌಲ್ಯಯುತವಾದ ರಾಜಕೀಯ ವಾತಾವರಣವನ್ನು ನಿರ್ಮಿಸಲು ಸಾಧ್ಯವಾಗದಿರುವುದನ್ನು ಗಂಭೀರವಾಗಿ ಪರಿಗಣಿಸಬೇಕಿದೆ.

ಇಂದು ಯುವ ಪೀಳಿಗೆಯಲ್ಲಿ ಹಲವು ರೀತಿಯ ಕನಸುಗಳಿವೆ. ಈ ಕನಸುಗಳು ರೆಕ್ಕೆ ಪುಕ್ಕವಿಲ್ಲದೆ ಯಾವ ದಿಕ್ಕಿನಲ್ಲಿ ಬೇಕಾದರೂ ಸಂಚರಿಸುತ್ತವೆ. ಸ್ವಾತಂತ್ರ್ಯ ಮತ್ತು ಸ್ವೇಚ್ಛಾಚಾರದ ನಡುವಿನ ಸೂಕ್ಷ್ಮ ವ್ಯತ್ಯಾಸವನ್ನು ಗ್ರಹಿಸುವ ಸಾಮರ್ಥ್ಯವನ್ನೂ ಕಳೆದುಕೊಂಡಿರುವ ಈ ಯುವ ಪೀಳಿಗೆಗೆ ಭಾರತದ ಬಹುಸಾಂಸ್ಕೃತಿಕ ನೆಲೆಗಳಲ್ಲಿ ಮುಕ್ತ ಅವಕಾಶ ನೀಡುವುದು,. ಪ್ರಜಾಪ್ರಭುತ್ವದ ಮೌಲ್ಯಗಳಲ್ಲಿ ನಂಬಿಕೆ ಉಂಟುಮಾಡುವಂತಹ ಒಂದು ಸೌಹಾರ್ದ ವಾತಾವರಣವನ್ನು ನಿರ್ಮಿಸುವುದು ಸಮಾಜದ ನೈತಿಕ ಜವಾಬ್ದಾರಿಯಾಗಿದೆ. ಈ ಜವಾಬ್ದಾರಿಯನ್ನು ನಿರ್ವಹಿಸುವ ನೈತಿಕತೆಯನ್ನು, ಮೌಲ್ಯಯುತ ಅರ್ಹತೆಯನ್ನು ಪ್ರಧಾನ ರಾಜಕೀಯ ಪಕ್ಷಗಳು ಕಳೆದುಕೊಂಡಿವೆ. ಮಾರುಕಟ್ಟೆಯ ಪ್ರಲೋಭನೆಗೊಳಗಾಗಿ ತಮ್ಮ ಸ್ವಂತಿಕೆಯನ್ನೇ ಕಳೆದುಕೊಂಡಿರುವ ಮಾಧ್ಯಮಗಳು ಅಧಿಕಾರ ರಾಜಕಾರಣದ ಬಾಲಂಗೋಚಿಗಳಾಗಿರುವುದರಿಂದ ತಮ್ಮ ಸಾಮಾಜಿಕ ಜವಾಬ್ದಾರಿಯಿಂದ ವಿಮುಖವಾಗಿವೆ. ಸಮಾಜದಲ್ಲಿ ಸಂಭವಿಸುವ ಕ್ಷೋಭೆಯನ್ನು ಮತ್ತಷ್ಟು ತೀಕ್ಷ್ಣಗೊಳಿಸುವ ರೀತಿಯಲ್ಲಿ ಸುದ್ದಿಗಳನ್ನು ಬಿತ್ತರಿಸುವ ವಿದ್ಯುನ್ಮಾನ ಸುದ್ದಿಮನೆಗಳು ಮತ್ತು ಅದರ ನಿರೂಪಕರು, ಯಾವುದೋ ಒಂದು ಪಕ್ಷದ ಸೈದ್ಧಾಂತಿಕ ನೆಲೆಗಳಲ್ಲಿ ಅಥವಾ ಮತೀಯ ಸಾಂಸ್ಥಿಕ ನೆಲೆಗಳಲ್ಲಿ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುತ್ತಿರುವುದರಿಂದ, ಯುವ ಪೀಳಿಗೆಯನ್ನು ಸರಿದಾರಿಗೆ ತರುವ ನೈತಿಕತೆಯನ್ನು ಕಳೆದುಕೊಂಡಿವೆ. ಸುದ್ದಿಮನೆಗಳು ನಡೆಸುವ ಚರ್ಚೆಗಳು ಮತ್ತು ಚರ್ಚೆಗೆ ಆಹ್ವಾನಿಸಲಾಗುವ ವ್ಯಕ್ತಿಗಳನ್ನು ಗಮನಿಸಿದಾಗ, ಕೆಲವು ಅಪವಾದಗಳನ್ನು ಹೊರತುಪಡಿಸಿ, ಇಡೀ ಮಾಧ್ಯಮ ವಲಯ ನೈತಿಕವಾಗಿ ಅವನತಿ ಹೊಂದಿರುವುದು ಸ್ಪಷ್ಟವಾಗುತ್ತದೆ.

ಇಂತಹ ವಿಷಮ ಸನ್ನಿವೇಶದಲ್ಲಿ ದಿಕ್ಕುತಪ್ಪಿದಂತೆ ಕಾಣುತ್ತಿರುವ ಯುವ ಪೀಳಿಗೆಗೆ ಸರಿದಾರಿಯನ್ನು ತೋರುವುದಾದರೂ ಯಾರು? ತೋರುವುದಾದರೂ ಹೇಗೆ? ರಾಮಭಕ್ತರ ಮೇಲೆ, ಹನುಮ ಆರಾಧಕರ ಮೇಲೆ ಕಲ್ಲೆಸೆಯುವ ಮುಸ್ಲಿಂ ಯುವಕರು, ಮಸೀದಿಯ ಮೇಲೆ ಕಲ್ಲೆಸೆಯುವ ಹಿಂದೂ ಹುಡುಗರು, ಸಾಮಾಜಿಕ ತಾಣದ ಒಂದು ಸಾಧಾರಣ ಪೋಸ್ಟ್‌ನಿಂದ ಉನ್ಮಾದಕ್ಕೊಳಗಾಗುವ ಯುವ ಪೀಳಿಗೆ, ಲೇಖನಿ ಕುಂಚ ಹಿಡಿಯುವ ಕೈಗಳಲ್ಲಿ ➚

ಉಕ್ರೇನ್ ಹೊರತು ಪಡಿಸಿಯೂ ಆಳಗೊಂಡ ಭಾರತ–ಆಮೇರಿಕ ಮೈತ್ರಿ

ಲಾಜಿಸ್ಟಿಕ್ಸ್ ಒಪ್ಪಂದದ ಅಡಿಯಲ್ಲಿ, ತನ್ನ ಯುದ್ಧನೌಕೆಗಳಿಗೆ ಭಾರತದಲ್ಲಿ ನಿರ್ವಹಣೆ, ದುರಸ್ತಿ ಮತ್ತು ಕೂಲಂಕುಷ ಸೌಲಭ್ಯವನ್ನು (MRO) ಸ್ಥಾಪಿಸಲು ಅಮೇರಿಕ ಪರಿಗಣಿಸುತ್ತಿದೆ. ಹೀಗಾಗಿ, ಭಾರತವು ರಷ್ಯಾದ ಮಿಲಿಟರಿ ಉಪಕರಣಗಳನ್ನು ಖರೀದಿಸುವುದನ್ನು ಮುಂದುವರೆಸಿದರೆ ನಿರ್ಬಂಧಗಳ ಬೆದರಿಕೆ ಮತ್ತು ಅದೇ ಸಂದರ್ಭದಲ್ಲಿ ಅಮೇರಿಕದ ಶಸ್ತ್ರಾಸ್ತ್ರ ವ್ಯವಸ್ಥೆಗಳ ಖರೀದಿಗೆ ಪ್ರೋತ್ಸಾಹ ನೀಡುವ– ಕ್ಯಾರಟ್ ಮತ್ತು ಸ್ಟಿಕ್ ನೀತಿಯನ್ನು ಬಳಸಲಾಗುತ್ತಿದೆ.

ಪ್ರಕಾಶ್ ಕಾರಟ್ ಅನು: ಕೆ. ಪ್ರಕಾಶ್

ತಪ್ಪು ಎಂದು, ಉಕ್ರೇನ್ ಸಂಘರ್ಷದ ಕುರಿತು ಮೋದಿ ಸರ್ಕಾರ ತೆಗೆದುಕೊಂಡಿರುವ ನಿಲುವು ತೋರಿಸುತ್ತದೆ ಎಂದು ಕೆಲವು ರಾಜಕೀಯ ವಿಶ್ಲೇಷಕರು ವಾದಿಸಿದ್ದಾರೆ. ಉಕ್ರೇನ್ ಮೇಲಿನ ರಷ್ಯನ್ ಆಕ್ರಮಣವನ್ನು ಖಂಡಿಸುವ ವಿಶ್ವಸಂಸ್ಥೆಯ ನಿರ್ಣಯದಲ್ಲಿ ಭಾರತ ತಟಸ್ಥವಾಗಿ ಉಳಿದಿದ್ದು ಮತ್ತು ರಷ್ಯನ್ ತೈಲ ಅಥವಾ ಅನಿಲವನ್ನು ದೇಶಗಳು ಖರೀದಿಸಬಾರದು ಎಂಬ ಅಮೇರಿಕಾದ ನಿಲುವಿನ ಹೊರತಾಗಿಯೂ ಭಾರತ ರಷ್ಯಾದಿಂದ ಕಚ್ಚಾ ತೈಲವನ್ನು ಸಣ್ಣ ಪ್ರಮಾಣದಲ್ಲಿ ಖರೀದಿಸುವ ತೀರ್ಮಾನವು, ಭಾರತದ ಸ್ವತಂತ್ರ ವಿದೇಶಾಂಗ ನೀತಿ ಮತ್ತು ವ್ಯೂಹಾತ್ಮಕ ಸ್ವಾಯತ್ತತೆಗೆ ಒಂದು ನಿದರ್ಶನವಾಗಿ ಕಾಣಲಾಗುತ್ತಿದೆ.

ಇದು ಪರಿಸ್ಥಿತಿಯ ತೋರಿಕೆಯ ಅಂದಾಜಷ್ಟೆ. ಭಾರತವು ಕಳೆದ ಒಂದೂವರೆ ದಶಕದಲ್ಲಿ ಅಮೇರಿಕಾದೊಂದಿಗೆ ವ್ಯೂಹಾತ್ಮಕ ಮೈತ್ರಿಯನ್ನು ಮಾಡಿಕೊಂಡಿದೆ. ಈ ಪಾಲುದಾರಿಕೆಯ ಕೇಂದ್ರ ಬಿಂದುವಾಗಿ ರಕ್ಷಣಾ ಸಹಕಾರ ಒಪ್ಪಂದವಿದೆ. ಮೋದಿ ಸರ್ಕಾರದ ಅವಧಿಯಲ್ಲಿ, ಲಾಜಿಸ್ಟಿಕ್ಸ್ ಒಪ್ಪಂದಗಳು (LEMOA)–2016, ಸಂವಹನ ಜಾಲದ ಒಗ್ಗೂಡುವಿಕೆ (COMCASA)–2018 ಮತ್ತು ಮೂಲಭೂತ ವಿನಿಮಯ ಮತ್ತು ಸಹಕಾರ ಒಪ್ಪಂದ (BECA)–2020, ಈ ಮೂರು ಅಸ್ತಿಭಾರ ಒಪ್ಪಂದಗಳಿಗೆ ಸಹಿ ಹಾಕುವುದರೊಂದಿಗೆ ಮಿಲಿಟರಿ ಮತ್ತು ವ್ಯೂಹಾತ್ಮಕ ಸಹಕಾರವು ಬಲಿಷ್ಟಗೊಂಡಿತು. ಈ ಒಪ್ಪಂದಗಳ ಸ್ವರೂಪವು, ತನ್ನ ಆಪ್ತ ಮಿಲಿಟರಿ ಮಿತ್ರರಾಷ್ಟ್ರಗಳೊಂದಿಗಿನ ಅಮೇರಿಕಾದ ಒಪ್ಪಂದಗಳ ರೀತಿಯದ್ದೇ ಆಗಿದೆ.

ಜಪಾನ್ ಮತ್ತು ಆಸ್ಟ್ರೇಲಿಯಾವನ್ನು ಒಳಗೊಂಡಿರುವ ಇಂಡೋ–ಪೆಸಿಫಿಕ್ ಕಾರ್ಯವ್ಯೂಹವನ್ನು ಮುಂದೊತ್ತಲು ಅಮೇರಿಕ ರೂಪಿಸಿದ ಚತುರ್ಭುಜ ಮೈತ್ರಿಯ ಭಾಗವಾಗಿ ಭಾರತವೂ ಸೇರ್ಪಡೆ ಆಯಿತು. ಜೂನ್ 2020 ರಲ್ಲಿ ಲಡಾಖ್‌ನಲ್ಲಿನ ನೈಜ ನಿಯಂತ್ರಣ ರೇಖೆಯಲ್ಲಿನ ಘಟನೆಗಳಿಗೆ ಮುಂಚೆಯೇ QUAD ಅಸ್ತಿತ್ವಕ್ಕೆ ಬಂದಿತು ಎಂಬುದನ್ನು ಗಮನಿಸಬೇಕು.

ಎರಡೂ ಕಡೆಯ ರಕ್ಷಣಾ ಮತ್ತು ವಿದೇಶಾಂಗ ಮಂತ್ರಿಗಳನ್ನು ಒಳಗೊಂಡಿರುವ 2+2 ಸಚಿವರ ವೇದಿಕೆಯನ್ನು ಸಾಂಸ್ಥಿಕಗೊಳಿಸಲಾಯಿತು ಮತ್ತು ಅದರ ನಿಯಮಿತ ಸಭೆಗಳನ್ನು ಸೆಪ್ಟೆಂಬರ್ 2018 ರಲ್ಲಿ ಪ್ರಾರಂಭಿಸಲಾಯಿತು.

ಅಮೇರಿಕದೊಂದಿಗೆ ಸಾಮೀಪ್ಯತೆ ಹೆಚ್ಚುತ್ತಿರುವ ಇಂತಹ ಪರಿಸ್ಥಿತಿಯಲ್ಲಿ ಉಕ್ರೇನ್ ಬಿಕ್ಕಟ್ಟಿನ ಬಗ್ಗೆ ಭಾರತದ ನಿಲುವನ್ನು ಗಮನಿಸಬೇಕು. ನ್ಯಾಟೋಗೆ ಸೇರಿಲ್ಲದ ಪ್ರಮುಖ ಮಿತ್ರರಾಷ್ಟ್ರವಾದ ಭಾರತವು ರಷ್ಯಾ ವಿರೋಧಿ ಬ್ಯಾಂಡ್‌ವ್ಯಾಗನ್‌ಗೆ ಸೇರದಿರುವ ಬಗ್ಗೆ ಅಮೇರಿಕ ಅತೃಪ್ತಿ ಹೊಂದಿದೆ. ಉಕ್ರೇನ್ ಸಮಸ್ಯೆಗೆ ಸಂಬಂಧಿಸಿ, QUAD ಪಾಲುದಾರರಾದ ಆಸ್ಟ್ರೇಲಿಯಾ ಮತ್ತು ಜಪಾನ್ ಸಂಪೂರ್ಣವಾಗಿ ತಮ್ಮೊಂದಿಗಿವೆ, ಆದರೆ ಭಾರತ "ಸ್ವಲ್ಪಮಟ್ಟಿಗೆ ಅಲುಗಾಡುತ್ತಿದೆ" ಎಂದು ಅಮೇರಿಕದ ಅಧ್ಯಕ್ಷ ಬೈಡನ್ ಹೇಳಿದ್ದಾರೆ. ಅಂದಿನಿಂದ, ಅಮೇರಿಕ ಮತ್ತು ಯೂರೋಪಿಯನ್ ಯೂನಿಯನ್ ರಷ್ಯದ ಮೇಲೆ ಹೇರಿರುವ ನಿರ್ಬಂಧಗಳನ್ನು ಅನುಸರಿಸಲು ಮತ್ತು ತೈಲ ಖರೀದಿಯನ್ನು ನಿಲ್ಲಿಸಲು ಭಾರತದ ಮೇಲೆ ಅಮೇರಿಕ ಒತ್ತಡವನ್ನು ಹೆಚ್ಚಿಸುತ್ತಿದೆ. ತೈಲ ವ್ಯಾಪಾರದ ಪಾವತಿಯನ್ನು ರೂಪಾಯಿ–ರೂಬಲ್‌ನಲ್ಲಿ ವಿನಿಮಯ ಮಾಡುವ ಚರ್ಚೆಗಳು ಅಮೇರಿಕವನ್ನು ಕೆರಳಿಸಿವೆ.

ರಾಷ್ಟ್ರೀಯ ಭದ್ರತಾ ಉಪ ಸಲಹೆಗಾರ ದಿಲೀಪ್ ಸಿಂಗ್ ಅವರು ದೆಹಲಿಗೆ ಭೇಟಿ ನೀಡಿ, ರಷ್ಯಾ ವಿರುದ್ಧದ ನಿರ್ಬಂಧಗಳನ್ನು ತಪ್ಪಿಸಲು ಯಾವುದೇ ಪ್ರಯತ್ನ ಮಾಡಿದರೆ ಭಾರತದ ಮೇಲೆ ಪರಿಣಾಮ ಬೀರುತ್ತದೆ ಎಂದು ತಿಳಿಸಿದರು. ಯುರೋಪ್ ರಾಷ್ಟ್ರಗಳು ರಷ್ಯಾದಿಂದ ತೈಲ ಮತ್ತು ಅನಿಲವನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುವುದನ್ನು ಮುಂದುವರೆಸುತ್ತಿವೆ ಎಂದು ಭಾರತವು ಆ ಸಮಯದಲ್ಲಿ ಗಮನ ಸೆಳೆದಿತ್ತು.

2+2 ಸಭೆಗೆ ಕೆಲವೇ ಗಂಟೆಗಳ ಮೊದಲು, ಏಪ್ರಿಲ್ 12 ರಂದು ಪ್ರಧಾನಿ ಮೋದಿ ಅವರೊಂದಿಗಿನ ವರ್ಚುವಲ್ ಶೃಂಗಸಭೆಯಲ್ಲಿ ಅಧ್ಯಕ್ಷ ಬೈಡೆನ್, ಹೆಚ್ಚಿನ ರಷ್ಯಾದ ತೈಲವನ್ನು ಆಮದು ಮಾಡಿಕೊಳ್ಳುವುದು ಭಾರತದ ಹಿತಾಸಕ್ತಿಗೆ ಪೂರಕವಲ್ಲ ಎಂದು ಪುನರುಚ್ಚರಿಸಿದರು. ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಜೆನ್ ಪ್ಸಾಕಿ ಅವರು ಮೋದಿಯೊಂದಿಗಿನ ಕರೆಯಲ್ಲಿ ಬೈಡೆನ್ ಅವರ ಹೇಳಿಕೆಗಳು "ಕೆಲವು ದಿನಗಳ ಹಿಂದೆ ಅವರ ಭೇಟಿಯ ಸಮಯದಲ್ಲಿ ಉಪ ರಾಷ್ಟ್ರೀಯ ಭದ್ರತಾ ಸಲಹೆಗಾರರು ಮಾಡಿದ್ದಕ್ಕೆ ಅನುಗುಣವಾಗಿವೆ" ಎಂದು ಸುದ್ದಿಗಾರರಿಗೆ ತಿಳಿಸಿದರು.

ಭಾರತದ ರಕ್ಷಣಾ ಮತ್ತು ವಿದೇಶಾಂಗ ಮಂತ್ರಿಗಳ ವಾಷಿಂಗ್ಟನ್ ಭೇಟಿಯ ಸಮಯದಲ್ಲಿ ಏನಾಯಿತು ಎಂಬುದರ ಜೊತೆಯಲ್ಲೇ ಭಾರತದ ಮೇಲೆ ಒತ್ತಡ ಹೇರುವ ಈ ಪ್ರಯತ್ನವನ್ನು ನೋಡಬೇಕು. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಅಮೇರಿಕದ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ನಡುವಿನ ಸಭೆಯಲ್ಲಿ ಅವರು ರಕ್ಷಣಾ ಪಾಲುದಾರಿಕೆಯನ್ನು ಬಲಪಡಿಸುವ ಮತ್ತು ದ್ವಿಪಕ್ಷೀಯ ರಕ್ಷಣಾ ಸಹಕಾರದ ವ್ಯಾಪ್ತಿಯನ್ನು ಹೆಚ್ಚಿಸುವ ಮಾರ್ಗಗಳ ಕುರಿತು ಚರ್ಚಿಸಿದರು. ಸಭೆಯ ನಂತರ ಬಿಡುಗಡೆಯಾದ ಹೇಳಿಕೆಯು ರಕ್ಷಣಾ ಉದ್ಯಮಗಳ ನಡುವೆ ನಿಕಟ ಸಹಯೋಗವನ್ನು ಹೊಂದಿರುತ್ತದೆ ಎಂದು ಹೇಳಿದೆ. ರಷ್ಯಾದ ಮಿಲಿಟರಿ ಸರಬರಾಜು ಮತ್ತು ಬಿಡಿಭಾಗಗಳ ಮೇಲೆ ನಿರಂತರ ಅವಲಂಬನೆಯನ್ನು ಅರ್ಥಮಾಡಿಕೊಳ್ಳಲು ಭಾರತ ಕೇಳುತ್ತಿರುವಾಗ ಹೆಚ್ಚಿನ ಅಮೇರಿಕದ ಶಸ್ತ್ರಾಸ್ತ್ರಗಳು ಮತ್ತು ರಕ್ಷಣಾ ಸಾಧನಗಳನ್ನು ಖರೀದಿಸಲು ಭಾರತವನ್ನು ಒಪ್ಪಿಸಲು ಅಮೇರಿಕವು ಈ ಸಂದರ್ಭವನ್ನು ಬಳಸಿಕೊಳ್ಳುತ್ತಿದೆ. 2+2 ಮಾತುಕತೆಯ ನಂತರ ಅಮೇರಿಕದ ವಿದೇಶಾಂಗ ಕಾರ್ಯದರ್ಶಿ ಆಂಟೋನಿ ಬ್ಲಿಂಕೆನ್, ರಷ್ಯಾದಿಂದ ಎಸ್–400 ಕ್ಷಿಪಣಿ ವ್ಯವಸ್ಥೆಯ ಖರೀದಿಗೆ ಸಂಬಂಧಿಸಿ ಭಾರತದ ಮೇಲೆ ನಿರ್ಬಂಧಗಳನ್ನು ಅನ್ವಯಿಸುವ ಬಗ್ಗೆ ಇನ್ನೂ ಯಾವುದೇ ನಿರ್ಣಯವನ್ನು ಮಾಡಲಾಗಿಲ್ಲ ಎಂದು ಹೇಳಿದ್ದಾರೆ. ಆದರೂ ಲಾಜಿಸ್ಟಿಕ್ಸ್ ಒಪ್ಪಂದದ ಅಡಿಯಲ್ಲಿ, ತನ್ನ ಯುದ್ಧನೌಕೆಗಳಿಗೆ ಭಾರತದಲ್ಲಿ ನಿರ್ವಹಣೆ, ದುರಸ್ತಿ ಮತ್ತು ಕೂಲಂಕುಷ ಸೌಲಭ್ಯವನ್ನು (MRO) ಸ್ಥಾಪಿಸಲು ಅಮೇರಿಕ ಪರಿಗಣಿಸುತ್ತಿದೆ. ಹೀಗಾಗಿ, ಭಾರತವು ರಷ್ಯಾದ ಮಿಲಿಟರಿ ಉಪಕರಣಗಳನ್ನು ಖರೀದಿಸುವುದನ್ನು ಮುಂದುವರೆಸಿದರೆ ನಿರ್ಬಂಧಗಳ ಬೆದರಿಕೆ ಮತ್ತು ಅದೇ ಸಂದರ್ಭದಲ್ಲಿ ಅಮೇರಿಕದ ಶಸ್ತ್ರಾಸ್ತ್ರ ವ್ಯವಸ್ಥೆಗಳ ಖರೀದಿಗೆ ಪ್ರೋತ್ಸಾಹ ನೀಡುವ–ಕ್ಯಾರಟ್ ಮತ್ತು ಸ್ಟಿಕ್ ನೀತಿಯನ್ನು ಬಳಸಲಾಗುತ್ತಿದೆ.

"ನಾವು ನೈಸರ್ಗಿಕ ಪಾಲುದಾರರು ಮತ್ತು ಕಳೆದ ಕೆಲವು ವರ್ಷಗಳಲ್ಲಿ ಆಗಿರುವ ಪ್ರಗತಿ... ಒಂದು ದಶಕದ ಹಿಂದೆ ಊಹಿಸಿಕೊಳ್ಳುವುದು ಸಹ ಕಷ್ಟವಾಗಿತ್ತು" ಎಂದು ಮೋದಿಯವರು ಬೈಡೆನ್ ಅವರೊಂದಿಗಿನ ಮಾತುಕತೆಯಲ್ಲಿ ಅಮೇರಿಕಕ್ಕೆ ಭರವಸೆ ನೀಡಲು ಪ್ರಯತ್ನಿಸಿದರು ಉಕ್ರೇನ್ ಪ್ರಕರಣದ ಹೊರತಾಗಿಯೂ, ಅಮೇರಿಕದ ಜೊತೆಗಿನ ಅಂತಹ ಮೈತ್ರಿಯು ಸ್ವತಂತ್ರ ವಿದೇಶಾಂಗ ನೀತಿ ಮತ್ತು ಕಾರ್ಯವ್ಯೂಹದ ಸ್ವಾಯತ್ತತೆಯ ವ್ಯಾಪ್ತಿಯನ್ನು ದುರ್ಬಲಗೊಳಿಸುತ್ತದೆ ಎಂಬ ಯಾವುದೇ ಅರಿವು ಇಲ್ಲ.

ಪಾಶ್ಚಿಮಾತ್ಯ ಮಿಲಿಟರಿ ಮೈತ್ರಿಕೂಟ ನ್ಯಾಟೋದ ನಾಯಕನಾಗಿ ಅಮೇರಿಕವು ಅದರ ಕೆಲವು ಮಿತ್ರರಾಷ್ಟ್ರಗಳೊಂದಿಗೆ ಸಾಂದರ್ಭಿಕ ಭಿನ್ನಾಭಿಪ್ರಾಯಗಳನ್ನು ಹೊಂದಿದೆ. ಉದಾಹರಣೆಗೆ, ಟರ್ಕಿಯು ಸಿರಿಯಾದಂತಹ ಕೆಲವು ಪ್ರಮುಖ ವಿಷಯಗಳಲ್ಲಿ ಅಮೇರಿಕಕ್ಕಿಂತ ಭಿನ್ನವಾದ ನಿಲುವುಗಳನ್ನು ತೆಗೆದುಕೊಂಡಿತು. ಉಕ್ರೇನ್ ಮೇಲಿನ ರಷ್ಯಾದ ಆಕ್ರಮಣದವರೆಗೂ ಜರ್ಮನಿಯು ಅಮೆರಿಕದ ಇಚ್ಛೆಗೆ ವಿರುದ್ಧವಾಗಿ ನಾರ್ಡ್ ಸ್ಟ್ರೀಮ್ –2 ಗ್ಯಾಸ್ ಪೈಪ್‌ಲೈನ್‌ನೊಂದಿಗೆ ಮುಂದುವರಿಯುತ್ತಿತ್ತು.

ರಷ್ಯಾದೊಂದಿಗಿನ ಭಾರತದ ಸಂಬಂಧವನ್ನು ದುರ್ಬಲಗೊಳಿಸಲು ಅಮೇರಿಕವು ಭಾರತದ ಮೇಲೆ ಒತ್ತಡ ಹೇರುವುದನ್ನು ಮುಂದುವರಿಸುತ್ತದೆ. ಈ ಉದ್ದೇಶಕ್ಕಾಗಿಯೂ ಇದು 'ಚೀನಾ ಕಾರ್ಡ್' ಅನ್ನು ಉಪಯೋಗಿಸುತ್ತದೆ. ಗಡಿ ವಿಚಾರದಲ್ಲಿ ಭಾರತದ ಪರವಾಗಿ ಅಮೆರಿಕ ನಿಲ್ಲಲಿದೆ ಎಂಬ ರಕ್ಷಣಾ ಕಾರ್ಯದರ್ಶಿ ಆಸ್ಟಿನ್ ಹೇಳಿಕೆ ಹಾಗೂ ರಷ್ಯಾ–ಚೀನಾ ನಡುವಿನ ನಿಕಟ ಸಂಪರ್ಕ ಭಾರತದ ಸ್ಥಾನದ ಮೇಲೆ ಪರಿಣಾಮ ಬೀರಲಿದೆ ಎಂಬ ಮೋದಿ–ಬೈಡೆನ್ ಮಾತುಕತೆಯ ಅಧಿಕೃತ ಹೇಳಿಕೆಯು ಅಮೆರಿಕ ಮುಂದುವರಿಯಲಿರುವ ಹಾದಿಯನ್ನು ಸೂಚಿಸುತ್ತದೆ. ಭಾರತವನ್ನು ತನ್ನ ಇಂಡೋ–ಪೆಸಿಫಿಕ್ ಕಾರ್ಯವ್ಯೂಹ ಹತ್ತಿರ ಸೆಳೆಯುವುದು ಮತ್ತು ಭಾರತಕ್ಕೆ ಮಿಲಿಟರಿ ಉಪಕರಣಗಳ ಪ್ರಬಲ ಪೂರೈಕೆದಾರನಾಗುವುದು ಇದರ ವಿಶಾಲ ಉದ್ದೇಶವಾಗಿದೆ.

ರಷ್ಯಾ ವಿರುದ್ಧದ ಆಕ್ರಮಣಕಾರಿ ಅಮೇರಿಕದ ನಿಲುವಿನಲ್ಲಿ, ಉಕ್ರೇನ್ ಬಿಕ್ಕಟ್ಟು ಮತ್ತು ಇಂಡೋ–ಪೆಸಿಫಿಕ್ ಕಾರ್ಯವ್ಯೂಹದ ನಡುವೆ ಸಂಬಂಧವಿದೆ. ತನ್ನ ಅಧಿಪತ್ಯ ಚಲಾವಣೆಯ ಶಕ್ತಿ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ಜಾಗತಿಕ ಅಧಿಪತ್ಯವನ್ನು ಪುನರ್‌ಸ್ಥಾಪಿಸಲು ಅಮೇರಿಕದ ಪ್ರಯತ್ನದ ಭಾಗವಾಗಿ ಎರಡೂ ಇವೆ. ಈ ಯೋಜನೆಗೆ ಭಾರತ ಅತ್ಯಂತ ಮುಖ್ಯವಾಗಿದೆ, ಏಕೆಂದರೆ ಅಮೇರಿಕಕ್ಕೆ ಚೀನಾ ಅಂತಿಮವಾದ ಗುರಿಯಾಗಿದೆ. ಉಕ್ರೇನ್ ಬಿಕ್ಕಟ್ಟಿನಲ್ಲಿ ರಷ್ಯಾದೊಂದಿಗೆ ಹೇಗೆ ವ್ಯವಹರಿಸಬೇಕೆಂಬ ವಿಷಯದ ಹೊರತಾಗಿಯೂ ಭಾರತವನ್ನು ತನ್ನ ಅಧೀನ ಪಾಲುದಾರರನ್ನಾಗಿ ನಿರ್ವಹಿಸುವ ಪ್ರಯತ್ನವನ್ನು ಬಿಟ್ಟುಕೊಡುವುದಿಲ್ಲ. ಅಮೇರಿಕದ ಒಟ್ಟಾರೆ ವಿಶಾಲ ಯೋಜನೆಯಲ್ಲಿ ಇದು ಸಣ್ಣ ಕಿರಿಕಿರಿಯಷ್ಟೆ.





ಲಾಂಗು ಮಚ್ಚು ತಲವಾರು ಪಿಸ್ತೂಲುಗಳನ್ನು ಹಿಡಿಯುವ ಯುವ ಜನಾಂಗ ಇವರಾರೂ ವಸ್ತುಶಃ ದಿಕ್ಕುತಪ್ಪಿದವರಲ್ಲ. ದಿಕ್ಕುಗಾಣದವರು. ಏಕೆಂದರೆ ಈ ಯುವ ಪೀಳಿಗೆ ಯಾವ ದಿಕ್ಕಿನಲ್ಲಿ ಹೋದರೆ ಒಂದು ಸೌಹಾರ್ದಯುತ ಬದುಕು ಸಾಧ್ಯ ಎಂದು ತೋರಿಸಬೇಕಾದ ಪ್ರಜ್ಞಾವಂತ ಮನಸುಗಳು ಇಂದು ಹಿತವಲಯಗಳಲ್ಲಿ ಅಡಗಿ ಕುಳಿತಿವೆ. ವಾಮ ಮಾರ್ಗಗಳಿಗೆ ಪ್ರಚೋದಿಸುವ ಕಾಣದ ಕೈಗಳು ಈ ಯುವಜನಾಂಗದಲ್ಲಿ ಪ್ರೀತಿ, ವಾತ್ಸಲ್ಯ, ಭ್ರಾತೃತ್ವದ ಬದಲು ದ್ವೇಷ, ಅಸೂಯೆ, ಮತ್ಸರಗಳನ್ನು ಬೆಳೆಸುತ್ತಿವೆ. ಜಾತಿ, ಮತ, ಧಾರ್ಮಿಕ ಉನ್ಮಾದಕ್ಕೊಳಗಾಗಿರುವ ಯುವ ಜನಾಂಗ ತನ್ನ ವಿವೇಕ ಮತ್ತು ವಿವೇಚನೆ ಕಳೆದುಕೊಳ್ಳುವುದು ಸ್ವಾಭಾವಿಕ.

ಆಳುವ ವರ್ಗಗಳು ಉದ್ದೇಶಪೂರ್ವಕವಾಗಿಯೇ, ತಮ್ಮ ಸ್ವಾರ್ಥ ಸಾಧನೆಗಾಗಿ ವಿವೇಕರಹಿತವಾಗಿ ವರ್ತಿಸುತ್ತವೆ. ಆಡಳಿತ ವ್ಯವಸ್ಥೆಯನ್ನು ನಿರ್ವಹಿಸುವ ಸಂಸ್ಥೆಗಳು ವಿವೇಚನೆ ಇಲ್ಲದೆ ಸರ್ಕಾರದ ಆದೇಶಗಳನ್ನು ಪಾಲಿಸುತ್ತವೆ. ಈ ಹೊತ್ತಿನಲ್ಲಿ ಜಾಗೃತವಾಗಬೇಕಾದ್ದು ನಾಗರಿಕ ಪ್ರಜ್ಞೆ, ಸಾಮಾಜಿಕ ಕಾಳಜಿ ಮತ್ತು ಕಳಕಳಿ, ಮಾನವೀಯ ಮೌಲ್ಯಗಳನ್ನು ಜೀವಂತವಾಗಿರಿಸಲು ಶ್ರಮಿಸಬೇಕಾದ್ದು ನಮ್ಮ ಸಮಾಜ. ಈ ಸಮಾಜ ಪ್ರತಿಬಾರಿ ಎಡವಿದಾಗಲೂ ವಿಧ್ವಂಸಕ ಶಕ್ತಿಗಳು, ವಿಭಜಕ ಶಕ್ತಿಗಳು ವಿಜೃಂಭಿಸುತ್ತವೆ. ಇಂತಹ ಒಂದು ಸಂದಿಗ್ಧತೆಗೆ ಕರ್ನಾಟಕ, ಭಾರತ ಸಾಕ್ಷಿಯಾಗುತ್ತಿದೆ. ಜಹಂಗೀರಪುರದಿಂದ ಹುಬ್ಬಳ್ಳಿಯವರೆಗೆ ಇದು ಢಾಳಾಗಿ ಕಾಣುತ್ತಿದೆ. ಪ್ರಗತಿಪರ ಎಂದು ಬೆನ್ನುತಟ್ಟಿಕೊಳ್ಳುವ ಸಂಘಟನೆಗಳು, ಎಡಪಂಥೀಯ ಚಳುವಳಿಗಳು, ಮಹಿಳಾ ಸಮೂಹಗಳು, ಶೋಷಿತ ತಳಸಮುದಾಯಗಳನ್ನು ಪ್ರತಿನಿಧಿಸುವ ದಲಿತ ಸಂಘಟನೆಗಳು ಈ ನೈತಿಕ ಜವಾಬ್ದಾರಿಯನ್ನು ಹೆಗಲೇರಿಸಿಕೊಳ್ಳುವ ಕಾಲ ಸನ್ನಿಹಿತವಾಗಿದೆ. ಇಡೀ ಯುವ ಜನಾಂಗ ನಮ್ಮತ್ತ ನೋಡುತ್ತಿದೆ. ನಾವು ಅವರತ್ತ ಹೋಗುತ್ತಿದ್ದೇವೆಯೇ? ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳೋಣ.





ವಿವಾದಾತ್ಮಕ ವಿಡಿಯೋ ಸ್ಟೇಟಸ್ ಹುಬ್ಬಳ್ಳಿ ಗಲಭೆಗೆ ಪ್ರಚೋದನೆ ಏನು?

ಮಹೇಶ ಪತ್ತಾರ, ಹುಬ್ಬಳ್ಳಿ

ಏಪ್ರಿಲ್ 16, 2022 ಶನಿವಾರ ಹಳೆಹುಬ್ಬಳ್ಳಿಯ ಪಿ.ಯು.ಸಿ ವಿದ್ಯಾರ್ಥಿ ಅಭಿಷೇಕ ಹಿರೇಮಠ ಎಂಬಾತ ಮಕ್ಕಾ ಮಸೀದಿಯ ಮೇಲೆ ಭಗವಾಧ್ವಜ ಹಾರಾಡುವ ಮತ್ತು ಹನುಮಾನ್ ಚಿತ್ರ ಕಾಣುವಂತೆ ತಯಾರಿಸಿದ ವಿವಾದಾತ್ಮಕ ವಿಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ಸ್ಟೇಟಸ್ ಹಾಕಿದ್ದನು. ಅಂದು ಹನುಮ ಜಯಂತಿ ಇತ್ತೂ ಕೂಡಾ. ಈ ವಿಡಿಯೋ ಕ್ಷಣಾರ್ಧದಲ್ಲಿ ನಗರದಾದ್ಯಂತ ವೈರಲ್ಆಗಿತ್ತು. ಇದೇ ಗಲಭೆಗೆ ಮೂಲ ಕಾರಣ. ಯುವಕನ ಈ ಕುಕೃತ್ಯಕ್ಕೆ ಪ್ರಚೋದನೆ ಏನು ಹಾಗೂ ಯಾರು ಎಂಬುದು ಪ್ರಶ್ನೆಯಾಗಿದೆ. ಇದು ಆಳ ತನಿಖೆಯಿಂದ ಹೊರಬರಬೇಕಿದೆ.

ನಿರಂತರ ವಿವಾದಗಳು:

ಕಳೆದ ಕೆಲ ದಿನಗಳಿಂದ ಹಿಜಾಬ್, ಮುಸ್ಲಿಂ ವ್ಯಾಪಾರಿಗಳಿಗೆ ದೇವಸ್ಥಾನಗಳ ಆವರಣದಲ್ಲಿ ವ್ಯಾಪಾರಕ್ಕೆ ನಿರಾಕರಣೆ, ದಾಳಿಯ ನುಗ್ಗಿಕೇರಿ ಘಟನೆ, ಹಲಾಲ್–ಜಟ್ಕಾ ಕಟ್ ಮುಂತಾಗಿ ಒಂದು ಸಮುದಾಯವನ್ನು ಟಾರ್ಗೆಟ್ ಮಾಡಿ ಸೌಹಾರ್ದತೆ ಕದಡುವ ವಿವಾದಗಳು ಸಾಮಾಜಿಕ ಜಾಲತಾಣದ ಮುಖಾಂತರ ಯುವ ಸಮುದಾಯದ ಮೇಲೆ ಕೋಮುದ್ವೇಷ ಭಾವೋದ್ವೇಗಕ್ಕೊಳಗಾಗುವ, ದಾರಿ ತಪ್ಪುವಂತ ದುಷ್ಪರಿಣಾಮ ಬೀರಿವೆ ಎನ್ನುವುದನ್ನು ಅಲ್ಲಗಳೆಯಲಾಗದು.



ಜನತೆಯ ಆತಂಕ:

ಈ ಹಿಂದೆ ಈದ್ಗಾ ಮೈದಾನ ವಿವಾದದಿಂದ ತತ್ತರಿಸಿದ ಮಹಾ ನಗರದ ಜನತೆ ಕಷ್ಟನಷ್ಟಗಳನ್ನು ಅನುಭವಿಸಿದ್ದು, ಹಲವು ಬಾರಿ ಕರ್ಫ್ಯೂ ಹಿಂಸೆ ಅನುಭವಿಸಿದ್ದು, ಅದರಿಂದಾಗಿ ವ್ಯಾಪಾರ ವಹಿವಾಟು ಬೇರೆ ಕಡೆ ಸ್ಥಳಾಂತರವಾಗಿ ಅಭಿವೃದ್ಧಿ ಕುಂಟಿತವಾಗಿದ್ದು ನೆನಪಿಸಿಕೊಂಡು ಕಳೆದ ಎರಡು ದಶಕಗಳಿಂದ ಶಾಂತಿ, ಸೌಹಾರ್ದತೆ ಕಾಪಾಡಿಕೊಂಡು ಬಂದಿದ್ದ ಮಹಾನಗರದ ಜನತೆ ಈ ಘಟನೆಯಿಂದಾಗಿ ಆತಂಕಕ್ಕೊಳಗಾಗಿದ್ದು ಕಂಡು ಬಂತು. ಮುಸ್ಲಿಂರ ದೊಡ್ಡ ಹಬ್ಬ ರಂಜಾನ ನಡೆಯುತ್ತಿರುವ ಸಂದರ್ಭದಲ್ಲಿ ಈ ಘಟನೆಯಾಗಿದೆ. "ರಂಜಾನ್ ಹಿಂದಿನ 5–6 ದಿನ ಶಾ ಬಜಾರದಲ್ಲಿ ದೊಡ್ಡ ವ್ಯಾಪಾರ ನಡೆಯುತ್ತದೆ. ಕಡಿಮೆ ದರದಲ್ಲಿ ವೈವಿಧ್ಯಮಯ ಬಟ್ಟೆ ಬರೆಗಳು ಸಿಗುವುದರಿಂದ ಹಿಂದೂ, ಮುಸ್ಲಿಂ ಎಲ್ಲರೂ ಸುತ್ತಲಿನ 4–5 ಜಿಲ್ಲೆಯಿಂದ ಜನ ಬಂದು ಖರೀದಿ ಮಾಡುತ್ತಾರೆ. ಹಬ್ಬಕ್ಕೆ ಹೊಸ ಬಟ್ಟೆ ಇತರೆ ಸಾಮಾನುಗಳನ್ನು ಮಾರಾಟ ಮಾಡಲು ಲಕ್ಷಾಂತರ ರೂಪಾಯಿಗಳ ಮಾಲು ತಂದಿದ್ದೇನೆ ಏನಾಗುತ್ತೇನೋ ಅನ್ನುವ ಆತಂಕವಾಗಿದೆ" ಎಂದು ಮುಸ್ಲಿಂ ವ್ಯಾಪಾರಿಯೊಬ್ಬರು ಹೇಳುತ್ತಿದ್ದರು.

ವಿವಾದಾತ್ಮಕ ವಿಡಿಯೋ ಕುರಿತು ದೂರು

ವಿಡಿಯೋ ವೈರಲ್ ಆಗುತ್ತಿದ್ದಂತೆ ತಬೀಬಲ್ಯಾಂಡ ನಿವಾಸಿ ಮೊಹ್ಮದ ಅಜರ್ ಬೇಲೇರಿ ಹಳೇಹುಬ್ಬಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು ಎಫ್.ಐ.ಆರ್ ಕೂಡಾ ಮಾಡಲಾಗಿತ್ತು. ಕೂಡಲೇ ಕ್ರಮ ಕೈಗೊಂಡು ಆರೋಪಿಯನ್ನು ಬಂದಿಸಲಾಗುವುದೆಂದು ಪೊಲೀಸರು ದೂರುದಾರರಿಗೆ ತಿಳಿಸಿದ್ದರು.

ಘಟನೆ ಪೂರ್ವಯೋಜಿತವೇ?

ಹಳೇ ಹುಬ್ಬಳ್ಳಿ ಇಂಡಿ ಪಂಪ ಪ್ರದೇಶ ಹೆಚ್ಚು ಜನಸಾಂದ್ರತೆ ಇರುವ ಪ್ರದೇಶ. ನಗರದ ಪ್ರಮುಖವಾದ ಫತೇಶವಾಲಿ ಮಸೀದಿ ಮತ್ತು ದರ್ಗಾ ಇಲ್ಲಿದೆ. ಮುಸ್ಲಿಂ ಸಮುದಾಯದವರು ಹೆಚ್ಚು ವಾಸವಿರುವ ಪ್ರದೇಶ ಕೂಡಾ. ಹತ್ತಿರದಲ್ಲಿಯೇ ದಿಂಡಿ ಹನುಮಂತ ದೇವಸ್ಥಾನ, ಪೊಲೀಸ್ ಠಾಣೆ ಇವೆ. ಪವಿತ್ರ ರಂಜಾನ್ ಉಪವಾಸದ ದಿನಗಳು ಇವು. ಅಂದು ಇಂಡಿ ಪಂಪ ಮಸೀದಿಯಲ್ಲಿ ರಂಜಾನ್ ಉಪವಾಸ ಬಿಟ್ಟು ಆಹಾರ ಸೇವಿಸಿದ ನಂತರ ಪ್ರಾರ್ಥನೆ ಮತ್ತು ರಾತ್ರಿ 10 ಗಂಟೆಗೆ ಮತ್ತೊಂದು ಪ್ರಾರ್ಥನೆ ನಡೆಯುತ್ತಿದ್ದರಿಂದ ನೂರಾರು ಮುಸ್ಲಿಂರು ಮಸೀದಿಯಲ್ಲಿ ಸೇರಿದ್ದರು. ಕೆಲ ಮುಸ್ಲಿಂ ಯುವಕರು ವಿವಾದಿತ ವಿಡಿಯೋ ಪೋಸ್ಟ್ ಮಾಡಿದ ಯುವಕನನ್ನು ಬಂದಿಸುವಂತೆ ಪೊಲೀಸ್ ಠಾಣೆಗೆ ಹೋಗಿದ್ದಾರೆ. ಆ ಯುವಕನನ್ನು ಬಂದಿಸುತ್ತೇವೆ, ವಿವಾದ ಮಾಡುವುದು ಬೇಡ ಎಂದು ಪೋಲೀಸರು ತಿಳಿ ಹೇಳಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಮಸೀದಿಯಲ್ಲಿದ್ದ ಜನರು ಮತ್ತು ಸುತ್ತುಮುತ್ತಲಿನ ಜನ ಅಲ್ಲಿ ದಿಢೀರಂತ ಜಮಾ ಆಗಿದ್ದಾರೆ. ಕೆಲ ಉಡಾಫೆ ಹುಡುಗರು ಮನಬಂದಂತೆ ಗದ್ದಲ ಪ್ರಾರಂಭಿಸಿದ್ದಾರೆ. ಅದೇ ಪ್ರದೇಶದಲ್ಲಿ ರಸ್ತೆ ಕಾಮಗಾರಿ ನಡೆದಿದ್ದರಿಂದ ಜಲ್ಲಿಕಲ್ಲುಗಳು ಇದ್ದವು. ಇಂಡಿ ಪಂಪ ಸರ್ಕಲ್ ಹೈಮಾಸ್ಕ ಬಂದಾಗಿತ್ತು. ರಾತ್ರಿ 11ರಷ್ಟೊತ್ತಿಗೆ ಗಲಾಟೆ ಹೆಚ್ಚಾಗಿ ಕಲ್ಲುತೂರಾಟ, ಪೊಲೀಸರ ಮೇಲೆ ಹಲ್ಲೆ, ಸಂಚಾರಿ ಪೊಲೀಸ ಇನ್‌ಸ್ಪೆಕ್ಟರ್‌ಗೆ ದಾರಿ ಬಿಡದೆ ಅವರ ವಾಹನವನ್ನು ಪಲ್ಟಿ ಮಾಡಿದ್ದಾರೆ. ಕಲ್ಲು ತೂರಾಟದಿಂದಾಗಿ ಕೆಲವರಿಗೆ ಗಾಯಗಳಾಗಿದ್ದು ಕಲ್ಲುಗಳು ಹತ್ತಿರದ ದಿಂಡಿ ಹನುಮಂತ ದೇವಸ್ಥಾನ ಮೇಲೆಯೂ ಬಿದ್ದಿವೆ. ಘಟನೆ ತಿಳಿದು ಸ್ಥಳಕ್ಕೆ ಆಗಮಿಸಿದ ಅಂಜುಮನ್ ಸಂಸ್ಥೆಯ ಪದಾದಿಕಾರಿಗಳು ಮುಸ್ಲಿಂ ಮುಖಂಡರು ಗಲಾಟೆಯಲ್ಲಿದ್ದ ಭಾವೋದ್ವೇಗಕ್ಕೊಳಗಾದ ಯುವಕರನ್ನು ತಡೆಯಲು ಪ್ರಯತ್ನಿಸಿದರೂ ಯುವಕರು ಅವರ ಮಾತುಗಳನ್ನು ಕಿವಿಗೆ ಹಾಕಿಕೊಳ್ಳುವ ಪರಿಸ್ಥಿತಿಯಲ್ಲಿರಲಿಲ್ಲ. ಕೊನೆಗೆ ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿ ಪರಿಸ್ಥಿಯನ್ನು ಹದ್ದುಬಸ್ತಿಗೆ ತರುವ ಪ್ರಯತ್ನ ಮಾಡಿದ್ದಾರೆ. ಹುಬ್ಬಳ್ಳಿ ನಗರದಲ್ಲಿ ಎಪ್ರಿಲ್ 20 ರವರೆಗೆ ಸೆಕ್ಷನ್ 144 ಜಾರಿ ಮಾಡಲಾಗಿದೆ. ಅದು ಮುಂದುವರೆಯುವ ಸಾಧ್ಯತೆ ಕೂಡ ಇದೆ. ಈಗ ಮಹಾನಗರದಲ್ಲಿ ಪರಿಸ್ಥಿತಿ ತಿಳಿಗೊಂಡಿದ್ದು ಯಥಾಸ್ಥಿತಿಯಂತೆ ವ್ಯಾಪಾರ ವಹಿವಾಟು ಮರು ಆರಂಭಗೊಂಡಿವೆ.

ದಿಢೀರಂತ ಪೊಲೀಸ್ ಠಾಣೆ ಮುಂದೆ ನೂರಾರು ಜನ ಸೇರಿದ್ದು, ಹೈಮಾಸ್ಕ್ ಬಂದ್ ಆಗಿದ್ದು, ದೊಡ್ಡ ಪ್ರಮಾಣದಲ್ಲಿ ಕಲ್ಲುಗಳು ಸಿಕ್ಕಿದ್ದು ನೋಡಿದರೆ ಇದು ಪೂರ್ವನಿಯೋಜಿತ ಘಟನೆ ಇರಬಹುದೇ? ಇದರಲ್ಲಿ ಎ.ಐ.ಎಂ.ಐ.ಎಂ, ಎಸ್.ಡಿ.ಪಿ.ಐ. ಮತ್ತು ಅಪರೋಕ್ಷವಾಗಿ ಸಂಘಪರಿವಾರದ ಪ್ರಚೋದನೆ ಇರಬಹುದೆಂದು ಕೆಲವರು ಅನುಮಾನ ವ್ಯಕ್ತಪಡಿಸಿದ್ದಾರೆ. ಆದರೆ ಹಲವು ಮುಖಂಡರನ್ನು ಮಾತನಾಡಿಸಿದಾಗ ಇದು ಪೂರ್ವನಿಯೋಜಿತವಲ್ಲ, ದಿಢೀರಂತ ನಡೆದ ಘಟನೆ.. 20–25 ವರ್ಷದ ಯುವಕರು ಕಾನೂನು ಕೈಗೆ ತೆಗೆದುಕೊಂಡು ಗಲಾಟೆಗೆ ಮುಂದಾಗದೇ ಸಂಯಮದಿಂದ ವರ್ತಿಸಬೇಕಾಗಿತ್ತು. ಈ ಘಟನೆಯಿಂದ ಇಡೀ ಸಮುದಾಯದ ಮೇಲೆ ಕೆಟ್ಟ ಹೆಸರು ಬರುವಂತಾಗಿದೆ ಎಂದರು. ರಂಜಾನ್ ಮಹಾಹಬ್ಬ ಇರುವಾಗ ರಾಜ್ಯದಲ್ಲಿ ಕೋಮು ಪ್ರಚೋದನೆಯ ಘಟನೆಗಳು ನಿರಂತರವಾಗಿ ನಡೆಯುತ್ತಿರುವುದನ್ನು ಗಮನಿಸಿ ಅಂಜುಮನ್ ಸಂಸ್ಥೆ ಮತ್ತು ಮುಸ್ಲಿಂ ಮುಖಂಡರು, ಪೊಲೀಸರು ಮುಂಜಾಗ್ರತ ಕ್ರಮಗಳನ್ನು ವಹಿಸಿದ್ದರೆ ಇಂತಹ ಘಟನೆಯನ್ನು ತಡೆಯಲು ಸಾಧ್ಯವಿತ್ತು. ಇಲ್ಲಿ ಮುಖ್ಯವಾಗಿ ಪೊಲೀಸ್ ಗುಪ್ತಚರ ಇಲಾಖೆಯ ವೈಫಲ್ಯವು ಕಾರಣವಾಗಿದೆ ಎಂದು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಅಮಾಯಕರ ಬಂದನವೇ?:

ವಿವಾದಿತ ವಿಡಿಯೋ ಪೋಸ್ಟ್ ಮಾಡಿದ ಯುವಕ ಸೇರಿದಂತೆ ಹತ್ತಿರದ ಸಿ.ಸಿ ಟಿ.ವಿ ದ್ರಶ್ಯಾವಳಿ ಆಧರಿಸಿ ಘಟನೆಯಲ್ಲಿದ್ದ 104 ಜನರನ್ನು ಬಂದಿಸಲಾಗಿದ್ದು ಅನುಮಾನವಿರುವವರನ್ನು ಕರೆದು ವಿಚಾರಿಸಲಾಗುತ್ತಿದೆ. ಈ ಘಟನೆಗೆ ಸಂಬಂದಿಸಿದಂತೆ 12 ಎಫ್.ಐ.ಆರ್. ದಾಖಲಾಗಿವೆ. ಈ ಮಧ್ಯ ಬಂದನಕ್ಕೊಳಗಾದ ಕೆಲ ಯುವಕರ ತಾಯಿಂದಿರು 'ನಮ್ಮ ಮಕ್ಕಳು ಅಮಾಯಕರು ಅವರನ್ನ ಬಿಡುಗಡೆ ಮಾಡಿ' ಎಂದು ಪೋಲೀಸ್ ಠಾಣೆ ಮುಂದೆ ಜಮಾಯಿಸಿ ಒತ್ತಾಯಿಸಿದರು. ಕಾಂಗ್ರೆಸ್ ಮುಖಂಡರು ಹತ್ತಿರದ ಮಸೀದಿಯಿಂದ ಬಂದು ಘಟನೆ ನೋಡುತ್ತಿದ್ದ ಅಮಾಯಕರನ್ನು ಬಂದಿಸಲಾಗುತ್ತಿದೆ ಎಂದು ಹೇಳಿದರೆ ಬಿಜೆಪಿ ಮುಖಂಡರು ತನಿಖೆಯಾಗದೇ ಅವರನ್ನು ಅಮಾಯಕರು ಎಂದು ಹೇಗೆ ಹೇಳೋದು ಎನ್ನುತ್ತಿದ್ದಾರೆ. ಘಟನೆಯನ್ನು ಎಲ್ಲಾ ಆಯಾಮದಲ್ಲಿಯೂ ತನಿಖೆ ಮಾಡಲಾಗುತ್ತಿದೆ. ಘಟನೆಯಲ್ಲಿ ಪಾಲ್ಗೊಂಡವರ, ಪ್ರಚೋಧನೆ ನೀಡಿದವರ ಬಗ್ಗೆಯೂ ಮಾಹಿತಿ ಕಲೆ ಹಾಕಲಾಗುತ್ತಿದೆ ಎಂದು ಪೊಲೀಸ್ ಆಯುಕ್ತ ಲಾಭೂರಾಮ ಹೇಳಿದ್ದಾರೆ. ಒಟ್ಟಾರೆ ಪೂರ್ವಾಗ್ರಹಪೀಡಿತವಲ್ಲದ ನಿಷ್ಪಕ್ಷಪಾತವಾದ ತನಿಖೆ ನಡೆದರೆ ಘಟನೆಯ ಕೆಲವು ಅನುಮಾನಗಳಿಗೆ ಉತ್ತರ ಸಿಗಲಿದೆ, ಸತ್ಯ ಹೊರ ಬರಲಿದೆ.

ದ್ವೇಷ ಮರೆತು ಪ್ರೀತಿ ಹಂಚೋಣ:

ಕುಚ್ಯೋದ್ಯದ ವಿವಾದಿತ ವಿಡಿಯೋ ದೊಡ್ಡ ವಿವಾದವನ್ನು ಮಾಡದೇ ಶಾಂತಿಯುತ ಹೋರಾಟ ಮಾಡಲು ಅವಕಾಶವಿತ್ತು. ಮೂಲಭೂತವಾದಿಗಳ ಕುತಂತ್ರಗಳಿಗೆ ಯುವಕರು ಬಲಿಯಾಗಬಾರದು. ಸಿದ್ದಾರೂಡರು, ಸಿದ್ದಪ್ಪಜ್ಜ, ಶಿವಾನಂದರು, ಶರೀಫ ಗೋವಿಂದ ಭಟ್ಟರು ಶರಣರು ಸೂಫಿಗಳು ಓಡಾಡಿದ ಸೌಹಾರ್ದತೆ ಕೂಡುಬಾಳ್ವೆ ಸಂದೇಶ ನೀಡಿದ ಈ ನೆಲದಲ್ಲಿ ಬಹುದೊಡ್ಡ ಸೌಹಾರ್ದ ಪರಂಪರೆ ಇದೆ. ಜನಸಾಮಾನ್ಯರು ಯಾರು ಕೂಡುಬಾಳ್ವೆಯ ಹೊರತಾಗಿಲ್ಲ. ಬೆರಳೆಣಿಕೆಯ ಮತಾಂಧರು ಜನತೆಯನ್ನು ಒಡೆಯಲು ಹುಟ್ಟುಹಾಕುವ ಈ ತರದ ಘಟನೆಗಳನ್ನು ಸರಕಾರ ಪೊಲೀಸ್ ಇಲಾಖೆ ಮಟ್ಟಹಾಕಬೇಕು. ಜನಪ್ರತಿನಿಧಿಗಳು ರಾಜಕೀಯ ಮುಖಂಡರು ಪ್ರಚೋದಾನಾತ್ಮವಾದ, ಅನಾಗರಿಕ ಹೇಳಿಕೆಗಳನ್ನು ನೀಡುವುದನ್ನು ನಿಲ್ಲಿಸಬೇಕು. ಈ ತರದ ಘಟನೆಗಳು ಮರುಕಳಿಸದಂತೆ ಎಚ್ಚರವಹಿಸೋಣ, ಪ್ರೀತಿ ಹಂಚೋಣ.





ಮಹಾಧಿವೇಶನದ ದಿನಚರಿ



ಭಾರತೀಯ ಸಂವಿಧಾನ ಮತ್ತು ಗಣರಾಜ್ಯವನ್ನು ರಕ್ಷಿಸಲು ಬಿಜೆಪಿಯನ್ನು ಏಕಾಂಗಿಯಾಗಿಸುವುದು ಮತ್ತು ಸೋಲಿಸುವುದು ಪ್ರಮುಖ ಕಾರ್ಯ–ಸೀತಾರಾಂ ಯೆಚೂರಿ

ಎಪ್ರಿಲ್ 7: ಭಾರತೀಯ ಪರಿಸ್ಥಿತಿಯಲ್ಲಿನ ವೈವಿಧ್ಯತೆಗಳನ್ನು ಪರಿಗಣಿಸಿದರೆ, ಒಂದು ರಾಷ್ಟ್ರೀಯ ಮಟ್ಟದ ರಾಜಕೀಯ ರಂಗವನ್ನು 2024 ರ ಲೋಕಸಭೆ ಚುನಾವಣೆಯ ನಂತರವೇ ರಚಿಸಲಾಗುವುದು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಮಹಾಧಿವೇಶನದ ಮೊದಲ ದಿನದ ಕಲಾಪಗಳನ್ನು ಕುರಿತ ಸುದ್ದಿಗೋಷ್ಠಿಯಲ್ಲಿ ಹೇಳಿದರು. ಚುನಾವಣೆಯ ಮೊದಲು, ರಾಜ್ಯ ಮಟ್ಟದ ರಂಗಗಳು ಪ್ರಾಯೋಗಿಕ ಅರ್ಥದಲ್ಲಿ ಅತ್ಯುತ್ತಮ ಆಯ್ಕೆ, ಏಕೆಂದರೆ ಪ್ರತಿ ರಾಜ್ಯದಲ್ಲಿ ವಿಭಿನ್ನ ರಾಜಕೀಯ ಪಕ್ಷಗಳು ಪ್ರಬಲವಾಗಿವೆ. 1977 ರಿಂದ, ರಾಷ್ಟ್ರೀಯ ಮಟ್ಟದ ರಂಗಗಳು ಚುನಾವಣೆಯ ನಂತರವೇ ರಚನೆಯಾಗುತ್ತಿವೆ. 1989, 1996, 1998 ಮತ್ತು 2004 ರ ಬೆಳವಣಿಗೆಗಳನ್ನು ನೆನಪಿಸಿಕೊಳ್ಳಿ. ಈ ಎಲ್ಲಾ ವರ್ಷಗಳಲ್ಲಿ, ಚುನಾವಣೆಯ ನಂತರ ಸರ್ಕಾರ ರಚನೆಗೆ ರಾಜಕೀಯ ರಂಗಗಳು ಅಸ್ತಿತ್ವಕ್ಕೆ ಬಂದವು ಎಂದು ಎಪ್ರಿಲ್ 7 ರಂದು ಕಣ್ಣೂರಿನಲ್ಲಿ 23 ನೇ ಪಕ್ಷದ ಮಹಾಧಿವೇಶನದ ನಡಾವಳಿಗಳನ್ನು ವಿವರಿಸುವಾಗ ಯೆಚೂರಿ ಪ್ರಶ್ನೆಯೊಂದಕ್ಕೆ ಸ್ಪಂದಿಸುತ್ತ ಹೀಗಂದರು.

ಸಿಪಿಐ(ಎಂ) ಬಿಜೆಪಿ ವಿರೋಧಿ ಮತಗಳನ್ನು ಕ್ರೋಢೀಕರಿಸಲು ಪ್ರಯತ್ನಿಸುತ್ತಿದೆ ಎಂದು ಅವರು ಮುಂದುವರೆದು ಹೇಳಿದರು.. ಭಾರತೀಯ ಸಂವಿಧಾನ ಮತ್ತು ಗಣರಾಜ್ಯವನ್ನು ರಕ್ಷಿಸಲು ಬಿಜೆಪಿಯನ್ನು ಪ್ರತ್ಯೇಕಿಸುವುದು ಮತ್ತು ಸೋಲಿಸುವುದು ಪ್ರಮುಖ ಕಾರ್ಯವಾಗಿದೆ. ಅದಕ್ಕಾಗಿ ಬಿಜೆಪಿ ವಿರೋಧಿ ಶಕ್ತಿಗಳ ವಿಶಾಲವಾದ ಮೈತ್ರಿ ಇರುತ್ತದೆ. ಇಂತಹ ಮೈತ್ರಿಗಳು ಕೆಲವು ರಾಜ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಜಾತ್ಯತೀತ ಶಕ್ತಿಗಳ ಗರಿಷ್ಠ ಅಣಿನೆರಿಕೆಯನ್ನು ನಾವು ಬಯಸುತ್ತೇವೆ. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಜೊತೆಗೆ ಸಾಮಾಜಿಕ ಚಳುವಳಿಗಳು ಮತ್ತು ಜನಾಂದೋಲನಗಳ ಏಕತೆಯನ್ನು ಬಲಪಡಿಸುವುದು ಮುಖ್ಯವಾಗಿದೆ ಎಂದು ಯೆಚುರಿ ಹೇಳಿದರು.

ಕಾಂಗ್ರೆಸ್ ಪಕ್ಷದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಈ ಪ್ರಕ್ರಿಯೆಗೆ ಅವರ ಕೊಡುಗೆ ಏನು ಎಂಬುದನ್ನು ನಿರ್ಧರಿಸುವುದು ಅವರಿಗೆ ಬಿಟ್ಟದ್ದು, ಕಾಂಗ್ರೆಸ್ ಪಕ್ಷದಿಂದ ನಾಯಕರು ನಿರಂತರವಾಗಿ ಬಿಜೆಪಿಗೆ ಹರಿದು ಬರುತ್ತಿದ್ದಾರೆ. ಈ ಪರಿಸ್ಥಿತಿಯ ಬಗ್ಗೆ ಕಾಂಗ್ರೆಸ್ ಯೋಚಿಸಬೇಕು ಎಂದು ಹೇಳಿದರು.

ಎಪ್ರಿಲ್ 6ರ ಮಧ್ಯಾಹ್ನ ಪಕ್ಷದ ಪ್ರಧಾನ ಕಾರ್ಯದರ್ಶಿಯವರು ರಾಜಕೀಯ ನಿರ್ಣಯದ ಕರಡನ್ನು ಮಹಾಧಿವೇಶನದ ಮುಂದೆ ಮಂಡಿಸಿದರು. ಈ ಕುರಿತು ಪತ್ರಿಕಾಗೋಷ್ಠಿಗೆ ವಿವರ ನೀಡುತ್ತ, ಸಿಪಿಐ(ಎಂ)ನ ಆಂತರಿಕ ಪ್ರಜಾಪ್ರಭುತ್ವದ ಹುರುಪಿಗೆ ಅನುಗುಣವಾಗಿ, ಈ ಕರಡು ನಿರ್ಣಯವನ್ನು ಎರಡು ತಿಂಗಳ ಮುಂಚಿತವಾಗಿ ಬಿಡುಗಡೆ ಮಾಡಲಾಯಿತು, ಪಕ್ಷದ ಎಲ್ಲಾ ಸದಸ್ಯರು ನೇರವಾಗಿ ಕೇಂದ್ರ ಸಮಿತಿಗೆ ತಿದ್ದುಪಡಿಗಳನ್ನು ಕಳುಹಿಸುವ ಹಕ್ಕನ್ನು ಹೊಂದಿದ್ದರು ಎಂದು ಹೇಳಿದರು. ಕೇಂದ್ರ ಸಮಿತಿಯು 4,001 ತಿದ್ದುಪಡಿಗಳನ್ನು ಸ್ವೀಕರಿಸಿದೆ. ಅವೆಲ್ಲವನ್ನೂ ಪರಿಗಣಿಸಲಾಗಿದೆ ಮತ್ತು ಕೇಂದ್ರ ಸಮಿತಿಯು ಅಂಗೀಕರಿಸಿದ ಮಹಾಧಿವೇಶನ–ಪೂರ್ವ ತಿದ್ದುಪಡಿಗಳ ವರದಿಯನ್ನು ಕೂಡ ಮಹಾಧಿವೇಶನದ ಮುಂದೆ ಮಂಡಿಸಲಾಯಿತು ಎಂದು ಯೆಚೂರಿ ತಿಳಿಸಿದರು.

ಕರಡು ರಾಜಕೀಯ ನಿರ್ಣಯದ ಮೇಲಿನ ಚರ್ಚೆ ಎಪ್ರಿಲ್ 7 ರ ಬೆಳಗ್ಗೆಯಿಂದ ಆರಂಭವಾಯಿತು. ಮಧ್ಯಾಹ್ನದವರೆಗೆ ನಡೆದ ಚರ್ಚೆಯಲ್ಲಿ ಕರ್ನಾಟಕದ ಪ್ರತಿನಿಧಿ ಬಾಲಕೃಷ್ಣ ಶೆಟ್ಟಿ ಸೇರಿದಂತೆ 12 ರಾಜ್ಯಗಳ 12 ಪ್ರತಿನಿಧಿಗಳು ಭಾಗವಹಿಸಿದ್ದರು. ಮಧ್ಯಾಹ್ನದ ಅಧಿವೇಶನದಲ್ಲಿ ಕರ್ನಾಟಕದ ಪ್ರತಿನಿಧಿ ಕೆ.ನೀಲಾ ಸೇರಿದಂತೆ 17 ಪ್ರನಿಧಿಗಳು, ಮತ್ತು ಎಪ್ರಿಲ್ 8ರ ಬೆಳಿಗ್ಗೆಯ ಅಧಿವೇಶನದಲ್ಲಿ 17 ಪ್ರತಿನಿಧಿಗಳು ಭಾಗವಹಿಸಿದರು.

ನಮ್ಮ ಗುರಿ ಸ್ಪಷ್ಟವಾಗಿದೆ, ಯಾವುದೇ ಗೊಂದಲವಿಲ್ಲ – ಬೃಂದಾ ಕಾರತ್



ಎಪ್ರಿಲ್ 8: ಮೂರನೇ ದಿನದ ಮಧ್ಯಾಹ್ನದ ವರೆಗಿನ ಕಲಾಪಗಳ ಬಗ್ಗೆ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರತ್ ಕರಡು ರಾಜಕೀಯ ನಿರ್ಣಯದ ಮೇಲಿನ ಚರ್ಚೆಗಳ ಮುಖ್ಯಾಂಶಗಳನ್ನು ತಿಳಿಸಿದರು ಮತ್ತು ಈ ಕುರಿತ ಪತ್ರಕರ್ತರ ಹಲವು ಪ್ರಶ್ನೆಗಳಿಗೆ ಉತ್ತರ ನೀಡಿದರು.

ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಹಂದರವನ್ನು ನಾಶಮಾಡಲು ಪ್ರಯತ್ನಿಸುತ್ತಿರುವ ಹಿಂದುತ್ವದ ವಿಷಕಾರಿ ಶಕ್ತಿಯ ವಿರುದ್ಧ ಭಾರತದ ಪ್ರತಿಯೊಬ್ಬ ಪ್ರಜೆಯನ್ನು ಸಜ್ಜುಗೊಳಿಸಲು ಉದ್ದೇಶಿಸಿರುವ ರಾಜಕೀಯ ನಿರ್ಣಯವನ್ನು ಸಿಪಿಐ(ಎಂ)ನ 23 ನೇ ಮಹಾಧಿವೇಶನ ಅಂಗೀಕರಿಸಿದೆ. ಎರಡು ದಿನಗಳ ಸುದೀರ್ಘ ಚರ್ಚೆಯ ನಂತರ ಅದರಲ್ಲಿ ಹೊಮ್ಮಿದ ಸಲಹೆಗಳು ಮತ್ತು ತಿದ್ದುಪಡಿಗಳನ್ನು ಪೊಲಿಟ್‌ಬ್ಯೂರೊ ಪರೀಕ್ಷಿಸಿತು, ಪಕ್ಷದ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಅವರು ಉತ್ತರವನ್ನು ನೀಡಿದರು, ತದನಂತರ ಮಹಾಧಿವೇಶನ ರಾಜಕೀಯ ನಿರ್ಣಯವನ್ನು ಅಂಗೀಕರಿಸಿತು.

ಬೃಂದಾ ಕಾರಟ್, ಕರಡು ರಾಜಕೀಯ ನಿರ್ಣಯದ ಮೇಲಿನ ಚರ್ಚೆಯ ವಿವರಗಳನ್ನು ನೀಡಿದರು. ಚರ್ಚೆಯಲ್ಲಿ ಒಟ್ಟು 48 ಪ್ರತಿನಿಧಿಗಳು ಭಾಗವಹಿಸಿದ್ದರು. ಅವರಲ್ಲಿ 9 ಮಹಿಳೆಯರಿದ್ದರು. ಕರಡು ರಾಜಕೀಯ ನಿರ್ಣಯಕ್ಕೆ ಒಟ್ಟು 390

ಪುಟ 10 ಕ್ಕೆ

ಪಕ್ಷದ ಬಲವರ್ಧನೆ, ಇಂದಿನ ಅಗತ್ಯ–ಪ್ರಕಾಶ ಕಾರಟ್



ಎಪ್ರಿಲ್ 9: ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್ ಮಾಧ್ಯಮಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತ ಮಹಾಧಿವೇಶನದಲ್ಲಿ ಮಂಡಿಸಿದ ಕರಡು ರಾಜಕೀಯ ಸಂಘಟನಾ ವರದಿಯ ಮೇಲಿನ ಚರ್ಚೆಯು ಪಕ್ಷದ ರಾಜಕೀಯ, ಸೈದ್ಧಾಂತಿಕ ಮತ್ತು ಸಂಘಟನಾ ಕಾರ್ಯವನ್ನು ತುರ್ತಾಗಿ ಬಲಪಡಿಸುವ ಅಗತ್ಯತೆಯ ಮೇಲೆ ಕೇಂದ್ರೀಕರಿಸಿದೆ ಎಂದು ಹೇಳಿದರು. ಪಕ್ಷವು ಸೈದ್ಧಾಂತಿಕವಾಗಿ, ರಾಜಕೀಯವಾಗಿ ಮತ್ತು ಸಂಘಟಿತವಾಗಿ ಹಿಂದುತ್ವ ಶಕ್ತಿಗಳ ಸವಾಲನ್ನು ಪ್ರಬಲವಾಗಿ ಎದುರಿಸಬೇಕಾಗಿದೆ. ಅದಕ್ಕಾಗಿ ಗುಣಮಟ್ಟದ ಸದಸ್ಯತ್ವದೊಂದಿಗೆ ಪಕ್ಷದ ಸಂಘಟನೆಯನ್ನು ಬಲಪಡಿಸಬೇಕು. ಪಕ್ಷದ ರಚನೆಯಲ್ಲಿ ಹೆಚ್ಚು ಮಹಿಳೆಯರು ಮತ್ತು ಯುವಕರು ಇರಬೇಕು. ನಿರಂತರ ವರ್ಗ ಮತ್ತು ಸಾಮೂಹಿಕ ಹೋರಾಟಗಳ ಮೂಲಕ ಮತ್ತು ಈ ಚಳುವಳಿಗಳನ್ನು ಕ್ರೋಢೀಕರಿಸುವ ಮೂಲಕ ಪಕ್ಷವು ತನ್ನ ರಾಜಕೀಯ ಪ್ರಭಾವವನ್ನು ಬಲಪಡಿಸಬಹುದು ಎಂದು ಪ್ರಕಾಶ್ ಕಾರಟ್ ವಿವರಿಸಿದರು.

ಲಾಕ್‌ಡೌನ್‌ಗಳು ಮತ್ತು ಸಂಬಂಧಿತ ನಿರ್ಬಂಧಗಳೊಂದಿಗೆ ಕೋವಿಡ್ ಸಾಂಕ್ರಾಮಿಕವು ಸ್ವಾಭಾವಿಕವಾಗಿ ಸಾಮೂಹಿಕ ಕ್ರಿಯೆಗಳನ್ನು ಅಭಿವೃದ್ಧಿಪಡಿಸಲು ಅಡೆತಡೆಗಳನ್ನು ಸೃಷ್ಟಿಸಿತು. ಕೋವಿಡ್ ಪರಿಸ್ಥಿತಿಯು ಪಕ್ಷದ ಸದಸ್ಯತ್ವದ ಮೇಲೆ ಸ್ವಲ್ಪ ಪರಿಣಾಮ ಬೀರಿತು. 2020 ರಲ್ಲಿ ಪಕ್ಷವು 10,07,903 ಸದಸ್ಯರನ್ನು ಹೊಂದಿತ್ತು. ಆದರೆ 2021 ರಲ್ಲಿ ಸದಸ್ಯತ್ವವು 9,85,757 ಕ್ಕೆ ಸ್ವಲ್ಪ ಕಡಿಮೆಯಾಗಿದೆ. ಆದರೆ ಈಗ ಸದಸ್ಯತ್ವ ಹೆಚ್ಚುತ್ತಿದೆ. ಕೋವಿಡ್ ಮಹಾಸೋಂಕಿನ ದುರಿತ ಕಾಲದಲ್ಲಿ ಸ್ವಯಂಸೇವಕರು ಪರಿಹಾರ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಪಶ್ಚಿಮ ಬಂಗಾಳದಲ್ಲಿಯೇ 10,000 ಸ್ವಯಂಸೇವಕರು ಹಗಲಿರುಳು ಶ್ರಮಿಸಿದರು.

ಜನರೊಂದಿಗೆ ನೇರ ಸಂಪರ್ಕವನ್ನು ಬೆಸೆಯಲು ಶತಪ್ರಯತ್ನ ನಡೆಯಬೇಕು. ಯುವಜನತೆ ಹಾಗೂ ಮಹಿಳೆಯರನ್ನು ಪಕ್ಷದತ್ತ ಸೆಳೆಯಲು ಕೇಂದ್ರೀಕೃತ ಪ್ರಯತ್ನಗಳ ಅಗತ್ಯವಿದೆ. ಜನರಲ್ಲಿ ಪಕ್ಷದ ವ್ಯಾಪ್ತಿಯು ಮತ್ತು ಪ್ರಭಾವ ಮತ್ತು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಟ್ಟುಗೂಡಿಸುವುದು ಸಾಮೂಹಿಕ ಚಳುವಳಿಗಳಿಂದ ಬಲಪಡಿಸಬಹುದು.

ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ಅವರು ಹಿಂದುತ್ವ ಎಂದರೆ ಹಿಂದೂ ಎಂದಲ್ಲ. ಹಿಂದುತ್ವ ಒಂದು ರಾಜಕೀಯ ಯೋಜನೆ. ಅದಕ್ಕೂ ಹಿಂದೂ ಧರ್ಮಕ್ಕೂ ಸಂಬಂಧವಿಲ್ಲ ಎಂದು ಪ್ರಕಾಶ ಕಾರಟ್ ಹೇಳಿದರು. ಸಿಪಿಐ(ಎಂ) ಹಿಂದುತ್ವ ಮತ್ತು ಮುಸ್ಲಿಂ ಮೂಲಭೂತವಾದದ ಯೋಜನೆಗಳನ್ನು ವಿರೋಧಿಸುತ್ತಿದೆ. ಆದರೆ ಭಾರತದಲ್ಲಿ ಹಿಂದುತ್ವ ದೊಡ್ಡ ಅಪಾಯ ತಂದೊಡ್ಡಿದೆ. ಅದನ್ನೇ ಪ್ರಭುತ್ವದ ಸಿದ್ಧಾಂತವನ್ನಾಗಿಸಲು ಬಿಜೆಪಿ ಯತ್ನಿಸುತ್ತಿದೆ ಎಂದು ಅವರು ಹೇಳಿದರು.

ಕೇಂದ್ರ ಸರ್ಕಾರ ಹಿಂದಿಯನ್ನು ಅಧಿಕೃತ ಭಾಷೆಯನ್ನಾಗಿ ಹೇರಬಾರದು, ಎಲ್ಲ ಭಾರತೀಯ ಭಾಷೆಗಳಿಗೂ ಸಮಾನ ಸ್ಥಾನಮಾನ ನೀಡಬೇಕು ಎಂದು ಇನ್ನೊಂದು ಪ್ರಶ್ನೆಗೆ ಸ್ಪಂದಿಸುತ್ತ ಅವರು ಹೇಳಿದರು.



ಪ್ರತಿನಿಧಿಗಳು

ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡಲು 13 ಪಕ್ಷಗಳ ಮುಖಂಡರ ಜಂಟಿ ಮನವಿ
ಕೋಮು ಹಿಂಸಾಚಾರ ನಡೆಸುವವರಿಗೆ ಕಠಿಣ ಶಿಕ್ಷೆ ನೀಡಬೇಕೆಂದು ಆಗ್ರಹ

ದೇಶದಲ್ಲಿ ದ್ವೇಷ ಭಾಷಣಗಳ ಹಿನ್ನೆಲೆಯಲ್ಲಿ ಭುಗಿಲೆದ್ದಿರುವ ಕೋಮು ಹಿಂಸಾಚಾರ ಮತ್ತು ಅದಕ್ಕೆ ಅಧಿಕೃತ ಕೃಪಾಪೋಷಣೆ ಇರುವಂತೆ ಕಾಣುತ್ತಿರುವುದರಿಂದ ಕಳವಳಗೊಂಡಿರುವ ಐದು ಎಡಪಕ್ಷಗಳು ಸೇರಿದಂತೆ 13 ರಾಜಕೀಯ ಪಕ್ಷಗಳ ಮುಖಂಡರು ಒಂದು ಜಂಟಿ ಮನವಿಯಲ್ಲಿ, ಶಾಂತಿ ಮತ್ತು ಸೌಹಾರ್ದತೆಯನ್ನು ಕಾಯ್ದುಕೊಳ್ಳಬೇಕು ?ಂದು ಎಲ್ಲ ಜನವಿಭಾಗಗಳಿಗೆ ಮನವಿ ಮಾಡಿಕೊಂಡಿದ್ದಾರೆ ಹಾಗೂ ಕೋಮು ಹಿಂಸಾಚಾರ ಪ್ರಚೋದಿಸುತ್ತಿರುವವರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿದ್ದಾರೆ. ಈ ಜಂಟಿ ಹೇಳಿಕೆಯ ಪೂರ್ಣಪಾಠವನ್ನು ಈ ಮುಂದೆ ಕೊಡಲಾಗಿದೆ:

ನಾವು, ಈ ಕೆಳಗೆ ಸಹಿ ಮಾಡಿದ ರಾಜಕೀಯ ಪಕ್ಷಗಳ ನಾಯಕರು ಈ ಮನವಿಯನ್ನು ಮಾಡಲು ಒಟ್ಟುಗೂಡಿದ್ದೇವೆ.

ನಾವು, ನಮ್ಮ ಸಮಾಜವನ್ನು ಧ್ರುವೀಕರಿಸಲು ಆಹಾರ, ಉಡುಗೆ, ನಂಬಿಕೆ, ಹಬ್ಬಗಳು ಮತ್ತು ಭಾಷೆಗೆ ಸಂಬಂಧಿಸಿದ ವಿಷಯಗಳನ್ನು ಆಳುವ ವ್ಯವಸ್ಥೆಯ ಕೆಲವು ವಿಭಾಗಗಳು ಉದ್ದೇಶಪೂರ್ವಕವಾಗಿ ಬಳಸುತ್ತಿರುವ ರೀತಿಯಿಂದ ತೀವ್ರ ದುಃಖಿತರಾಗಿದ್ದೇವೆ.

ನಾವು ದೇಶದಲ್ಲಿ ಹೆಚ್ಚುತ್ತಿರುವ ದ್ವೇಷ ಭಾಷಣದ ಘಟನೆಗಳ ಬಗ್ಗೆ ಅತ್ಯಂತ ಕಳವಳಗೊಂಡಿದ್ದೇವೆ. ಈ ದ್ವೇಷ ಭಾಷಣಗಳನ್ನು ಮಾಡುತ್ತಿರುವವರು ಅಧಿಕೃತ ಕೃಪಾಪೋಷಣೆ ಪಡೆದಿರುವಂತೆ ಕಾಣುತ್ತದೆ, ಅವರ ವಿರುದ್ಧ ಯಾವುದೇ ಅರ್ಥಪೂರ್ಣ ಮತ್ತು ಬಲವಾದ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿಲ್ಲ.

ನಾವು, ದೇಶದ ಹಲವಾರು ರಾಜ್ಯಗಳಲ್ಲಿ ಇತ್ತೀಚೆಗೆ ಭುಗಿಲೆದ್ದಿರುವ ಕೋಮುವಾದಿ ಹಿಂಸಾಚಾರವನ್ನು ಬಲವಾಗಿ ಖಂಡಿಸುತ್ತೇವೆ. ಈ ಘಟನೆಗಳು ಸಂಭವಿಸಿದ ಪ್ರದೇಶಗಳಲ್ಲಿ ಒಂದು ದುಷ್ಟ ನಮೂನೆ ಇದೆ ಎಂಬುದನ್ನು ವರದಿಗಳು ಸೂಚಿಸುತ್ತಿರುವುದರಿಂದ ನಾವು ತೀವ್ರವಾಗಿ ಕಳವಳಗೊಂಡಿದ್ದೇವೆ. ಆಕ್ರಮಣಕಾರಿ ಸಶಸ್ತ್ರ ಮತೀಯ ಮೆರವಣಿಗೆಗಳಿಗೆ ಮುಂಚಿತವಾಗಿ ಕೊಳ್ಳಿಯಿಡುವ ದ್ವೇಷದ ಭಾಷಣಗಳು ಕೋಮುವಾದಿ ಹಿಂಸಾಚಾರವನ್ನು ಹರಿಯ ಬಿಟ್ಟಿರುವುದು ಕಾಣ ಬಂದಿದೆ.

ನಮಗೆ, ದ್ವೇಷ ಮತ್ತು ಪೂರ್ವಾಗ್ರಹವನ್ನು ಹರಡಲು ಅಧಿಕೃತ ಕೃಪಾಪೋಷಣೆಯೊಂದಿಗೆ ಸಾಮಾಜಿಕ ಮಾಧ್ಯಮ ಮತ್ತು ದೃಶ್ಯ–ಶ್ರಾವ್ಯ ವೇದಿಕೆಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿರುವ ರೀತಿ ಅತೀವ ನೋವುಂಟು ಮಾಡಿದೆ.

ನಾವು ಪ್ರಧಾನಿಯವರ ಮೌನದಿಂದ ಆಘಾತಕ್ಕೊಳಗಾಗಿದ್ದೇವೆ.. ಅವರು ಮತಾಂಧತೆಯನ್ನು ಪ್ರತಿಪಾದಿಸುವವರ ಮಾತು ಮತ್ತು ಕ್ರಿಯೆಗಳ ವಿರುದ್ಧ ಮತ್ತು ತಮ್ಮ ಮಾತು ಹಾಗೂ ನಡೆಯ ಮೂಲಕ ನಮ್ಮ ಸಮಾಜವನ್ನು ಪ್ರಚೋದಿಸುವ ಹಾಗೂ ಉದ್ರೇಕಿಸುವವರ ವಿರುದ್ಧ ಮಾತನಾಡಲು ವಿಫಲರಾಗಿದ್ದಾರೆ. ಈ ಮೌನವೇ ಇಂತಹ ಖಾಸಗಿ ಸಶಸ್ತ್ರ ಗುಂಪುಗಳಿಗೆ ಅಧಿಕೃತ ಕೃಪಾಪೋಷಣೆಯ ವಿಲಾಸ ದೊರೆತಿದೆ ಎಂಬುದಕ್ಕೆ ಬಹುದೊಡ್ಡ ಸಾಕ್ಷಿಯಾಗಿದೆ.

ನಾವು, ಶತಮಾನಗಳಿಂದ ಭಾರತವನ್ನು ನಿರೂಪಿಸಿರುವ ಮತ್ತು ಶ್ರೀಮಂತಗೊಳಿಸಿರುವ ಸಾಮಾಜಿಕ ಸಾಮರಸ್ಯದ ಬಂಧಗಳನ್ನು ಬಲಪಡಿಸಲು ಒಟ್ಟಾಗಿ ಕೆಲಸ ಮಾಡುವ ನಮ್ಮ ಸಾಮೂಹಿಕ ಸಂಕಲ್ಪವನ್ನು ಪುನರುಚ್ಚರಿಸುತ್ತೇವೆ.

ನಾವು, ನಮ್ಮ ಸಮಾಜದಲ್ಲಿ ಒಡಕುಬುದ್ಧಿ ಬೇರುಬಿಡುವಂತೆ ಮಾಡಲು ಪ್ರಯತ್ನಿಸುತ್ತಿರುವ ವಿಷಕಾರಿ ಸಿದ್ಧಾಂತಗಳನ್ನು ಎದುರಿಸಲು ಮತ್ತು ಅವುಗಳ ವಿರುದ್ಧ ಹೋರಾಡಲು ಬದ್ಧರಾಗಿದ್ದೇವೆ ಎಂಬುದನ್ನು ಪುನರುಚ್ಚರಿಸುತ್ತೇವೆ.

ನಾವು, ನಮ್ಮ ದೇಶವು ಅದರ ಅನೇಕ ವೈವಿಧ್ಯತೆಗಳನ್ನು ಪೂರ್ಣ ಪ್ರಮಾಣದಲ್ಲಿ ಗೌರವಿಸಿ, ಅವುಗಳಿಗೆ ಅವಕಾಶ ಮಾಡಿಕೊಟ್ಟು, ಅವನ್ನು ಸಂಭ್ರಮಿಸಿದರೆ ಮಾತ್ರ ಅಭಿವೃದ್ಧಿ ಹೊಂದುತ್ತದೆ ಎಂಬ ನಮ್ಮ ದೃಢವಾದ ನಂಬಿಕೆಯನ್ನು ಪುನರುಚ್ಚರಿಸುತ್ತೇವೆ.

ನಾವು, ಶಾಂತಿಯನ್ನು ಕಾಯ್ದುಕೊಳ್ಳಬೇಕು ಮತ್ತು ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸ ಬಯಸುವವರ ದುಷ್ಟ ಉದ್ದೇಶವನ್ನು ವಿಫಲಗೊಳಿಸಬೇಕು ಎಂದು ಎಲ್ಲ ಜನವಿಭಾಗಗಳಿಗೆ ಮನವಿ ಮಾಡುತ್ತೇವೆ.

ನಾವು, ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡಲು ಸ್ವತಂತ್ರವಾಗಿಯೂ ಮತ್ತು ಜಂಟಿಯಾಗಿಯೂ ಕೆಲಸ ಮಾಡಬೇಕು ಎಂದು ದೇಶಾದ್ಯಂತ ನಮ್ಮ ಎಲ್ಲಾ ಪಕ್ಷದ ಘಟಕಗಳಿಗೆ ಕರೆ ನೀಡುತ್ತೇವೆ.

ಈ ಮನವಿಗೆ ಸೋನಿಯಾ ಗಾಂಧಿ, ಅಧ್ಯಕ್ಷರು, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಶರದ್ ಪವಾರ್, ಅಧ್ಯಕ್ಷರು, ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷ, ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮತ್ತು ತೃಣಮೂಲ ಕಾಂಗ್ರೆಸ್ ಅಧ್ಯಕ್ಷರು, ಎಂಕೆ ಸ್ಟಾಲಿನ್, ಮುಖ್ಯಮಂತ್ರಿ, ತಮಿಳುನಾಡು ಮತ್ತು ಅಧ್ಯಕ್ಷರು, ಡಿಎಂಕೆ, ಸೀತಾರಾಮ್ ಯೆಚೂರಿ, ಪ್ರಧಾನ ಕಾರ್ಯದರ್ಶಿ, ಸಿಪಿಐ(ಎಂ), ಹೇಮಂತ್ ಸೋರೇನ್, ಮುಖ್ಯಮಂತ್ರಿ, ಜಾರ್ಖಂಡ್ ಮತ್ತು ಕಾರ್ಯಾಧ್ಯಕ್ಷ ಜೆಎಂಎಂ, ಡಾ ಫಾರೂಕ್ ಅಬ್ದುಲ್ಲಾ, ಮಾಜಿ ಮುಖ್ಯಮಂತ್ರಿ, ಜಮ್ಮು ಮತ್ತು ಕಾಶ್ಮೀರ ಮತ್ತು ಅಧ್ಯಕ್ಷರು, ನ್ಯಾಷನಲ್ ಕಾನ್ಫರೆನ್ಸ್, ತೇಜಸ್ವಿ ಯಾದವ್, ವಿರೋಧ ಪಕ್ಷದ ನಾಯಕ – ಬಿಹಾರ ವಿಧಾನಸಭೆ, ಆರ್.ಜೆ.ಡಿ., ಡಿ. ರಾಜ, ಪ್ರಧಾನ ಕಾರ್ಯದರ್ಶಿ, ಸಿಪಿಐ, ದೇಬಬ್ರತ ಬಿಸ್ವಾಸ್, ಪ್ರಧಾನ ಕಾರ್ಯದರ್ಶಿ, ಫಾರ್ವರ್ಡ್ ಬ್ಲಾಕ್, ಮನೋಜ್ ಭಟ್ಟಾಚಾರ್ಯ, ಪ್ರಧಾನ ಕಾರ್ಯದರ್ಶಿ, ಆರೆಸ್ಪಿ, ಪಿ.ಕೆ. ಕುನ್ಹಾಲಿಕುಟ್ಟಿ, ಪ್ರಧಾನ ಕಾರ್ಯದರ್ಶಿ, ಐಯುಎಂಎಲ್ ಮತ್ತು ದೀಪಂಕರ್ ಭಟ್ಟಾಚಾರ್ಯ, ಪ್ರಧಾನ ಕಾರ್ಯದರ್ಶಿ, ಸಿಪಿಐ(ಎಂಎಲ್)–ಲಿಬರೇಶನ್ ಸಹಿ ಮಾಡಿದ್ದಾರೆ.



ಉಪನಿರ್ದೇಶಕರ ಕಛೇರಿ ಮುತ್ತಿಗೆ ಹಾಕಿದ ಅಕ್ಷರ ದಾಸೋಹ ನೌಕರರು

60 ವರ್ಷ ವಯೋಮಾನ ನೆಪವೊಡ್ಡಿ 19 ವರ್ಷ ಸೇವೆ ಸಲ್ಲಿಸಿದ ಬಡ ಮಹಿಳೆಯರನ್ನು ನಿವೃತ್ತಿ ಹೆಸರಿನಲ್ಲಿ ಅಮಾನವೀಯವಾಗಿ ಬಿಡುಗಡೆ ಮಾಡಿರುವ ಕ್ರಮವನ್ನು ಖಂಡಿಸಿ ಅಕ್ಷರ ದಾಸೋಹ ನೌಕರರ ಸಂಘಟನೆಯ ಕಾರ್ಯಕರ್ತರು ಸಿಐಟಿಯು ನೇತೃತ್ವದಲ್ಲಿ ಇಂದು ಉಪನಿರ್ದೇಶಕರ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದೆ.

60 ವರ್ಷದ ಬಿಸಿಯೂಟ ನೌಕರರನ್ನು ಕೆಲಸದಿಂದ ಬಿಡುಗಡೆಗೊಳಿಸುವಾಗ ನಿವೃತ್ತಿ ವೇತನ ಅಥವಾ ಇಡಿಗಂಟು ನೀಡಿ ಬಿಡುಗಡೆ ಮಾಡಬೇಕು. ಮಾರ್ಚ್ 31, 2022ಕ್ಕೆ ಬಿಸಿಯೂಟ ನೌಕರರನ್ನು ಬಿಡುಗಡೆಗೊಳಿಸಲು ಹೊರಡಿಸಿರುವ ಸುತ್ತೋಲೆಯನ್ನು ಬದಲಾಯಿಸಿ ಎಪ್ರಿಲ್ 10ಕ್ಕೆ ಮರು ಆದೇಶ ನಿಡಬೇಕು. ಬಜೆಟ್ಟಿನಲ್ಲಿ ಬಿಸಿಯೂಟ ನೌಕರರಿಗೆ ಹೆಚ್ಚಳ ಮಾಡಿದ 1000 ರೂ. ವೇತನವನ್ನು ಜನವರಿ 2022ರಿಂದ ಅನ್ವಯಿಸಿ ಜಾರಿ ಮಾಡಬೇಕು. ಬಿಸಿಯೂಟ ಯೋಜನೆಯನ್ನು ಖಾಯಂ ಮಾಡಬೇಕು. ಕೇಂದ್ರೀಕೃತ ಅಡುಗೆ ಕೇಂದ್ರ ಮಾದರಿಯನ್ನು ಕೈಬಿಡಬೇಕು. ಬೇಸಿಗೆ ಮತ್ತು ದಸರಾ ರಜೆಗಳ ವೇತನವನ್ನು ನೀಡಬೇಕು ಎಂದು ಆಗ್ರಹಿಸಿದರು.

ಬಿಸಿಯೂಟ ನೌಕರರನ್ನು ಖಾಯಂ ಮಾಡಿ ಶಾಸನಾತ್ಮಕ ಸವಲತ್ತುಗಳನ್ನು ಜಾರಿ ಮಾಡಬೇಕು. ಬಿಸಿಯೂಟ ನೌಕರರಿಗೆ ಪ್ರತಿ ತಿಂಗಳು 5 ನೇ ತಾರೀಖಿನ ಒಳಗೆ ವೇತನ ಪಾವತಿಯಾಗಬೇಕು. ಬಿಸಿಯೂಟ ನೌಕರರನ್ನು ನೇರವಾಗಿ ಶಿಕ್ಷಣ ಇಲಾಖೆಯಡಿಯಲ್ಲಿಯೇ ಮೇಲ್ವಿಚಾರಣೆ ನಡೆಸಬೇಕು. ಪ್ರತಿಶಾಲೆಯಲ್ಲಿ ಕನಿಷ್ಠ 2 ಜನ ಅಡುಗೆಯವರು ಇರಲೇಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದೆ.



ಪ್ರತಿಭಟನೆಯ ನೇತೃತ್ವವನ್ನು ಸಿಐಟಿಯು ರಾಜ್ಯಾಧ್ಯಕ್ಷೆ ಎಸ್. ವರಲಕ್ಷ್ಮೀ, ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ರಾಜ್ಯಾಧ್ಯಕ್ಷೆ ಲಕ್ಷ್ಮೀದೇವಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಮಾಲಿನಿ ಮೆಸ್ತಾ, ಸಿಐಟಿಯು ರಾಜ್ಯ ಮುಖಂಡರಾದ ಯಮುನಾ ಗಾಂವ್ಕರ್, ಲಕ್ಷ್ಮೀದೇವಮ್ಮ ಮತ್ತಿತರರು ವಹಿಸಿದ್ದರು.

ನಮ್ಮ ಗುರಿ ಸ್ಪಷ್ಟವಾಗಿದೆ, ಯಾವುದೇ ಗೊಂದಲವಿಲ್ಲ– ಬೃಂದಾ ಕಾರತ್.......

ಪುಟ 9 ರಿಂದ

ತಿದ್ದುಪಡಿಗಳು ಮತ್ತು 12 ಸಲಹೆಗಳನ್ನು ಪ್ರತಿನಿಧಿಗಳು ಮಂಡಿಸಿದರು. ಈ ಎಲ್ಲಾ ತಿದ್ದುಪಡಿಗಳು ಮತ್ತು ಸಲಹೆಗಳು ಮೂಲಭೂತವಾಗಿ ಕೇಂದ್ರ ಸಮಿತಿಯ ಕರಡಿನ ಆಶಯಕ್ಕೆ ಅನುಗುಣವಾಗಿಯೇ ಇದ್ದವು, ಅದನ್ನು ಬಲಪಡಿಸುವ ಉದ್ದೇಶವನ್ನು ಹೊಂದಿದ್ದವು.. ಬಿಜೆಪಿ–ಆರ್‌ಎಸ್‌ಎಸ್ ಆಳ್ವಿಕೆಯನ್ನು ಏಕಾಂಗಿಯಾಗಿಸುವುದು ಮತ್ತು ಸೋಲಿಸುವುದು ಅದರ ಅಜೆಂಡಾದ ಕೇಂದ್ರವಾಗಿತ್ತು. ಇದಕ್ಕಾಗಿ ನಾವು ರಾಜಕೀಯ ಪಕ್ಷಗಳ ಆಚೆಯೂ ನೋಡಬೇಕಿದೆ. ಸಾಮಾಜಿಕ ಚಳುವಳಿಗಳು ಮತ್ತು ಜನಾಂದೋಲನಗಳು, ವಿದ್ಯಾರ್ಥಿ ಹೋರಾಟಗಳು ಮತ್ತು ದಲಿತ–ಆದಿವಾಸಿಗಳ ಪ್ರಶ್ನೆಗಳಿವೆ. ಇವು ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಕೆಲಸ ಮಾಡುತ್ತಿವೆ ಎಂದ ಬೃಂದಾ ಕಾರಟ್ ದಿಲ್ಲಿ ಗಡಿಗಳಲ್ಲಿ ನಡೆದ ರೈತ ಹೋರಾವನ್ನು ಉದಾಹರಣೆಯಾಗಿ ನೀಡಿದರು.

3 ವಿವಾದಾತ್ಮಕ ಕೃಷಿ ಕಾನೂನುಗಳ ಮೇಲೆ ಮೋದಿ ಸರ್ಕಾರದ ವಿರುದ್ಧ ಹೋರಾಡಲು 500 ಕ್ಕೂ ಹೆಚ್ಚು ಸಂಘಟನೆಗಳು ಒಟ್ಟಾಗಿ ಸೇರಿಕೊಂಡಿವೆ. ಸಿಪಿಐ(ಎಂ) ಆ ವೇದಿಕೆಯನ್ನು ಬೆಂಬಲಿಸಿತು. ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ವಿರೋಧಿ ಆಂದೋಲನವು ಬಿಜೆಪಿ ಸರ್ಕಾರದ ವಿರುದ್ಧದ ಮೊದಲ ಬೃಹತ್ ಚಳುವಳಿಯಾಗಿದೆ. ಭಾರತದ ಪೌರತ್ವದ ಕಲ್ಪನೆಯ ಅಲುಗಾಡಿದಾಗ ಈ ಚಳುವಳಿ ಸ್ವಯಂಪ್ರೇರಿತವಾಗಿ ಸಜ್ಜುಗೊಂಡಿತು.

ಭಾರತದಲ್ಲಿ ಮಹಿಳೆಯರು ಈಗ ಅನಾಗರಿಕ ದಾಳಿಗಳನ್ನು ಎದುರಿಸುತ್ತಿದ್ದಾರೆ. ನಮಗೆ ಜನರ ಕಷ್ಟಗಳು ಮುಖ್ಯ. ಚುನಾವಣೆಯವರೆಗೆ ಕಾಯಲು ಸಾಧ್ಯವಿಲ್ಲ. ಇಂದು ನಾವು ಜನರ ನಡುವೆ ಹೋಗಬೇಕಾಗಿದೆ. ಇದು ಮನಸ್ಸಿನ ಹೋರಾಟವೇ ಹೊರತು ಮತಕ್ಕಾಗಿ ಅಲ್ಲ. ಅದಕ್ಕಾಗಿಯೇ ಸಿಪಿಐ(ಎಂ) ಜನರ ಕಾಳಜಿಯ ಮೇಲೆ ಗಮನ ಕೇಂದ್ರೀಕರಿಸುತ್ತಿದೆ ಎಂದು ಬೃಂದಾ ಕಾರಟ್ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸುತ್ತ ಹೇಳಿದರು.

ಚುನಾವಣೆ ಬಂದಾಗ ಈ ತಿಳುವಳಿಕೆಗೆ ಅನುಗುಣವಾಗಿ ಸೂಕ್ತ ತಂತ್ರಗಳನ್ನು ರೂಪಿಸಲಾಗುವುದು. ಈ ವಿಷಯದಲ್ಲಿ ಯಾವುದೇ ಗೊಂದಲವಿಲ್ಲ. ನಮ್ಮ ಗುರಿ ಸ್ಪಷ್ಟವಾಗಿದೆ ಎಂದು ಬೃಂದಾ ಕಾರಟ್ ಹೇಳಿದರು. ಎಪ್ರಿಲ್ 8ರ ಸಂಜೆ ನಡೆದ ಅಧಿವೇಶನದಲ್ಲಿ ರಾಜಕೀಯ–ಸಂಘಟನಾತ್ಮಕ ವರದಿಯ ಕರಡು ಪ್ರತಿಯನ್ನು ಪೊಲಿಟ್ ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್ ಮಂಡಿಸಿದರು. ಇದರ ಮೇಲೆ ಚರ್ಚೆಗಳು ಎಪ್ರಿಲ್ 9 ಎಪ್ರಿರ್ 9ರ ಬೆಳಿಗ್ಗೆಯ ಅಧಿವೇಶನದಲ್ಲಿ ಆರಂಭವಾದವು.



ಪರ್ಯಾಯ ಚುನಾವಣಾ ಪದ್ಧತಿಗಳು: ಪ್ರಜಾಪ್ರಭುತ್ವಕ್ಕೆ ಹೆಚ್ಚು ಸೂಕ್ತ, ಚಳುವಳಿಗಳಿಗೆ ಹೆಚ್ಚು ಅವಕಾಶ ನೀಡುವ ವಿಧಾನಗಳು

ಜಿ.ಎನ್. ನಾಗರಾಜ್

ಜಗತ್ತಿನ ಬಹಳಷ್ಟು ದೇಶಗಳು ನಾವು ಅನುಸರಿಸುವ ಚುನಾವಣಾ ಪದ್ಧತಿಯನ್ನು ತಿರಸ್ಕರಿಸಿವೆ. ಓಟು ಸಿಕ್ಕಷ್ಟು ಸೀಟು ಅಥವಾ ಗಳಿಸಿದ ಒಟ್ಟು ಓಟಿನ ಪ್ರಮಾಣಕ್ಕೆ ಅನುಗುಣವಾಗಿ ಸೀಟು ಎಂಬ proportional_representation ಪದ್ಧತಿಯಲ್ಲಿ ಅಭ್ಯರ್ಥಿಗಳೇ ಇರುವುದಿಲ್ಲ. ಬದಲಾಗಿ ಪಕ್ಷಗಳೇ ಅಭ್ಯರ್ಥಿ. ವ್ಯಕ್ತಿಗಳ ಹೆಸರು ಬ್ಯಾಲಟ್ ಪೇಪರಿನಲ್ಲಿ ಕಾಣುವುದಿಲ್ಲ. ಪಕ್ಷದ ಹೆಸರು, ಗುರುತುಗಳು ಮಾತ್ರ ಇರುತ್ತವೆ. ಮತದಾರರು ತಮಗೆ ಒಳ್ಳೆಯದೆನಿಸಿದ ಪಕ್ಷಗಳನ್ನು ಆಯ್ಕೆ ಮಾಡುತ್ತಾರೆ. ಅದರಿಂದಾಗಿ ಚುನಾವಣೆಯಲ್ಲಿ ಪಕ್ಷದ ಧೋರಣೆ, ನೀತಿಗಳು, ಅದರ ಚುನಾವಣಾ ಪ್ರಣಾಳಿಕೆಗೆ, ಅದರಲ್ಲಿ ಜನರ ಸಮಸ್ಯೆಗಳ ಪರಿಹಾರಕ್ಕೆ ಮುಂದಿಟ್ಟ ಕಾರ್ಯಕ್ರಮ, ಘೋಷಿತವಾದ ಯೋಜನೆ, ನೀಡಲಾಗುವ ಭರವಸೆಗಳಿಗೆ ಬಹಳ ಪ್ರಾಮುಖ್ಯತೆ ಬರುತ್ತದೆ. ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳಿಗಲ್ಲ. ಎಣಿಕೆಯ ನಂತರ ಆಯಾ ಪಕ್ಷಗಳು ಪಡೆದ ಒಟ್ಟು ಓಟು ಎಷ್ಟು ಎಂದು ಲೆಕ್ಕಿಸಿ ಅದರ ಶೇ. ಗಳಿಕೆಯಂತೆ ಪಕ್ಷಕ್ಕೆ ಸೀಟುಗಳನ್ನು ಹಂಚಲಾಗುತ್ತದೆ. ಉದಾಹರಣೆಗೆ ಕರ್ನಾಟಕ ರಾಜ್ಯದ ವಿಧಾನ ಸಭಾ ಚುನಾವಣೆ ಎಂದರೆ ಅದರ 224 ಸ್ಥಾನಗಳನ್ನು ಇಡೀ ರಾಜ್ಯದಲ್ಲಿ ವಿವಿಧ ಪಕ್ಷಗಳು ಗಳಿಸಿದ ಮತಗಳಿಗೆ ಅನುಗುಣವಾಗಿ ಹಂಚಲಾಗುತ್ತದೆ. ಆ ಮೂಲಕ ಚಲಾಯಿಸ್ಪಟ್ಟ ಪ್ರತಿ ಓಟಿಗೂ ಮಾನ್ಯತೆ ದೊರಕುವುದು ಈ ಪದ್ಧತಿಯ ವಿಶೇಷ.

ಪಕ್ಷಗಳಿಗೆ ಸ್ಥಾನ ಹಂಚಿಕೆ ಆಗುತ್ತದೆ, ಸರಿ. ವಿಧಾನಸಭೆಯಲ್ಲಿ ಕುಳಿತುಕೊಳ್ಳುವವರ್ಯಾರು? ಚರ್ಚೆ, ಮಸೂದೆ, ಬಜೆಟ್‌ಗಳ ಮೇಲೆ ವಿಧಾನಸಭೆಯೊಳಗೆ ಮತದಾನ ಮಾಡುವರಾ? ಯಾರು? ಯಾರಾದರೂ ವ್ಯಕ್ತಿಗಳೇ ಇರಬೇಕಲ್ಲ. ಈ ಪದ್ಧತಿಯಲ್ಲಿ ಪ್ರತಿ ಪಕ್ಷವೂ ವಿಧಾನ ಸಭೆಯಲ್ಲಿ ಪಕ್ಷದ ಸ್ಥಾನಗಳಲ್ಲಿ ಕುಳಿತುಕೊಳ್ಳುವ ತನ್ನ ಸದಸ್ಯರ ಹೆಸರನ್ನು ಚುನಾವಣೆಗೆ ಮೊದಲೇ ಚುನಾವಣಾ ಆಯೋಗಕ್ಕೆ ನೀಡಬೇಕು ಮತ್ತು ಸಾರ್ವಜನಿಕವಾಗಿ ಬಿಡುಗಡೆ ಮಾಡಬೇಕು. ಎಲ್ಲ ಮತದಾನ ಕೇಂದ್ರದ ಮುಂದೆ ವಿವಿಧ ಪಕ್ಷಗಳ ಪಟ್ಟಿಗಳನ್ನು ಪ್ರದರ್ಶಿಸಲಾಗುತ್ತದೆ.

ಪಕ್ಷವೊಂದು ಪಡೆದ ಮತ ಪ್ರಮಾಣಕ್ಕೆ ತಕ್ಕಂತೆ ಪಟ್ಟಿಯಲ್ಲಿ ನೀಡಲ್ಪಟ್ಟ ಆದ್ಯತೆ, ಕ್ರಮ ಸಂಖ್ಯೆಗಳಿಗೆ ಅನುಸಾರವಾಗಿ ವಿಧಾನ ಸಭಾ ಸದಸ್ಯರು ಆಯಾ ಪಕ್ಷವನ್ನು ವಿಧಾನ ಸಭೆಯಲ್ಲಿ ಪ್ರತಿನಿಧಿಸುತ್ತಾರೆಂದು ಚುನಾವಣಾ ಆಯೋಗ ಘೋಷಿಸಲಾಗುತ್ತದೆ. ಅಂದರೆ ಒಂದು ಪಕ್ಷ ಶೇ. 10 ರಷ್ಟು ಮತಗಳನ್ನು ಗಳಿಸಿದೆ ಎಂದರೆ ಆ ಪಕ್ಷದ ಪಟ್ಟಿಯ ಮೊದಲ ಕರ್ನಾಟಕ ವಿಧಾನ ಸಭೆಯಲ್ಲಿ 22 ಜನರು ವಿಧಾನಸಭಾ ಸದಸ್ಯರಾಗುತ್ತಾರೆ. ಹಾಗಾಗಿ ಈ ಚುನಾವಣಾ ಪದ್ಧತಿಗೆ list system ಅಥವಾ ಪಟ್ಟಿ ಪದ್ಧತಿ ಎಂದೂ ಹೆಸರಿದೆ.

ಪಟ್ಟಿ ಪದ್ಧತಿಯ ಪ್ರಯೋಜನಗಳು

ಕ್ಷೇತ್ರ ಆಧಾರಿತ ಚುನಾವಣಾ ಪದ್ಧತಿಯಲ್ಲಿ ವಿಶೇಷ ತಜ್ಞರು– ಆರ್ಥಿಕ, ಇಂಜನಿಯರಿಂಗ್, ವೈದ್ಯಕೀಯ, ಶಿಕ್ಷಣ ತಜ್ಞರು, ಇತರ ಮೇಧಾವಿಗಳು, ಸಾಮಾಜಿಕ ಸೇವೆಯಲ್ಲಿ ತೊಡಗಿರುವವರು ಗೆಲ್ಲುವುದು ಬಹಳ ಅಪರೂಪದ ಸಂಗತಿ. ಆದರೆ ಇಂತಹ ಪಟ್ಟಿಯಲ್ಲಿ ಅವರು ಸ್ಥಾನ ಪಡೆದು ವಿಧಾನ ಸಭಾ/ ಲೋಕಸಭಾ ಸದಸ್ಯರಾಗಿ, ಮಂತ್ರಿಗಳಾಗಿ ಪರಿಣಾಮಕಾರಿಯಾಗಿ ಕೆಲಸ ಮಾಡುವ ಅವಕಾಶವನ್ನು ಒದಗಿಸುತ್ತದೆ.

ಚಳುವಳಿಗಳು ಚುನಾವಣಾ ಯಶಸ್ಸು ಸಾಧಿಸಲು ಇಂತಹ ಪದ್ಧತಿ ಹೆಚ್ಚು ಅವಕಾಶ ಒದಗಿಸುತ್ತದೆ. ಚಳುವಳಿಗಳ ಪ್ರಭಾವ ಒಂದು ಕ್ಷೇತ್ರದ ವ್ಯಾಪ್ತಿಯಲ್ಲಿ ಕೇಂದ್ರಿಕೃತವಾಗದೆ ಇಡೀ ರಾಜ್ಯದಲ್ಲಿ ಹಂಚಿ ಹೋಗುವುದರಿಂದ ಇಡೀ ರಾಜ್ಯದಲ್ಲಿ ಈ ಚಳುವಳಿಗಳು ಪಡೆದ ಒಟ್ಟು ಮತ ಪ್ರಮಾಣಕ್ಕೆ ಅನುಗುಣವಾಗಿ ಪ್ರತಿನಿಧಿ ಸ್ಥಾನ ದಕ್ಕುತ್ತದೆ. ರಾಜ್ಯದ ಯಾವುದೇ ಮೂಲೆಯಲ್ಲಿ ಒಂದು ಓಟು ನೀಡಿದರೂ ಅದು ಆ ಚಳುವಳಿಯ ಮತಗಳಿಕೆ ಲೆಕ್ಕಕ್ಕೆ ಸೇರಲ್ಪಡುವುದರಿಂದ ಮತದಾರರು ನಮಗೆ ರೈತ – ದಲಿತ – ಕಾರ್ಮಿಕ ಚಳುವಳಿ ಇಷ್ಟ. ಆದರೆ ಚಳುವಳಿಗಳಿಗೆ ಓಟು ಹಾಕಿದರೆ ನಮ್ಮ ಓಟು ವ್ಯರ್ಥವಾಗುತ್ತದೆ. ಆದ್ದರಿಂದ ಗೆಲ್ಲುವ ಸಾಧ್ಯತೆ ಇರುವ ಪಕ್ಷಗಳಿಗೆ ಓಟು ಹಾಕುತ್ತೇವೆ ಎಂಬ ಅನಿವಾರ್ಯತೆ ಇಲ್ಲ.


ಈ ಪದ್ಧತಿಯ ಮತ್ತೊಂದು ಮುಖ್ಯ ಅಂಶವೆಂದರೆ ಸದಸ್ಯರುಗಳು ಪಕ್ಷಾಂತರ ಮಾಡುವುದಕ್ಕೆ ಅವಕಾಶವೇ ಇಲ್ಲ. ಇಡೀ ಪಕ್ಷದ ನಿಲುವು ಬದಲಾಗಬಹುದೇ ಹೊರತು ಕೆಲ ಸದಸ್ಯರು ಕೂಡಿಕೊಂಡು ಸರ್ಕಾರವನ್ನು ಬೀಳಿಸುವುದಕ್ಕೆ ಅವಕಾಶ ಇಲ್ಲ. ಏಕೆಂದರೆ ಪಕ್ಷದ ತೀರ್ಮಾನಕ್ಕೆ ಎಲ್ಲ ಸದಸ್ಯರೂ ಬದ್ಧರಾಗಿರಬೇಕು. ಒಂದು ಪಕ್ಷದ ಸದಸ್ಯರಲ್ಲಿ ಭ್ರಷ್ಟಾಚಾರ ಅಥವಾ ಮತ್ತೇನಾದರೂ ಅನೈತಿಕತೆ ಕಂಡು ಬಂದರೆ ಅಂತಹ ಸದಸ್ಯರನ್ನು ವಾಪಸ್ ಪಡೆದು ಬೇರೆ ಸದಸ್ಯರನ್ನು ಅವರ ಬದಲಿಗೆ ನೇಮಿಸಲು ಪಕ್ಷಗಳಿಗೆ ಅಧಿಕಾರವಿರುತ್ತದೆ. ಆದ್ದರಿಂದ ಶಾಸಕ,ಸಂಸದರ ವೈಯುಕ್ತಿಕ ಭ್ರಷ್ಟಾಚಾರಕ್ಕೆ ಆಸ್ಪದ ಇಲ್ಲ. ಕ್ಷೇತ್ರಗಳಲ್ಲಿ ಹಣದ ಹೊಳೆ ಹರಿಸಿ ಭ್ರಷ್ಟ ಶಾಸಕರು ಗೆದ್ದು ಬರಲೂ ಅವಕಾಶವಿಲ್ಲ. ಈ ಚುನಾವಣಾ ಪದ್ಧತಿಯ ಪ್ರಕಾರ ಭಾರತದಲ್ಲಿ ಒಂದೆರಡು ಬಾರಿ ಬಿಟ್ಟರೆ ಯಾವಾಗಲೂ ಯಾರಿಗೂ ಬಹುಮತ ಸಿಕ್ಕುತ್ತಿರಲಿಲ್ಲ. ರಾಜ್ಯಗಳಲ್ಲಿ ಕೂಡಾ ಅಪರೂಪವೇ.

ಬಿಜೆಪಿ 2014 ರಲ್ಲಿ ಗಳಿಸಿದ ಮತಗಳು ಕೇವಲ ಶೇ. 30 ಎನ್‌ಡಿಎ ಕೂಟಕ್ಕೆ ಶೇ. 38. ಓಟಿಗೆ ತಕ್ಕಂತೆ ಸೀಟು ಪದ್ಧತಿಯ ಪ್ರಕಾರ ಬಿಜೆಪಿಗೆ 163, ಎನ್‌ಡಿಎಗೆ 207 ಮಾತ್ರ, ಬಹುಮತಕ್ಕೆ ಬೇಕಾದ 272 ಕ್ಕೆ ಬಹಳ ಕಡಿಮೆ ಸ್ಥಾನಗಳು. 2019 ರಲ್ಲಿ ಇನ್ನೂ ಹೆಚ್ಚಿನ ಮತಗಳಿಕೆಯಾದರೂ (ಶೇ. 45) ಬಹುಮತಕ್ಕೆ ಕಡಿಮೆ. ವಾಜಪೇಯಿ ಪ್ರಧಾನಮಂತ್ರಿಯಾಗಿ ಬಿಜೆಪಿ ಮೊದಲ ಸರ್ಕಾರ ರಚಿಸಿದಾಗ ಕೇವಲ ಶೇ. 23.4 ಸ್ವಾತಂತ್ರ್ಯ ಹೋರಾಟದ ಬಿಸಿ ಇನ್ನೂ ಉಳಿದಿರುವಾಗಲೇ 1952 ರ ಮೊದಲ ಚುನಾವಣೆಯಲ್ಲಿಯೇ ಕಾಂಗ್ರೆಸ್ ಗಳಿಸಿದ್ದು ಕೇವಲ ಶೇ.45. ವಾಜಪೇಯಿ ಸರ್ಕಾರವನ್ನು ಸೋಲಿಸಿ 2004 ರ ಚುನಾವಣೆಗಳಲ್ಲಿ ಅಧಿಕಾರಕ್ಕೆ ಬಂದಾಗ ಗಳಿಸಿದ್ದ ಮತ ಕೇವಲ ಶೇ. 26.4, 2009 ರ ಚುನಾವಣೆಯಲ್ಲಿ ಮತ್ತೆ ಅಧಿಕಾರಕ್ಕೆ ಬಂದಾಗಲೂ ಕೇವಲ ಶೇ. 28.7. ಹೀಗೆ ಕಾಲು ಭಾಗಕ್ಕಿಂತ ಕಡಿಮೆ ಮತ ಗಳಿಸಿದರೂ, ಶೇ.75 ಭಾಗ ನಿಮ್ಮ ಪಕ್ಷ ನಮಗೆ ಬೇಕಿಲ್ಲ ಎಂದರೂ ಸರ್ಕಾರ ರಚಿಸಲು ಅವಕಾಶ ಕೊಡುತ್ತದೆ ಈಗಿನ ಪದ್ಧತಿ. ಇದನ್ನೇ ಹಿಂದಿನ ಸಂಚಿಕೆಯಲ್ಲಿ ಕೃತಕ ಬಹುಮತ ಸೃಷ್ಟಿ ಎಂದು ಹೇಳಿರುವುದು. ಹೀಗೆ ರಾಷ್ಟ್ರ ಮಟ್ಟದ ದೊಡ್ಡ ಕಾರ್ಪೊರೇಟ್ ಪಕ್ಷಗಳಿಗೆ ಅವರ ನಿಜವಾದ ಸ್ಥಾನ ಎಲ್ಲಿ ಎಂದು ತೋರಿಸುವುದು ಮಾತ್ರವಲ್ಲ ರಾಷ್ಟ್ರ ಮಟ್ಟದಲ್ಲೂ, ರಾಜ್ಯ ಮಟ್ಟದಲ್ಲೂ ಸಣ್ಣ ಮತ್ತು ಹೊಸ ಪಕ್ಷಗಳಿಗೆ ನ್ಯಾಯ ಒದಗಿಸುವುದು ಓಟಿಗೆ ತಕ್ಕ ಸೀಟು ಪದ್ಧತಿ.

ಪಟ್ಟಿ ಪದ್ಧತಿಯ ಬಗ್ಗೆ ಆಕ್ಷೇಪಗಳು

ಈ ಪದ್ಧತಿ ರಾಜಕೀಯ ಅಸ್ಥಿರತೆ ಉಂಟು ಮಾಡುತ್ತದೆ. ಬಹುತೇಕವಾಗಿ ಯಾವ ಪಕ್ಷಕ್ಕೂ ಬಹುಮತ ಸಿಗುವುದೇ ಇಲ್ಲ. ಆದ್ದರಿಂದ ಮೈತ್ರಿ ಸರ್ಕಾರಗಳೇ ಸರ್ಕಾರ ನಡೆಸುವುದು ದೇಶದ ಹಿತಕ್ಕೆ ಹಾನಿಕರ ಎಂಬ ವಾದವನ್ನು ಆಳುವವರು ಹೂಡುತ್ತಾ ಬಂದಿದ್ದಾರೆ. ಆದರೆ ಅಸ್ಥಿರತೆ ಎಂದರೇನು, ಅಸ್ಥಿರತೆ ಯಾರಿಗೆ? ಕಾರ್ಪೊರೇಟ್ ಪಕ್ಷಗಳಿಗೆ ಮನ ಬಂದಂತೆ ಕಾರ್ಪೊರೇಟ್ ಪರ ಸರ್ಕಾರ ನಡೆಸುತ್ತಾ ಜನರನ್ನು ಸಂಕಟಕ್ಕೆ ದೂಡುವ ಅವಕಾಶಕ್ಕೆ ಸ್ಥಿರತೆ ಎನ್ನಬೇಕೆ?

ಜನಪರ ಚಳುವಳಿ ನಡೆಸಿ ಜನರ ಸಂಕಟಗಳಿಗೆ ಪರಿಹಾರಕ್ಕಾಗಿ ಒತ್ತಾಯಿಸುವ ಚಳುವಳಿಗಾರ ಪಕ್ಷಗಳಿಗೆ ಈ ಕಾರ್ಪೊರೇಟ್ ಅಡಿಯಾಳು ನೀತಿಗಳಿಗೆ ಮೂಗುದಾರ ಹಾಕುವ ಅವಕಾಶ ನೀಡಬಾರದೆನ್ನುವ ಈ ವಾದವನ್ನು ಒಪ್ಪಿಕೊಳ್ಳಬೇಕೆ?



1989 ರ ನಂತರ ದೇಶದಲ್ಲಿ, ಹಲವು ರಾಜ್ಯಗಳಲ್ಲಿ ಸಮ್ಮಿಶ್ರ ಸರ್ಕಾರಗಳು ಅಸ್ತಿತ್ವಕ್ಕೆ ಬಂದಾಗ ಪದೇ ಪದೇ ಈ ವಾದಗಳನ್ನು ಒಡ್ಡಲಾಯಿತು.

ಓಟಿಗೆ ತಕ್ಕಂತೆ ಸೀಟು ಪದ್ಧತಿಯ ಮೇಲೆ ಮತ್ತೆ ಕೆಲವು ಮುಖ್ಯ ಆಕ್ಷೇಪಣೆಗಳಲ್ಲಿ ಒಂದು, ಕ್ಷೇತ್ರಗಳ, ಪ್ರದೇಶಗಳ ಅಭಿವೃದ್ಧಿ ನಿರ್ಲಕ್ಷ್ಯಕ್ಕೆ ಒಳಗಾಗುತ್ತದೆ. ಇದರಿಂದಾಗಿ ಪ್ರಾದೇಶಿಕ ಅಸಮತೋಲನ ಉಂಟಾಗುತ್ತದೆ ಎಂದು. ಮತ್ತೊಂದು ಈ ಪದ್ಧತಿಯಲ್ಲಿ ಶಾಸಕರು, ಸಂಸದರು ಪಕ್ಷದ ಪ್ರಬಲ ನಾಯಕರ ಹಿಡಿತದಲ್ಲಿ ಸಿಲುಕಿಕೊಳ್ಳುತ್ತಾರೆ. ಅವರು ಏಳೆಂದರೆ ಏಳಬೇಕು, ಕೂರೆಂದರೆ ಕೂರಬೇಕು ಎಂಬ ಸ್ಥಿತಿ ಉಂಟಾಗುತ್ತದೆ. ಶಾಸಕರಿಗೂ ಜನತೆಗೂ ಸಂಪರ್ಕವೇ ತಪ್ಪಿ ಹೋಗುವಂತಾಗುತ್ತದೆ. ಭಾರತದಲ್ಲಿ ಅನೇಕ ಪಕ್ಷಗಳಲ್ಲಿನ ಪರಿಸ್ಥಿತಿ, ಹೈಕಮಾಂಡ್ ಸಂಸ್ಕೃತಿಯಲ್ಲಿ ಇಂತಹ ಅಪಾಯ ಹೆಚ್ಚು. ಪಟ್ಟಿ ಪದ್ಧತಿಯ ಪರವಾಗಿರುವವರು ವಿಧಾನ ಸಭೆ, ಲೋಕ ಸಭೆಯಂತಹವು ಅವುಗಳಿಗೆ ಸಂವಿಧಾನ ವಿಧಿಸಿರುವ ಕರ್ತವ್ಯಗಳ ಹೊಣೆ ಇಡೀ ರಾಜ್ಯದ ಜನತೆಗೆ ಮತ್ತು ರಾಜ್ಯದ ಅಭಿವೃದ್ಧಿಗೆ ಬೇಕಾದ ನೀತಿ ನಿರೂಪಣೆ, ಕಾರ್ಯಕ್ರಮ, ಯೋಜನೆಗಳನ್ನು ರೂಪಿಸುವುದು, ಅವಶ್ಯ ಕಾನೂನುಗಳನ್ನು ಅಂಗೀಕರಿಸುವುದೇ ಹೊರತು ಒಂದು ಪ್ರದೇಶ, ಕ್ಷೇತ್ರದ ಅಭಿವೃದ್ಧಿಯಲ್ಲ. ಈ ಸದನಗಳ ಸದಸ್ಯರು ಈ ಗುರಿಯನ್ನು ಸಾಧಿಸುವುದಕ್ಕೆ ಬೇಕಾದ ಅಧ್ಯಯನ, ಶಾಸಕಾಂಗಗಳ ಒಳಗೆ, ಹೊರಗೆ ಇವುಗಳ ಬಗ್ಗೆ ಚರ್ಚೆಗೆ ತಮ್ಮ ಸಮಯ ವಿನಿಯೋಗಿಸಬೇಕೇ ಹೊರತು ಕ್ಷೇತ್ರಗಳ, ಪ್ರದೇಶಗಳ ಅಭಿವೃದ್ಧಿಗಲ್ಲ. ಸೂಕ್ತ ನೀತಿ, ಯೋಜನೆಗಳನ್ನು ರೂಪಿಸಿದರೆ ಅಭಿವೃದ್ಧಿ, ಜನರ ಸಮಸ್ಯೆಗಳಿಗೆ ಪರಿಹಾರ ದೊರಕುತ್ತದೆ. ಕ್ಷೇತ್ರಗಳಿಗೆ ಮಾತ್ರ ಗಮನ ನೀಡಿ ಅವಶ್ಯವಾದ ಅಧ್ಯಯನ, ವಿಚಾರ ವಿನಿಮಯಗಳಿಗೆ ಗಮನ ನೀಡದಿದ್ದರೆ ಕ್ಷೇತ್ರಗಳ, ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿಗೂ ತೊಡಕಾಗುತ್ತದೆ. ರೂಪಿಸಿದ ನೀತಿ, ಯೋಜನೆಗಳ ಸಮರ್ಪಕ ಜಾರಿ ಮಾಡುವುದು, ಆ ಮೂಲಕ ಪ್ರದೇಶಗಳ ಅಭಿವೃದ್ಧಿಗೆ ಗಮನ ಕೊಡಬೇಕಾಗಿರುವುದು ಪಂಚಾಯತ್ ವ್ಯವಸ್ಥೆ ಮತ್ತು ನಗರ ಸಭೆಗಳು. ಶಾಸಕ, ಸಂಸದರುಗಳ ಕೈಯಲ್ಲಿ ಅಧಿಕಾರದ ಕೇಂದ್ರೀಕರಣದಿಂದ ಅಭಿವೃದ್ಧಿಯಾಗುವುದಿಲ್ಲ. ಗರಿಷ್ಠ ಮಟ್ಟದ ವಿಕೇಂದ್ರೀಕರಣವೇ ಅದಕ್ಕೆ ಉತ್ತಮ ವಿಧಾನ. ಗ್ರಾಮ ಪಂಚಾಯತ್‌ಗಳಿಗೆ ಅತಿ ಹೆಚ್ಚು ಅಧಿಕಾರ ಇರಬೇಕು ಎಂಬ ತಾತ್ವಿಕ ತಿಳುವಳಿಕೆಯನ್ನು ಮುಂದಿಡುತ್ತಾರೆ.

ಸುಧಾರಿತ ಪಟ್ಟಿ ಪದ್ಧತಿ

ಆದರೆ ಪ್ರದೇಶಾಭಿವೃದ್ಧಿಯ ಸಮಸ್ಯೆಗೆ ಮಾತ್ರವಲ್ಲ ಪಕ್ಷದ ಕಮ್ಯಾಂಡ್‌ಗಳ ಹಿಡಿತಗಳಿಗೆ ಪರಿಹಾರವಾಗಿ ಕ್ಷೇತ್ರ ಕೇಂದ್ರಿತ ಪದ್ಧತಿ ಮತ್ತು ಪಟ್ಟಿ ಪದ್ಧತಿ ಎರಡರ ಸಂಗಮದ ಮೂಲಕ ರೂಪಿಸಿದ ಒಂದು ಸುಧಾರಿತ ಪದ್ಧತಿ ಇಂದು ವಿಶ್ವದ ಹಲವು ದೇಶಗಳಲ್ಲಿ ಪ್ರಚಲಿತವಾಗಿದೆ. ಕ್ಷೇತ್ರಗಳನ್ನು ಪ್ರತಿನಿಧಿಸುವ ಶಾಸಕರು, ಸಂಸದರು ಕ್ಷೇತ್ರಗಳಿಂದ ಆಯ್ಕೆಯಾಗುತ್ತಾರೆ. ಅದೇ ಸಮಯದಲ್ಲಿ ಇಡೀ ದೇಶಯಾ ರಾಜ್ಯದಲ್ಲಿ ಒಂದು ಪಕ್ಷ ಗಳಿಸಿದ ಮತಗಳ ಪ್ರಮಾಣಕ್ಕೆ ಅನುಗುಣವಾಗಿ ವಿಧಾನ ಸಭೆ ಯಾ ಲೋಕಸಭೆಯ ಸ್ಥಾನಗಳ ಒಂದು ಭಾಗವನ್ನು ಹಂಚಲಾಗುತ್ತದೆ. ಈಗ ನಮ್ಮ ನೆರೆಯ ನೇಪಾಳ, ಶ್ರೀಲಂಕಾ ದೇಶಗಳಲ್ಲಿ, ಯುರೋಪಿನ ಹಲವು ದೇಶಗಳಲ್ಲಿ, ಅಭಿವೃದ್ಧಿಶೀಲ ದೇಶಗಳಲ್ಲಿಯೂ ಈ ಸಂಗಮ ಪದ್ಧತಿ ಜಾರಿಯಲ್ಲಿದ್ದು, ವಿಶ್ವದಲ್ಲಿ ಈ ಪದ್ಧತಿಯೇ ಹೆಚ್ಚು ಪ್ರಚಲಿತವಾದ ಚುನಾವಣಾ ಪದ್ಧತಿ.

ಇಂದು ಮೀಸಲಾತಿ ಕ್ಷೇತ್ರಗಳಲ್ಲಿ ಏನಾಗುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಯಾವ ಅಭ್ಯರ್ಥಿ ಮೇಲ್ಜಾತಿಗಳ ಕೈಯಾಳಾಗಿರುತ್ತಾರೋ ಅಂತಹ ದಲಿತ ಅಭ್ಯರ್ಥಿಯನ್ನು ಮಾತ್ರ ಮೀಸಲಾತಿ ಕ್ಷೇತ್ರಗಳ ದಲಿತೇತರರು ಗೆಲ್ಲಿಸುವುದು. ಆದರೆ ಓಟಿಗೆ ತಕ್ಕ ಸೀಟು ಪದ್ಧತಿ ಇಂತಹ ಅಸಂಬದ್ಧ ಪರಿಸ್ಥಿತಿಗೆ ಕೊನೆ ಹಾಡುತ್ತದೆ.

ಆದರೆ ಆಳುವವರಿಗೆ ತಮಗೆ ಅನಾಯಾಸವಾಗಿ ಕೃತಕ ಬಹುಮತವನ್ನು ಸೃಷ್ಟಿಸಿಕೊಡುವ ಕುದುರೆ

ಪುಟ 15 ಕ್ಕೆ

ಪ್ಯಾಲೆಸ್ತೀನ್ ಜೊತೆ ಸೌಹಾರ್ದ ಸಾಮ್ರಾಜ್ಯಶಾಹಿ ಮತ್ತು ಕೋಮುವಾದದ ವಿರುದ್ಧ ಹೋರಾಟದ ಅವಿಭಾಜ್ಯ ಅಂಗ – ಸಿಪಿಐ(ಎಂ) ಮಹಾಧಿವೇಶನ

ಸಿಪಿಐ(ಎಂ)ನ 23ನೇ ಮಹಾಧಿವೇಶನ ಏಳು ದಶಕಗಳಿಗೂ ಹೆಚ್ಚು ಕಾಲ ತಮ್ಮ ತಾಯ್ನಾಡಿಗಾಗಿ ಹೋರಾಡುತ್ತಿರುವ ಪ್ಯಾಲೆಸ್ತೀನ್ ಜನರೊಂದಿಗೆ ಸೌಹಾರ್ದವನ್ನು ಪುನರುಚ್ಚರಿಸಿರುವ ನಿರ್ಣಯವನ್ನು ಅಂಗೀಕರಿಸಿತು.

ಮಾರ್ಚ್ 30, 2018 ರಿಂದ ಪ್ಯಾಲೇಸ್ಟಿನಿಯನ್ ಜನರು ತಮ್ಮ ತಾಯ್ನಾಡಿಗೆ ಮರಳುವ ಹಕ್ಕಿಗಾಗಿ ಸಾಮೂಹಿಕ ಪ್ರತಿಭಟನೆಗಳ ಸರಣಿಯನ್ನು ಪ್ರಾರಂಭಿಸಿದರು. ಈ ಪ್ರತಿಭಟನೆಗಳು ಎರಡು ವರ್ಷಗಳಿಗೂ ಹೆಚ್ಚು ಕಾಲ ನಡೆದವು, 2020 ರಲ್ಲಿ ಮಹಾಸೋಂಕಿನ ಸಮಯದಲ್ಲಿ ಅದನ್ನು ಅಮಾನತುಗೊಳಿಸಲಾಯಿತು. ಇಸ್ರೇಲಿ ಸರ್ಕಾರವು 260 ಕ್ಕೂ ಹೆಚ್ಚು ಪ್ಯಾಲೆಸ್ಟೀನಿಯನ್ನರನ್ನು ಕೊಂದಿತು, ಹೆಚ್ಚಾಗಿ ಸ್ನೈಪರ್ ಬೆಂಕಿಯಿಂದ ಅವರು ಸಾವಿಗೀಡಾದರು.ಮತ್ತು ಸಾವಿರಾರು ಜನರು ಗಾಯಗೊಂಡರು. ಪ್ಯಾಲೆಸ್ಟೀನಿಯರ ಹತ್ಯೆ ದಿನನಿತ್ಯದ ಸಂಗತಿಯಾಗಿ ಬಿಟ್ಟಿತ್ತು.

ಇತ್ತೀಚಿನ ಅವಧಿಯಲ್ಲಿ ಪ್ಯಾಲೆಸ್ಟೀನಿಯನ್ನರ ಬಗ್ಗೆ ಇಸ್ರೇಲ್ ಸರ್ಕಾರದ ವರ್ತನೆಯು ಹೆಚ್ಚು ಯುದ್ಧಕೋರತನಕ್ಕೆ ತಿರುಗಿದೆ, ವಿಶೇಷವಾಗಿ ಅಮೆರಿಕ ಜೆರುಸಲೆಮ್ ಅನ್ನು ಇಸ್ರೇಲ್‌ನ ರಾಜಧಾನಿಯಾಗಿ ಗುರುತಿಸಿದ ಮತ್ತು ಅಲ್ಲಿಗೆ ತನ್ನ ರಾಯಭಾರ ಕಚೇರಿಯನ್ನು ಸ್ಥಳಾಂತರಿಸಿದ ನಂತರ. ಅಮೆರಿಕನ್ ಆಡಳಿತದ ಮುಕ್ತ ಬೆಂಬಲ, ಅದರ "ಶತಮಾನದ ವ್ಯವಹಾರ" ಘೋಷಣೆ, ಇಸ್ರೇಲ್ ಸರ್ಕಾರವನ್ನು ಧೈರ್ಯಗೊಳಿಸಿತು, ಇದು ಇಸ್ರೇಲ್ ಅನ್ನು "ಯಹೂದಿ ರಾಷ್ಟ್ರ ಪ್ರಭುತ್ವ" ಎಂದು ಘೋಷಿಸುವ ಕಾನೂನನ್ನು ಜಾರಿಗೆ ತಂದಿತು. ಈ ಕಾನೂನು ಇಸ್ರೇಲ್‌ನ ಜನಸಂಖ್ಯೆಯ ಸುಮಾರು 21 ಪ್ರತಿಶತದಷ್ಟು ಇರುವ ಅರಬ್ ಪ್ಯಾಲೆಸ್ಟೀನಿಯನ್ನರಿಗೆ ಅವರ ಎಲ್ಲಾ ಹಕ್ಕುಗಳನ್ನು ನಿರಾಕರಿಸುತ್ತದೆ ಮತ್ತು ಅವರನ್ನು ಎರಡನೇ ದರ್ಜೆಯ ಪ್ರಜೆಗಳೆಂದು ಗುರುತಿಸುತ್ತದೆ.

ಈ ಕಾನೂನು ಪ್ಯಾಲೇಸ್ಟಿನಿಯನ್ ಜನರನ್ನು ಅವರ ಮನೆಗಳು ಮತ್ತು ಭೂಮಿಯಿಂದ ಓಡಿಸಿ ಯಹೂದಿ ನೆಲಸು ಪ್ರದೇಶಗಳ ಸ್ಥಾಪನೆಯನ್ನು ಉತ್ತೇಜಿಸುತ್ತದೆ. "ಜನಾಂಗದ್ವೇಷ ನೀತಿಯ ಗೋಡೆಯು" ನಿರ್ಮಾಣದಿಂದಾಗಿ ಅನೇಕ ಪ್ಯಾಲೇಸ್ಟಿನಿಯನ್ ವಸತಿ ಪ್ರದೇಶಗಳನ್ನು ದ್ವೀಪಗಳಾಗಿ ಪರಿವರ್ತಿಸಲಾಗಿದೆ. ಇದು ಪ್ಯಾಲೇಸ್ಟಿನಿಯನ್ ಮನೆಗಳನ್ನು ಅವರ ಭೂಮಿ, ಮಾರುಕಟ್ಟೆಗಳು, ಶಾಲೆಗಳು ಮತ್ತು ಪೂಜಾ ಸ್ಥಳಗಳಿಂದ ಬೇರ್ಪಡಿಸುತ್ತದೆ.

2.6 ಮಿಲಿಯನ್‌ಗಿಂತಲೂ ಹೆಚ್ಚು ಪ್ಯಾಲೆಸ್ಟೀನಿಯನ್ನರು ಪಶ್ಚಿಮ ದಂಡೆಯಲ್ಲಿ ಡಜನ್‌ಗಟ್ಟಲೆ ಪರಸ್ಪರ ಸಂಪರ್ಕವಿಲ್ಲದ ಆವೃತ್ತ ಪ್ರದೇಶಗಳಲ್ಲಿ, ಕಠಿಣ ಮಿಲಿಟರಿ ಆಡಳಿತದಲ್ಲಿ ಮತ್ತು ರಾಜಕೀಯ ಹಕ್ಕುಗಳಿಲ್ಲದೆ ವಾಸಿಸುತ್ತಿದ್ದಾರೆ. ಇಸ್ರೇಲ್ ಪಶ್ಚಿಮ ದಂಡೆಯಲ್ಲಿ 280 ಕ್ಕೂ ಹೆಚ್ಚು ಯೆಹೂದಿ ಕಾಲನಿಗಳನ್ನು ಸ್ಥಾಪಿಸಿದೆ (ಪೂರ್ವ ಜೆರುಸಲೆಮ್ ಸೇರಿದಂತೆ); ಇವುಗಳು ಈಗ 600,000 ಕ್ಕೂ ಹೆಚ್ಚು ಯಹೂದಿಗಳಿಗೆ ನೆಲೆಯಾಗಿದೆ. ಪ್ಯಾಲೇಸ್ಟಿನಿಯನ್ನರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ತೆರಳಲು ಇಸ್ರೇಲಿ ಅಧಿಕಾರಿಗಳಿಂದ ಪರವಾನಿಗೆಗಳನ್ನು ತೆಗೆದುಕೊಳ್ಳಬೇಕಾಗಿದೆ.

ಯಹೂದಿ ಪ್ರಭುತ್ವ ಕಾನೂನು "ಜೆರುಸಲೆಮ್‌ನ ಏಕೀಕೃತ ಮತ್ತು ಸಂಪೂರ್ಣ ನಗರವು ಇಸ್ರೇಲ್‌ನ ರಾಜಧಾನಿಯಾಗಿದೆ" ಎಂದು ಘೋಷಿಸಿತು. ಇದು ವಿಶ್ವಸಂಸ್ಥೆಯ ನಿರ್ಣಯಗಳಿಗೆ ವಿರುದ್ಧವಾಗಿದೆ ಮತ್ತು ಎರಡು–ಪ್ರಭುತ್ವ ಪರಿಹಾರಕ್ಕೆ ದೊಡ್ಡ ಹೊಡೆತವಾಗಿದೆ. ಈ ಕಾನೂನು ಅಧಿಕೃತವಾಗಿ 1967 ರ ಗಡಿಗಳನ್ನು ಅಥವಾ ಪೂರ್ವ ಜೆರುಸಲೆಮ್ ಅನ್ನು ಪ್ಯಾಲೇಸ್ಟಿನಿಯನ್ ಪ್ರಭುತ್ವದ ರಾಜಧಾನಿಯಾಗಿ ಸ್ವೀಕರಿಸಲು ನಿರಾಕರಿಸುತ್ತದೆ. ಇದು ಪ್ಯಾಲೇಸ್ಟಿನಿಯನ್ ಪ್ರಭುತ್ವದ ಅಸ್ತಿತ್ವದ ಹಕ್ಕಿನ ನಿರಾಕರಣೆಯಾಗಿದೆ.

ಸುಮಾರು ಎರಡು ಮಿಲಿಯನ್ ಪ್ಯಾಲೆಸ್ತೀನಿಯರು ವಾಸಿಸುವ ಗಾಜಾ ಪಟ್ಟಿಯು ಪದೇ ಪದೇ ಇಸ್ರೇಲ್ ದಾಳಿಗೆ ಒಳಗಾಗುತ್ತಿದೆ. 2007 ರಲ್ಲಿ ಹಮಾಸ್ ಸ್ವಾಧೀನಪಡಿಸಿಕೊಂಡ ನಂತರ, ಇಸ್ರೇಲ್ ಗಾಜಾ ಪಟ್ಟಿಯ ಮೇಲೆ ದಿಗ್ಬಂಧನವನ್ನು ವಿಧಿಸಿತು, ಅದು ಇನ್ನೂ ಜಾರಿಯಲ್ಲಿದೆ. ಈ ಅವಧಿಯುದ್ದಕ್ಕೂ, ಇಸ್ರೇಲ್ ಗಾಜಾದಲ್ಲಿನ ಜೀವನದ ಪ್ರತಿಯೊಂದು ಅಂಶವನ್ನು ಹೊರಗಿನಿಂದ ನಿಯಂತ್ರಿಸುವುದನ್ನು ಮುಂದುವರೆಸಿದೆ. ಈ ದುರ್ಬಲಗೊಳಿಸುವ ದಿಗ್ಬಂಧನ ಮತ್ತು ಇಸ್ರೇಲಿ ದಾಳಿಯ ಪರಿಣಾಮವಾಗಿ, ಗಾಜಾ ಬಹಿರಂಗ ಸೆರೆಮನೆಯಾಗಿ ಮಾರ್ಪಟ್ಟಿದೆ. ಇಸ್ರೇಲ್ ಬಯಸಿದಲ್ಲಿ ಮಾತ್ರ ಮಾನವೀಯ ನೆರವು ಕೂಡ ಗಾಜಾವನ್ನು ಪ್ರವೇಶಿಸಲು ಅನುಮತಿ ಸಿಗುತ್ತದೆ. ಗಾಜಾದಲ್ಲಿ ಮಕ್ಕಳು ತೀವ್ರವಾಗಿ ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಸಾಂಕ್ರಾಮಿಕ ಸಮಯದಲ್ಲಿ, ಇಸ್ರೇಲ್ ವೈದ್ಯಕೀಯ ಜನಾಂಗಭೇದ ನೀತಿಯನ್ನು ಅನುಸರಿಸಿತು, ಗಾಜಾದ ಜನರಿಗೆ ಕನಿಷ್ಠ ಅಗತ್ಯ ಔಷಧಿಗಳನ್ನು ಸಹ ನಿರಾಕರಿಸಿತು.

ವರದಿಗಳ ಪ್ರಕಾರ, ವಸತಿ, ಶಿಕ್ಷಣ, ಆರೋಗ್ಯ ಕ್ಷೇತ್ರಗಳು ಮತ್ತು ಇತರ ಕ್ಷೇತ್ರಗಳಲ್ಲಿ ಪ್ಯಾಲೇಸ್ಟಿನಿಯನ್ನರ ವಿರುದ್ಧ ಸಕ್ರಿಯವಾಗಿ ತಾರತಮ್ಯ ಮಾಡುವ ಸುಮಾರು 60 ಕಾನೂನುಗಳಿವೆ.

2020 ರಲ್ಲಿ, ವಿಶ್ವಸಂಸ್ಥೆ ಪ್ಯಾಲೆಸ್ಟೈನ್‌ನಲ್ಲಿ ಇಸ್ರೇಲಿ ಅತಿಕ್ರಮಣವನ್ನು "ಆಧುನಿಕ ಜಗತ್ತಿನಲ್ಲಿ ಅತ್ಯಂತ ದೀರ್ಘ ಯುದ್ಧಕೋರ ಅತಿಕ್ರಮಣ" ಎಂದು ಕರೆದಿದೆ. ಇಸ್ರೇಲ್ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯಿಂದ ಎಲ್ಲರಿಗಿಂತ ಹೆಚ್ಚು ಖಂಡಿಸಲ್ಪಟ್ಟ ದೇಶ ಎಂಬ ಕುಖ್ಯಾತಿಯನ್ನು ಗಳಿಸಿದೆ.

ಬಿಜೆಪಿ ಅಧಿಕಾರಕ್ಕೆ ಬಂದ ನಂತರವೇ ಭಾರತವು ಮೊದಲ ಬಾರಿಗೆ ವಿಶ್ವಸಂಸ್ಥೆಯಲ್ಲಿ ಪ್ಯಾಲೆಸ್ತೀನ್‌ಗೆ ಬೆಂಬಲ ಮತ್ತು ಇಸ್ರೇಲ್ ವಿರುದ್ಧ ಮತದಾನದಿಂದ ದೂರ ಉಳಿದಿದೆ.

ಬಿಜೆಪಿ ಸರ್ಕಾರ ಮತ್ತು ಅದರ ಗುರು ಆರ್‌ಎಸ್‌ಎಸ್, ಆಧುನಿಕ ಜಿಯೋನಿಸಂನೊಂದಿಗೆ ಸ್ವಾಭಾವಿಕ ಸಂಬಂಧವನ್ನು ಹಂಚಿಕೊಳ್ಳುತ್ತದೆ, ಅದರಿಂದಾಗಿ ಇಸ್ರೇಲ್‌ನಲ್ಲಿರುವ ತನ್ನ ಸೈದ್ಧಾಂತಿಕ ಬಾಂಧವರೊಂದಿಗಿನ ಅವರ ಸ್ನೇಹ ಮತ್ತು ಒಡನಾಟದ ಬಗ್ಗೆ ಹೆಮ್ಮೆಪಡುತ್ತದೆ.

ಪ್ಯಾಲೆಸ್ತೀನ್ ಮತ್ತು ಪ್ಯಾಲೆಸ್ತೀನ್ ಜನರೊಂದಿಗೆ ಸೌಹಾರ್ದ ಸಾಮ್ರಾಜ್ಯಶಾಹಿ ಮತ್ತು ಕೋಮುವಾದದ ವಿರುದ್ಧದ ಹೋರಾಟದ ಅವಿಭಾಜ್ಯ ಅಂಗವಾಗಿದೆ ಎಂದಿರುವ ಸಿಪಿಐ(ಎಂ)ನ 23ನೇ ಮಹಾಧಿವೇಶನ ಈ ಸೌಹಾರ್ದವನ್ನು ಪುನರುಚ್ಚರಿಸಿದೆ. ಜನಾಂಗದ್ವೇಷ ನೀತಿಯ ಇಸ್ರೇಲಿ ಪ್ರಭುತ್ವದ ವಿರುದ್ಧ "ಬಹಿಷ್ಕಾರ, ಹಿಂಪಡಿಕೆ, ನಿರ್ಬಂಧಗಳು" (Boycott, Divest, Sanctions-BDS) ಚಳುವಳಿಯನ್ನು ಬಲಪಡಿಸುವ ನಿರ್ಧಾರವನ್ನು ವ್ಯಕ್ತಪಡಿಸುತ್ತ, ಭಾರತ ಸರ್ಕಾರವು ತಕ್ಷಣವೇ ಇಸ್ರೇಲ್‌ನೊಂದಿಗಿನ ಎಲ್ಲಾ ಮಿಲಿಟರಿ ಮತ್ತು ಭದ್ರತಾ ಸಂಬಂಧಗಳನ್ನು ಕಡಿದುಕೊಳ್ಳಬೇಕು ಎಂದು ಅದು ಆಗ್ರಹಿಸಿದೆ. 1967 ರ ಗಡಿಗಳು ಮತ್ತು ಪೂರ್ವ ಜೆರುಸಲೆಮ್ ಅನ್ನು ರಾಜಧಾನಿಯಾಗಿ ಹೊಂದಿರುವ ಪ್ಯಾಲೆಸ್ಟೈನ್ ಪ್ರಭುತ್ವವನ್ನು ತಕ್ಷಣವೇ ಸ್ಥಾಪಿಸಬೇಕೆಂದು ಕೂಡ ಮಹಾಧಿವೇಶನ ಆಗ್ರಹಿಸಿದೆ.



ಮಹಿಳೆಯರ ಮೇಲೆ ಬೆಳೆಯುತ್ತಿರುವ ದಾಳಿಗಳ ವಿರುದ್ಧ ಇನ್ನಷ್ಟು ತ್ವರಿತ, ದೃಢ ಮತ್ತು ಪರಿಣಾಮಕಾರಿ ಮಧ್ಯಪ್ರವೇಶ: ಮಹಾಧಿವೇಶನದ ನಿರ್ಧಾರ

ನಮ್ಮ ದೇಶದಲ್ಲಿ ಮಹಿಳೆಯರ ಮೇಲೆ ಹೆಚ್ಚುತ್ತಿರುವ ದಾಳಿಗಳ ಬಗ್ಗೆ ಸಿಪಿಐ(ಎಂ)ನ 23ನೇ ಮಹಾಧಿವೇಶನವು ಅತೀವ ವೇದನೆಯನ್ನು ವ್ಯಕ್ತಪಡಿಸಿದೆ. ಭೀತಿ ಹುಟ್ಟಿಸುವ ರೀತಿಯಲ್ಲಿ ಮಹಿಳೆಯರು ಮತ್ತು ಯುವತಿಯರು ಹಿಂಸೆ ಮತ್ತು ದೌರ್ಜನ್ಯಕ್ಕೆ ಒಳಗಾಗುತ್ತಲೇ ಇರುವುದು ಆತಂಕಕಾರಿಯಾಗಿದೆ. ಸಾಮೂಹಿಕ ಅತ್ಯಾಚಾರ, ಅಪಹರಣ, ದೈಹಿಕ ಮತ್ತು ಮಾನಸಿಕ ಕಿರುಕುಳ, ವಿವಿಧ ರೀತಿಯ ಚಿತ್ರಹಿಂಸೆ, ಕೊಲೆ ಬೆದರಿಕೆಗಳು ಮತ್ತು ಅತ್ಯಾಚಾರಗಳು ಅಲ್ಲೋ–ಇಲ್ಲೋ ನಡೆಯುವ ಬಿಡಿ ಘಟನೆಗಳಲ್ಲ. ಬದಲಿಗೆ ಅವು ಒಟ್ಟಾರೆಯಾಗಿ ವ್ಯವಸ್ಥೆಯ ಸಮಸ್ಯೆಯ ಒಂದು ಭಾಗ ಎಂದು ಈ ಕುರಿತು ಮಹಾಧಿವೇಶನ ಅಂಗೀಕರಿಸಿರುವ ನಿರ್ಣಯ ಹೇಳಿದೆ.

ಇಂತಹ ಘಟನೆಗಳನ್ನು ಸಂವಿಧಾನಬಾಹಿರ ಮತ್ತು ಸ್ವಯಂ–ನಿಯೋಜಿತ ಕಾವಲುಕೋರ ಗುಂಪುಗಳಿಗೆ ಲಂಗುಲಗಾಮಿಲ್ಲದೆ ವರ್ತಿಸಲು ಮುಕ್ತ ಅವಕಾಶವಿರುವ, ಜನರನ್ನು ಕೊಂದು, ಥಳಿಸಿ, ಹತ್ಯೆಮಾಡಿ ಮಾಡಿ ಮತ್ತು ಲೂಟಿ ಮಾಡಿದ ನಂತರವೂ ಅಡ್ಡಾಡಿಕೊಂಡಿರಲು ಸಾಧ್ಯವಾಗಿರುವ ಸಂದರ್ಭದಲ್ಲಿ ನೋಡಬೇಕು. ಅವರು ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡಿದ್ದಾರೆ ಮತ್ತು ತಮ್ಮ ಆರ್‌ಎಸ್‌ಎಸ್–ಬಿಜೆಪಿ ರಾಜಕೀಯ ಯಜಮಾನರಿಂದ ಮೌನ ಬೆಂಬಲ ಮತ್ತು ಒಪ್ಪಿಗೆಯನ್ನು ಪಡೆದಿದ್ದಾರೆ. ಮಹಿಳೆಯರಿಗೆ "ನಿಜವಾದ ಸ್ಥಾನ"ವನ್ನು ತೋರಿಸಲು ಈ ರಾಜಕೀಯ ಗುಂಪುಗಳು ಇತ್ತೀಚಿನ ದಿನಗಳಲ್ಲಿ ಸಂಘಟಿತ ಪ್ರಯತ್ನಗಳನ್ನು ಮಾಡುತ್ತಿವೆ.

ಅತ್ಯಾಚಾರದ ಮೂರನೇ ಒಂದು ಭಾಗಕ್ಕಿಂತ ಹೆಚ್ಚು ಪ್ರಕರಣಗಳು ಹೆಣ್ಣು ಮಕ್ಕಳ ವಿರುದ್ಧದವು, ಇದು ದೇಶದಾದ್ಯಂತ ಕ್ರೋಧ, ಹೇವರಿಕೆ ಮತ್ತು ದುಃಖದ ಸ್ಫೋಟಕ್ಕೆ ಕಾರಣವಾಯಿತು. 8 ತಿಂಗಳ ಹೆಣ್ಣು ಮಕ್ಕಳು ಕೂಡ ಈ ಹುಚ್ಚು ದೌರ್ಜನ್ಯಕ್ಕೆ ಗುರಿಯಾಗಿದ್ದಾರೆ. ಪೊಲೀಸ್ ದಾಖಲೆಗಳ ಪ್ರಕಾರ ದೆಹಲಿಯಲ್ಲಿ ಪ್ರತಿ ತಿಂಗಳು ಏಳು ಪೋಕ್ಸೊ ಪ್ರಕರಣಗಳು ದಾಖಲಾಗುತ್ತವೆ.

ಥಾಂಪ್ಸನ್ ರಾಯಿಟರ್ಸ್ ಫೌಂಡೇಶನ್ ವರದಿಯು ಲೈಂಗಿಕ ಗುಲಾಮಗಿರಿ ಮತ್ತು ಕೌಟುಂಬಿಕ ದಾಸ್ಯವನ್ನು ಒಳಗೊಂಡಂತೆ ಮಾನವ ಕಳ್ಳಸಾಗಣೆಯ ಮತ್ತು ಬಲವಂತದ ಮದುವೆ, ಕಲ್ಲೇಟುಗಳು ಹಾಗೂ ಹೆಣ್ಣು ಶಿಶುಹತ್ಯೆಯಂತಹ ಸಾಂಪ್ರದಾಯಿಕ ಆಚರಣೆಯ ವಿಷಯದಲ್ಲಿ, ಭಾರತ ಮಹಿಳೆಯರಿಗೆ ಅತ್ಯಂತ ಅಪಾಯಕಾರಿ ದೇಶವೆಂದು ಪರಿಗಣಿಸಿದೆ. ರಾಷ್ಟ್ರೀಯ ಮಹಿಳಾ ಆಯೋಗವು ಇತ್ತೀಚೆಗೆ ಬಿಡುಗಡೆ ಮಾಡಿದ ಮಾಹಿತಿ), 2021 ರ ಮೊದಲ ಎಂಟು ತಿಂಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯವು 2020 ಕ್ಕಿಂತ 46 ಪ್ರತಿಶತದಷ್ಟು ಹೆಚ್ಚಾಗಿದೆ ಎಂದು ತೋರಿಸುತ್ತದೆ. ಸುಮಾರು 35 ಪ್ರತಿಶತ ಪ್ರಕರಣಗಳು ಕೌಟುಂಬಿಕ ಹಿಂಸೆ ಅಥವಾ ಪತಿ ಮತ್ತು ಸಂಬಂಧಿಕರ ಕ್ರೌರ್ಯಕ್ಕೆ ಸಂಬಂಧಿಸಿವೆ.

ನಮ್ಮ ದೇಶದಲ್ಲಿ ಪ್ರತಿದಿನ 10 ದಲಿತ ಮಹಿಳೆಯರು ಅತ್ಯಾಚಾರಕ್ಕೊಳಗಾಗುತ್ತಿದ್ದಾರೆ ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ–ಎನ್‌ಸಿಆರ್‌ಬಿ(2019) ವರದಿ ಮಾಡಿದೆ. ನಿಜವಾದ ಅಂಕಿಅಂಶಗಳು ಇದಕ್ಕಿಂತ ಹೆಚ್ಚು. ಸೆಪ್ಟೆಂಬರ್ 29, 2020 ರಂದು ಬಿಡುಗಡೆಯಾದ ಸರ್ಕಾರಿ ಅಂಕಿಅಂಶಗಳ ಪ್ರಕಾರ, ಭಾರತದಲ್ಲಿ 2019 ರಲ್ಲಿ ಪ್ರತಿದಿನ ಸರಾಸರಿ 87 ಅತ್ಯಾಚಾರ ಪ್ರಕರಣಗಳನ್ನು ಮತ್ತು ವರ್ಷದಲ್ಲಿ ಒಟ್ಟಾರೆ 4,05,861 ಮಹಿಳೆಯರ ವಿರುದ್ಧದ ಅಪರಾಧ ಪ್ರಕರಣಗಳು ದಾಖಲಾಗಿವೆ ಅಂದರೆ 2018 ರಿಂದ ಶೇಕಡಾ 7 ಕ್ಕಿಂತ ಹೆಚ್ಚಾಗಿದೆ. ಎನ್‌ಸಿಆರ್‌ಬಿ ಮಾಹಿತಿ ಭಾರತದಲ್ಲಿ ಪ್ರತಿ 16 ನಿಮಿಷಕ್ಕೆ ಒಬ್ಬ ಮಹಿಳೆ ಅತ್ಯಾಚಾರಕ್ಕೊಳಗಾಗುತ್ತಾಳೆ ಎಂದು ತೋರಿಸುತ್ತದೆ.

ಬಿಜೆಪಿ ಶಾಸಕನೊಬ್ಬ 17 ವರ್ಷದ ದಲಿತ ಬಾಲಕಿಯ ಮೇಲೆ ನಡೆಸಿದ ಉನ್ನಾವ್ ಅತ್ಯಾಚಾರ, ಆಕೆಯ ತಂದೆಯ ಹತ್ಯೆಗಾಗಿ ಉತ್ತರಪ್ರದೇಶ ಪೊಲೀಸರು ಮತ್ತು ಶಾಸಕನ ಸಹೋದರನನ್ನು ತಪ್ಪಿತಸ್ಥರೆಂದು ಪರಿಗಣಿಸಿ ಜೈಲಿಗೆ ಕಳುಹಿಸಿರುವುದು ಲಕ್ಷಾಂತರ ಜನರ ಆತ್ಮಸಾಕ್ಷಿಯನ್ನು ಕಲಕಿತು. ಅಲಹಾಬಾದ್ ಹೈಕೋರ್ಟ್ ಆಡಳಿತದ ಬಗ್ಗೆ ಕಟುವಾದ ಟೀಕೆಗಳನ್ನು ಮಾಡಿದ ನಂತರ ಮತ್ತು ಶಾಸಕರ ಬಂಧನಕ್ಕೆ ಆದೇಶಿಸಿದ ನಂತರವೇ ಆತನನ್ನು ಕಸ್ಟಡಿಗೆ ತೆಗೆದುಕೊಳ್ಳಲಾಗಿದೆ. ಅದೇ ರೀತಿ ಉತ್ತರ ಪ್ರದೇಶದ ಹಾತ್ರಸ್‌ನಲ್ಲಿ 19 ವರ್ಷದ ದಲಿತ ಮಹಿಳೆಯ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಮತ್ತು ಹತ್ಯೆ ಆಘಾತಕಾರಿಯಾಗಿದೆ.

ಮಹಿಳೆಯರ ಸ್ವಯಮಾಯ್ಕೆಯ ಹಕ್ಕನ್ನು ನಿರಾಕರಿಸುವುದು, ಹೆಚ್ಚುತ್ತಿರುವ ಜಾತಿ ದುರಹಂಕಾರ ಮತ್ತು ಅಲ್ಪಸಂಖ್ಯಾತರ ಮೇಲಿನ ದ್ವೇಷದ ರಾಜಕಾರಣವು 'ಮರ್ಯಾದೆ'ಯ ಹೆಸರಿನಲ್ಲಿ ಕೊಲೆಗಳ ಹೆಚ್ಚಳಕ್ಕೆ ಕಾರಣವಾಗಿದೆ. ಜಾತಿ ಪಂಚಾಯತಿಗಳಿಂದ ಉತ್ತೇಜಿತವಾದ ಮೇಲ್ಜಾತಿಗಳಿಂದ ಕ್ರೂರ ಹತ್ಯೆಗಳು ವಿವಿಧ ರಾಜ್ಯಗಳಲ್ಲಿ ನಡೆದಿವೆ.

ವರದಕ್ಷಿಣೆ ಕಿರುಕುಳ ಮತ್ತು ಸಾವು ಯಾವಾಗಲೂ ನಮ್ಮ ಸಮಾಜದ ಶಾಪವಾಗಿದೆ. ಮಹಿಳೆಯರ ದೊಡ್ಡ ಹೋರಾಟಗಳ ನಂತರ, ಸೆಕ್ಷನ್ 498ಎ ಅನ್ನು ಸೇರಿಸಲಾಯಿತು. ಬಿಜೆಪಿ ಈ ಕಾನೂನನ್ನು ಎಂದಿಗೂ ಒಪ್ಪಿಕೊಂಡಿರಲಿಲ್ಲ, ಕುಟುಂಬವು ಪವಿತ್ರವಾಗಿದೆ, ಈ ಸೆಕ್ಷನ್ ಅದನ್ನು

ಪುಟ 14 ಕ್ಕೆ



ಪೆಟ್ರೋಲ್ ಬೆಲೆ ಏರಿಕೆ ಅನಿವಾರ್ಯವೇನಲ್ಲ

ಪೆಟ್ರೋ ಉತ್ಪನ್ನಗಳ ಚಿಲ್ಲರೆ ಬೆಲೆಗಳ ಏರಿಕೆಯು ಕಚ್ಚಾ ತೈಲದ ಬೆಲೆ ಏರಿಕೆಯ ಅನಿವಾರ್ಯ ಪರಿಣಾಮವಲ್ಲ. ಪೆಟ್ರೋ ಉತ್ಪನ್ನಗಳ ಚಿಲ್ಲರೆ ಬೆಲೆಗಳನ್ನು ಏರಿಸುವ ಕ್ರಮವೇ ಒಂದು ವಿತ್ತೀಯ ಕಾರ್ಯತಂತ್ರ. ಈ ಕಾರ್ಯತಂತ್ರದಿಂದಾಗಿಯೇ ಕಚ್ಚಾ ತೈಲದ ಅಂತಾರಾಷ್ಟ್ರೀಯ ಬೆಲೆಗಳು ಏರಿದ ಕೂಡಲೇ ಅವುಗಳ ಚಿಲ್ಲರೆ ಬೆಲೆಗಳೂ ಏರುತ್ತವೆ. ಆದರೆ ಈ ವಿತ್ತೀಯ ಕಾರ್ಯತಂತ್ರ ಅನಿವಾರ್ಯವೇನಲ್ಲ. ಮತ್ತು, ಈ ಕಾರ್ಯತಂತ್ರವು ಉದ್ದೇಶಪೂರ್ವಕವಾಗಿಯೇ ಆಯ್ಕೆ ಮಾಡಿಕೊಂಡದ್ದು ಎಂಬ ಅಂಶವನ್ನು ಜನರಿಂದ ಮರೆಮಾಚಲಾಗಿದೆ. ದುಡಿಯುವ ಜನರನ್ನು ನೋಯಿಸುವುದೇ ಈ ಇಡೀ ಕಾರ್ಯತಂತ್ರದ ಮೂಲೋದ್ದೇಶ. ಇದಕ್ಕೇ ಕಟ್ಟುಬಿದ್ದರೆ, ದೇಶವು ತುಂಬಾ ಪರಿತಪಿಸುವ ಸಮಯದತ್ತ ಸಾಗಲಿದೆ.

ಪ್ರೊ. ಪ್ರಭಾತ್ ಪಟ್ನಾಯಕ್   **ಅನು: ಕೆ.ಎಂ. ನಾಗರಾಜ್**

ಕಳೆದ ಹದಿನಾರು ದಿನಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಹದಿನಾಲ್ಕು ಬಾರಿ ಹೆಚ್ಚಿಸಲಾಗಿದೆ. ಲೀಟರ್‌ಗೆ 80 ಪೈಸೆಗಿಂತ ಕಡಿಮೆ ಇಲ್ಲದಂತೆ ಏರಿಕೆ ಮಾಡಲಾಗಿದೆ ಮತ್ತು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳಲ್ಲಿ ಪ್ರತಿ ಲೀಟರ್‌ಗೆ ಕನಿಷ್ಟ ಹತ್ತು ರೂಪಾಯಿ ಒಟ್ಟು ಹೆಚ್ಚಳವಾಗಿದೆ.

ಈ ಏರಿಕೆಗಳಿಗೆ ಸರ್ಕಾರವು ಕೊಡುವ ವಿವರಣೆಯೆಂದರೆ, ಅಂತಾರಾಷ್ಟ್ರೀಯ ತೈಲ ಬೆಲೆಗಳು ಒಂದೇ ಸಮನೇ ಏರುತ್ತಿದ್ದರೂ ಸಹ, ತೈಲ ಕಂಪೆನಿಗಳು ಈ ಏರಿಕೆಯ ಆಘಾತವನ್ನು ಸುಮಾರು ದಿನಗಳ ಕಾಲ ತಡೆದುಕೊಂಡವು (ಐದು ರಾಜ್ಯಗಳಲ್ಲಿ ಚುನಾವಣೆಗಳು ನಡೆಯುತ್ತಿದ್ದ ಕಾರಣದಿಂದಾಗಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಸ್ಥಗಿತಗೊಳಿಸಲಾಗಿತ್ತು). ಈಗ, ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಏರಿಸುವಂತೆ ಸರ್ಕಾರವು ತೈಲ ಕಂಪೆನಿಗಳಿಗೆ ಅನುಮತಿ ಕೊಟ್ಟಿರುವುದರಿಂದ, ಈ ತೈಲ ಕಂಪೆನಿಗಳು ತಾವು ಈ ವರೆಗೆ ತಡೆ ಹಿಡಿದಿದ್ದ ಏರಿಕೆಯನ್ನು ಈಗ ಒಂದೇ ಉಸಿರಿನಲ್ಲಿ ವಸೂಲಿ ಮಾಡುತ್ತಿವೆ. ಸಲೀಸಾಗಿ ಬರುವ ತೆರಿಗೆ ಆದಾಯದಲ್ಲಿ ಕೊಂಚವೂ ಕೊರೆಯಾಗಬಾರದು ಎಂಬ ಧೋರಣೆಯ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್‌ಗಳ ಮೇಲಿನ ತೆರಿಗೆಗಳನ್ನು ಇಳಿಕೆ ಮಾಡಲೊಪ್ಪದ ಕಾರಣದಿಂದಾಗಿ ತೈಲ ಕಂಪೆನಿಗಳು ಬೆಲೆ ಏರಿಕೆ ಮಾಡಿವೆ.

ತೈಲ ಕಂಪೆನಿಗಳು ಕಳೆದ ವರ್ಷ ನವೆಂಬರ್ 4ರಂದು ಕೊನೆಯ ಬಾರಿಗೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ಏರಿಕೆ ಮಾಡಿದ್ದವು. ಅದರ ನಂತರ 137 ದಿನಗಳ ಕಾಲ ಬೆಲೆ–ಏರಿಕೆಯಾಗಿಲ್ಲ ಎಂದು ವಾದಿಸಲಾಗಿದೆ. ಆದರೆ, ಈ ಅವಧಿಯಲ್ಲಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪ್ರತಿ ಬ್ಯಾರೆಲ್ ಕಚ್ಚಾ ತೈಲದ ಬೆಲೆ 82 ಡಾಲರ್‌ಗಳಿಂದ 117 ಡಾಲರ್‌ಗಳಿಗೆ ಏರಿಕೆಯಾಗಿದೆ. ಹಾಗಾಗಿ, ಸಾರ್ವಜನಿಕ ವಲಯದ ತೈಲ ಕಂಪನಿಗಳಿಗೆ 2.25 ಬಿಲಿಯನ್ ಡಾಲರ್ ಅಥವಾ 19,000 ಕೋಟಿ ರೂಗಳ ಆದಾಯ ನಷ್ಟವಾಗಿದೆ. ಈ ನಷ್ಟವನ್ನು ಸರಿದೂಗಿಸಿಕೊಳ್ಳಲು ತೈಲ ಕಂಪೆನಿಗಳು ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ಏರಿಸಿವೆ. ವಿಶ್ವ ತೈಲ ಬೆಲೆಗಳು ಒಂದು ವೇಳೆ ಪ್ರತಿ ಬ್ಯಾರೆಲ್‌ಗೆ 100 ಡಾಲರ್ ಮಟ್ಟದಲ್ಲಿ ಸ್ಥಿರಗೊಂಡರೆ, ಪೆಟ್ರೋಲಿಯಂ ಉತ್ಪನ್ನಗಳ ಚಿಲ್ಲರೆ ಬೆಲೆಯನ್ನು ಪ್ರತಿ ಲೀಟರ್‌ಗೆ 9 ರಿಂದ 12 ರೂ.ಗಳ ವರೆಗೆ ಏರಿಸಬೇಕಾಗುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆ ಆದಾಯದಲ್ಲಿ ಸ್ವಲ್ಪವನ್ನೂ ಕಳೆದುಕೊಳ್ಳಲು ತಯಾರಿಲ್ಲದಿದ್ದರೆ, ಪೆಟ್ರೋಲ್ ಮತ್ತು ಡೀಸೆಲ್‌ಗಳ ಬೆಲೆಗಳನ್ನು ಕನಿಷ್ಟ ಇನ್ನೂ ಏಳು ರೂಗಳಷ್ಟು ಏರಿಕೆ ಮಾಡಬೇಕಾಗುತ್ತದೆ.

ಈ ವಾದವನ್ನು ಮಾಡುವವರು ಒಂದು ಮುಖ್ಯವಾದ ಅಂಶವನ್ನೇ ಅರ್ಥಮಾಡಿಕೊಂಡಿಲ್ಲ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ತೈಲ ಕಂಪನಿಗಳು ಹೆಚ್ಚಿಸುತ್ತಿದ್ದಂತೆಯೇ, ಅವುಗಳ ಚಿಲ್ಲರೆ ಬೆಲೆಗಳು ಏರುವುದು (ಹಣದುಬ್ಬರ) ಮಾತ್ರವಲ್ಲದೆ, ಈ ಏರಿಕೆಯು ಉಂಟುಮಾಡುವ ವೆಚ್ಚ–ತಳ್ಳುವ ಪರಿಣಾಮಗಳಿಂದಾಗಿ ಇಡೀ ಅರ್ಥವ್ಯವಸ್ಥೆಯಲ್ಲಿ ಹಣದುಬ್ಬರ ಉಂಟಾಗುತ್ತದೆ. ಅಷ್ಟೇ ಅಲ್ಲ, ಹಣ ಲೆಕ್ಕದ ದೃಷ್ಟಿಯಲ್ಲಿ ತನ್ನ ನಿಜ ವೆಚ್ಚಗಳ ಗುರಿಗಳನ್ನು ಸಾಧಿಸುವುದಕ್ಕಾಗಿ ಸರ್ಕಾರವು ತನ್ನ ಆದಾಯವನ್ನೂ ಸಹ ಹೆಚ್ಚಿಸಿಕೊಳ್ಳಬೇಕಾಗುತ್ತದೆ. ಅಂದರೆ, ತನ್ನ ಅದೇ ನಿಜ ವೆಚ್ಚಗಳ ಗುರಿಗಳನ್ನು ಸಾಧಿಸುವ ಉದ್ದೇಶಕ್ಕಾಗಿ ತನ್ನ ಆದಾಯವನ್ನು ಹೆಚ್ಚಿಸಿಕೊಳ್ಳಲು ಸರ್ಕಾರವೂ ಸಹ ಪೆಟ್ರೋಲ್ ಮತ್ತು ಡೀಸೆಲ್‌ಗಳ ಮೇಲಿನ ತೆರಿಗೆಗಳನ್ನು ಹೆಚ್ಚಿಸಬೇಕಾಗುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಪೆಟ್ರೋ–ಉತ್ಪನ್ನಗಳ ಬೆಲೆಗಳನ್ನು ಹೆಚ್ಚಿಸುವ ಪ್ರಕ್ರಿಯೆಯು ಕೇವಲ ತೈಲ ಕಂಪನಿಗಳಿಗೆ ಮಾತ್ರ ಸೀಮಿತವಾಗುವುದಿಲ್ಲ. ಈ ಏರಿಕೆಯು ಒಂದು ಗುಣಾಕಾರಾತ್ಮಕ ಪರಿಣಾಮವನ್ನು ಹೊಂದಿದೆ: ಪೆಟ್ರೋಲ್ ಮತ್ತು ಡೀಸೆಲ್‌ಗಳ ಚಿಲ್ಲರೆ ಬೆಲೆ ಏರಿಕೆಯ ಭಾರವನ್ನು ಹೊರುವ ಪ್ರತಿ ಘಟಕವೂ ಅದನ್ನು ಅನಿವಾರ್ಯವಾಗಿ ತಮ್ಮ ಉತ್ಪನ್ನ/ಸೇವೆಗಳನ್ನು ಬಳಸುವವರಿಗೆ ದಾಟಿಸಬೇಕಾಗುತ್ತದೆ. ಹಾಗಾಗಿ, ಹಣದುಬ್ಬರದ ಹೆಚ್ಚಳವು ಇನ್ನೂ ದೊಡ್ಡದಾಗುತ್ತದೆ.

ಇಂಥಹ ಒಂದು ಬೆಲೆ ಏರಿಕೆಯ ಪರಿಸ್ಥಿತಿಯಲ್ಲಿ ಅದನ್ನು ಸರಿದೂಗಿಸುವಷ್ಟು ಮಟ್ಟಿಗೆ ಜನರ ಹಣ ಆದಾಯವು ಏರದಿದ್ದರೆ ಮಾತ್ರ ಬೆಲೆಗಳು ಅದೇ ಮಟ್ಟದಲ್ಲಿ ಉಳಿಯುತ್ತವೆ. ಸರಕು–ಸೇವೆಗಳ ಬೆಲೆ ಏರಿಕೆಯನ್ನು ಸರಿದೂಗಿಸುವಷ್ಟು ಆದಾಯ ದೊರಕದ ಜನರು ಯಾರು ಎಂದರೆ, ಅವರು ದುಡಿಯುವ ಜನರಾಗಿರಲು ಮಾತ್ರ ಸಾಧ್ಯ. ಈ ಅಂಶವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಪೆಟ್ರೋ–ಉತ್ಪನ್ನಗಳ ಮೇಲಿನ ತೆರಿಗೆಗಳ ಮೂಲಕ ಸಂಪನ್ಮೂಲಗಳನ್ನು ಸಂಗ್ರಹಿಸುವ ವಿತ್ತೀಯ ಕಾರ್ಯತಂತ್ರವು, ದುಡಿಯುವ ಜನರನ್ನು ತೊಂದರೆಗಳಿಗೆ ಈಡು ಮಾಡುತ್ತದೆ ಎಂಬುದನ್ನು ಸರ್ಕಾರವು ಗ್ರಹಿಸಿರುತ್ತದೆ. ದುಡಿಯುವ ಜನರಿಗೆ ನೋವುಂಟಾಗಬಾರದು ಮತ್ತು ಅವರ ಹಣ ಆದಾಯವೂ ಹಣದುಬ್ಬರ ಏರಿದ ಮಟ್ಟದಲ್ಲೇ ಏರಿದರೆ, ಆಗ ಹಣದುಬ್ಬರ ಎಂಬುದಕ್ಕೆ ಕೊನೆಯೇ ಇರುವುದಿಲ್ಲ. ಆದ್ದರಿಂದ, ದುಡಿಯುವ ಜನರನ್ನು ನೋಯಿಸುವುದೇ ಈ ಇಡೀ ಕಾರ್ಯತಂತ್ರದ ಮೂಲೋದ್ದೇಶ. ಇಂತಹ ಒಂದು ವಿತ್ತೀಯ ಕಾರ್ಯತಂತ್ರವನ್ನು ಅಳವಡಿಸಿಕೊಳ್ಳುವುದು ಮತ್ತು ಅದೇ ಸಮಯದಲ್ಲಿ ದುಡಿಯುವ ಜನರಿಗಾಗಿ ಕಣ್ಣೀರು ಸುರಿಸುವುದು ಬೂಟಾಟಿಕೆಯ ಪರಾಕಾಷ್ಠೆಯಾಗುತ್ತದೆ.


ಇಲ್ಲಿ ನಾವು ಗಮನಿಸಬೇಕಾದ ಮುಖ್ಯ ಅಂಶ ಯಾವುದು ಎಂದರೆ, ಕಚ್ಚಾ ತೈಲದ ಬೆಲೆಗಳು ಏರಿದ ಕೂಡಲೇ ಅದರ ಉತ್ಪನ್ನಗಳ ಚಿಲ್ಲರೆ ಬೆಲೆಗಳು ಅಪ್ರಜ್ಞಾಪೂರ್ವಕವಾಗಿ ಅಥವಾ ಯಾಂತ್ರಿಕವಾಗಿ ಏರುತ್ತವೆ ಎಂಬುದಲ್ಲ. ಇದೊಂದು ಸ್ವಯಂಚಾಲಿತ ವಿದ್ಯಮಾನವೇನಲ್ಲ. ಒಂದು ಇನ್ನೊಂದರ ಅನಿವಾರ್ಯ ಪರಿಣಾಮವೂ ಅಲ್ಲ. ಅಂದರೆ, ಚಿಲ್ಲರೆ ಬೆಲೆಗಳ ಏರಿಕೆಯು ಕಚ್ಚಾ ತೈಲದ ಬೆಲೆ ಏರಿಕೆಯಿಂದಾದ ಅನಿವಾರ್ಯ ಪರಿಣಾಮವಲ್ಲ. ಪೆಟ್ರೋ ಉತ್ಪನ್ನಗಳ ಚಿಲ್ಲರೆ ಬೆಲೆಗಳನ್ನು ಏರಿಸುವ ಕ್ರಮವೇ ಒಂದು ವಿತ್ತೀಯ ಕಾರ್ಯತಂತ್ರ. ಈ ಕಾರ್ಯತಂತ್ರದಿಂದಾಗಿಯೇ ಕಚ್ಚಾ ತೈಲದ ಅಂತಾರಾಷ್ಟ್ರೀಯ ಬೆಲೆಗಳು ಏರಿದ ಕೂಡಲೇ ಅವುಗಳ ಚಿಲ್ಲರೆ ಬೆಲೆಗಳೂ ಏರುತ್ತವೆ. ಈ ವಿತ್ತೀಯ ಕಾರ್ಯತಂತ್ರವು ಬದಲಾಗದಿದ್ದರೆ ಮಾತ್ರ ಚಿಲ್ಲರೆ ಬೆಲೆಗಳು ಏರಬೇಕಾಗುತ್ತದೆ. ಆದ್ದರಿಂದ, ಪೆಟ್ರೋ–ಉತ್ಪನ್ನಗಳ ಚಿಲ್ಲರೆ ಬೆಲೆಗಳ ಏರಿಕೆಯ ಅನಿವಾರ್ಯತೆಯ ಬಗ್ಗೆ ಮಾತನಾಡುವುದು, ಈ ವಿತ್ತೀಯ ಕಾರ್ಯತಂತ್ರವೇ ಒಂದು ಅನಿವಾರ್ಯತೆ ಎಂದು ಭಾವಿಸಿದಂತಾಗುತ್ತದೆ. ಮತ್ತು, ಈ ಕಾರ್ಯತಂತ್ರವು ಒಂದು ಅಪ್ರಜ್ಞಾಪೂರ್ವಕ ಆಯ್ಕೆಯಲ್ಲ, ಉದ್ದೇಶಪೂರ್ವಕವಾಗಿಯೇ ಆಯ್ಕೆ ಮಾಡಿಕೊಂಡದ್ದು ಎಂಬ ಅಂಶವನ್ನು ಜನರಿಂದ ಮರೆಮಾಚಲಾಗಿದೆ. ವಾಸ್ತವಿಕವಾಗಿ ಹೇಳುವುದಾದರೆ, ಈಗ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಧಿಸುವ ತೆರಿಗೆಗಳು ಪೆಟ್ರೋಲ್ ಮತ್ತು ಡೀಸೆಲ್‌ಗಳ ಚಿಲ್ಲರೆ ಬೆಲೆಯಲ್ಲಿ ಅರ್ಧಕ್ಕಿಂತಲೂ ಹೆಚ್ಚಿನ ಪಾಲನ್ನು ಹೊಂದಿವೆ.

ತೆರಿಗೆಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ರಾಜ್ಯ ಸರ್ಕಾರಗಳಿಗೆ ಒದಗಿರುವ ಅಸಹಾಯಕ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬಹುದು: ತಮ್ಮ ವಿವೇಚನೆಗೆ ಒಳಪಟ್ಟ ಕೆಲವೇ ಕೆಲವು ಆದಾಯದ ಮೂಲಗಳನ್ನು ಅವರು ಹೊಂದಿದ್ದಾರೆ. ಜಿಎಸ್‌ಟಿಯನ್ನು ಜಾರಿಗೊಳಿಸಿದ ನಂತರ, ರಾಜ್ಯ ಸರ್ಕಾರಗಳ ವಿವೇಚನಾ ವ್ಯಾಪ್ತಿಯು ತೀವ್ರವಾಗಿ ಕುಗ್ಗಿದೆ. ತೆರಿಗೆ ದರಗಳನ್ನು ಜಿಎಸ್‌ಟಿ ಕೌನ್ಸಿಲ್ ನಿಗದಿಪಡಿಸದ ಮತ್ತು ರಾಜ್ಯ ಸರ್ಕಾರಗಳು ನಿಗದಿಪಡಿಸಬಹುದಾದ ಮೂರು ಸರಕುಗಳಲ್ಲಿ ಪೆಟ್ರೋ ಉತ್ಪನ್ನಗಳು ಒಂದಾಗಿದೆ. ಇಂತಹ ಒಂದು ಸಂವೃದ್ಧ ಮೂಲವನ್ನು ಬಿಟ್ಟರೆ ಅವರಿಗೆ ಬೇರೆ ಆಯ್ಕೆಗಳಿಲ್ಲ. ನೇರ ತೆರಿಗೆಗಳನ್ನು ವಿಧಿಸುವ ಅಧಿಕಾರವಿಲ್ಲದುದರಿಂದ, ರಾಜ್ಯ ಸರ್ಕಾರಗಳು ಪೆಟ್ರೋ–ಉತ್ಪನ್ನಗಳ ಮೇಲೆ ತೆರಿಗೆ ವಿಧಿಸುವ ಅನಿವಾರ್ಯತೆಯನ್ನು ಅರ್ಥಮಾಡಿಕೊಳ್ಳಬಹುದು.

ಆದರೆ, ಇತರ ವಿಧಾನಗಳ ಮೂಲಕ ಸಂಪನ್ಮೂಲಗಳನ್ನು ಸಂಗ್ರಹಿಸುವ ವಿಪುಲ ಅವಕಾಶಗಳನ್ನು ಹೊಂದಿರುವ ಕೇಂದ್ರ ಸರ್ಕಾರವು ಅವುಗಳನ್ನು ಉದ್ದೇಶಪೂರ್ವಕವಾಗಿಯೇ ಬಳಸುತ್ತಿಲ್ಲ. ಶ್ರೀಮಂತರ ಮೇಲೆ ನೇರ ತೆರಿಗೆಗಳನ್ನು ವಿಧಿಸುವುದರ ಬದಲು ಪೆಟ್ರೋ–ಉತ್ಪನ್ನಗಳ ಮೇಲೆ ತೆರಿಗೆ ವಿಧಿಸುವುದೇ ಕೇಂದ್ರ ಸರ್ಕಾರ ಮಾಡಿಕೊಂಡಿರುವ ಆಯ್ಕೆ. ಈ ಆಯ್ಕೆಯು ವರ್ಗ ಪಕ್ಷಪಾತ. ಕೇಂದ್ರದ ಈ ಆಯ್ಕೆಯು ಅನಿವಾರ್ಯವಾದುದೇನೂ ಅಲ್ಲ.

ಪೆಟ್ರೋ ಉತ್ಪನ್ನಗಳನ್ನು ಪ್ರಧಾನವಾಗಿ ಶ್ರೀಮಂತರೇ ಬಳಸುತ್ತಾರೆ. ಆದ್ದರಿಂದ, ಅವುಗಳ ಮೇಲೆ ತೆರಿಗೆ ವಿಧಿಸುವ ಕ್ರಮವು ಬಡವರ ಮೇಲೆ ಗಂಭೀರ ಪರಿಣಾಮ ಬೀರುವುದಿಲ್ಲ ಎಂದು ಭಾವಿಸುವುದು ಕನಿಷ್ಠ ಮೂರು ಕಾರಣಗಳಿಂದಾಗಿ ತಪ್ಪಾಗುತ್ತದೆ. ಮೊದಲನೆಯದು, ಪೆಟ್ರೋ–ಉತ್ಪನ್ನಗಳ ಪೈಕಿ ದುಡಿಯುವ ಜನರು ನೇರವಾಗಿ ಬಳಸುವ ಅನೇಕ ಉತ್ಪನ್ನಗಳಿವೆ. ಒಂದು ಸ್ಪಷ್ಟ ಉದಾಹರಣೆಯೆಂದರೆ ಅಡುಗೆ ಅನಿಲ. ಎರಡನೆಯದು, ಪೆಟ್ರೋ ಉತ್ಪನ್ನಗಳ ಬೆಲೆ ಏರಿಕೆಯು ಸಾಗಣೆ ವೆಚ್ಚಗಳನ್ನು ಹೆಚ್ಚಿಸುತ್ತದೆ. ಅದರಿಂದಾಗಿ, ಬಡವರ ಬಳಕೆಯ ಬುಟ್ಟಿಗೆ ಬಲವಾಗಿ ಪ್ರವೇಶಿಸುವ ಆಹಾರ ಧಾನ್ಯಗಳಂತಹ ಮೂಲಭೂತ ಸರಕುಗಳೂ ಸೇರಿದಂತೆ ಎಲ್ಲಾ ಸರಕು ಸಾಮಗ್ರಿಗಳ ಬೆಲೆಗಳೂ ಏರುತ್ತವೆ. ಮೂರನೆಯದು, ದುಡಿಯುವ ಜನರು ಬಳಸುವ ಸರಕುಗಳ ಉತ್ಪಾದನೆಯಲ್ಲಿ ಅಥವಾ ಸಾಗಾಣಿಕೆಯಲ್ಲಿ ಪೆಟ್ರೋ–ಉತ್ಪನ್ನಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರವೇಶಿಸುವುದಿಲ್ಲ ಎಂದುಕೊಂಡರೂ, ಮತ್ತು, ಬಂಡವಾಳಶಾಹಿಗಳಿಗೇ ಅಗತ್ಯವಾದ ಸರಕುಗಳ ಉತ್ಪಾದನೆಯಲ್ಲಿ ಮಾತ್ರ ಅವು ಪ್ರವೇಶಿಸಿದರೂ, ಈ ಸರಕುಗಳ ಮೇಲೆ ತಮ್ಮ ನಿಜ ಅಧಿಕಾರವನ್ನು ಉಳಿಸಿಕೊಳ್ಳಲು ಮತ್ತು ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳಲು ದುಡಿಯುವ ಜನರು ಬಳಸುವ ಸರಕುಗಳ ಬೆಲೆಗಳನ್ನು ಅವರು

ಪುಟ 14 ಕ್ಕೆ



ವ್ಯಂಗ್ಯಚಿತ್ರ: ಅಲೋಕ್ ನಿರಂತರ್

ವಿವಿಧ ರಾಜ್ಯಗಳಲ್ಲಿನ ಸದಸ್ಯತ್ವದ ವಿವರಗಳು

ರಾಜ್ಯ	ಸದಸ್ಯತ್ವ	
	2018	2021
ಅಂಡಮಾನ್–ನಿಕೋಬಾರ್	147	163
ಆಂಧ್ರ ಪ್ರದೇಶ	25,892	23,130
ಅಸ್ಸಾಂ	12,454	11,644
ಬಿಹಾರ	19,233	19,400
ಛತ್ತೀಸ್‌ಗಢ	1,506	1,344
ದೆಹಲಿ	2,095	2,213
ಗೋವಾ		45
ಗುಜರಾತ್	3,749	3,724
ಹರಿಯಾಣ	2,521	2,191
ಹಿಮಾಚಲ ಪ್ರದೇಶ	2,239	2,205
ಜಮ್ಮು ಮತ್ತು ಕಾಶ್ಮೀರ	1,734	1,660
ಜಾರ್ಖಂಡ್	5,348	5,185
ಕರ್ನಾಟಕ	9,000	8,052
ಕೇರಳ	4,89,086	5,27,174
ಮಧ್ಯಪ್ರದೇಶ	3,063	2,608
ಮಹಾರಾಷ್ಟ್ರ	12,480	12,807
ಮಣಿಪುರ	431	451
ಒಡಿಶಾ	4,361	3,647
ಪಂಜಾಬ್	8,000	8,389
ರಾಜಸ್ಥಾನ	5,211	5,218
ತಮಿಳುನಾಡು	90,474	93,982
ತೆಲಂಗಾಣ	35,560	32,177
ತ್ರಿಪುರಾ	73,678	50,612
ಉತ್ತರಾಖಂಡ	1,416	1,451
ಉತ್ತರ ಪ್ರದೇಶ	5,678	5,368
ಪಶ್ಚಿಮ ಬಂಗಾಳ	1,92,454	1,60,827
ಸಿಸಿ ಕೇಂದ್ರ	93	90
ಒಟ್ಟು	**10,07,903**	**9,85,757**

ಮಹಿಳೆಯರ ಮೇಲೆ ಬೆಳೆಯುತ್ತಿರುವ ದಾಳಿಗಳ ವಿರುದ್ಧ ಇನ್ನಷ್ಟು ತ್ವರಿತ, ದೃಢ ಮತ್ತು ಪರಿಣಾಮಕಾರಿ ಮಧ್ಯಪ್ರವೇಶ...... ಪುಟ 12 ರಿಂದ

ದುರ್ಬಲಗೊಳಿಸಲು ಪ್ರಯತ್ನಿಸುತ್ತಿದೆ ಎಂದು ಹೇಳುತ್ತ ಬಂದಿದೆ.

ಮಹಿಳೆಯರ ವಿರುದ್ಧದ ಅಪರಾಧಗಳಲ್ಲಿ ಆರೋಪಿಗಳ ಶಿಕ್ಷೆಯನ್ನು ಖಚಿತಪಡಿಸಲು ವರ್ಮಾ ಆಯೋಗದ ಶಿಫಾರಸುಗಳನ್ನು ಸರಿಯಾಗಿ ಜಾರಿಗೊಳಿಸಲಾಗಿಲ್ಲ, 25 ಪ್ರತಿಶತದಷ್ಟು ಮಾತ್ರ ಶಿಕ್ಷೆಗೊಳಗಾಗಿದ್ದಾರೆ. ದಲಿತ ಮತ್ತು ಆದಿವಾಸಿ ಮಹಿಳೆಯರ ಮೇಲಿನ ಅಪರಾಧಗಳಿಗೆ ಶಿಕ್ಷೆಗೊಳಗಾದವರ ಪ್ರಮಾಣ ಇನ್ನೂ ಕಡಿಮೆಯಾಗಿದೆ.

ವೈವಾಹಿಕ ಅತ್ಯಾಚಾರವನ್ನು 376 ಐಪಿಸಿ ಅಡಿಯಲ್ಲಿ ಅಪರಾಧವೆಂದು ಗುರುತಿಸಬೇಕು ಮತ್ತು ವೈವಾಹಿಕ ಅತ್ಯಾಚಾರವನ್ನು ಹೊರತುಪಡಿಸಿರುವುದನ್ನು ಐಪಿಸಿಯಿಂದ ತೆಗೆದುಹಾಕಬೇಕು ಎಂದು ಮಹಿಳಾ ಗುಂಪುಗಳು ಕೇಳುತ್ತಿವೆ. ಭಾರತೀಯ ಕ್ರಿಮಿನಲ್ ನ್ಯಾಯ ವ್ಯವಸ್ಥೆಯ ವಿಭಾಗಗಳಲ್ಲಿ ಅಸ್ತಿತ್ವದಲ್ಲಿರುವ ಸಂಪ್ರದಾಯಶರಣ ಮತ್ತು ಪಿತೃಪ್ರಧಾನ ಕಲ್ಪನೆಗಳ ಕಳೆ ಕೀಳಬೇಕಾಗಿದೆ.

'ಮೀ ಟೂ' ಅಭಿಯಾನವು ಮಾಧ್ಯಮ ಕ್ಷೇತ್ರದಲ್ಲಿ ಹಲವಾರು ಮಹಿಳೆಯರು ಅನುಭವಿಸಿದ ಲೈಂಗಿಕ ದೌರ್ಜನ್ಯ ಮತ್ತು ಆಘಾತವನ್ನು ಬಹಿರಂಗಪಡಿಸಿದೆ.

ಸಿಪಿಐ(ಎಂ) ಅಪರಾಧಿಗಿಂತಲೂ ಅಪರಾಧಕ್ಕೆ ಬಲಿಯಾದವರ ಮೇಲೆಯೇ ದೋಷಾರೋಪಣೆ ಮಾಡುವ ಪ್ರಚಲಿತ ಪಿತೃಪ್ರಾಧಾನ್ಯದ ನಿಯಮಗಳಿಗೆ ಸವಾಲೆಸೆಯಲು ಮುಂದಾದ ಕೆಚ್ಚೆದೆಯ ಮಹಿಳೆಯರನ್ನು ಶ್ಲಾಘಿಸುತ್ತದೆ ಎಂದು ಈ ನಿರ್ಣಯ ಹೇಳಿದೆ. ದೂರುದಾರರನ್ನು ಅಪಖ್ಯಾತಿಗೊಳಪಡಿಸಲು ಸಾಮಾಜಿಕ ಮಾಧ್ಯಮದಲ್ಲಿ ಚಾರಿತ್ರ್ಯ ಹತ್ಯೆ ಮತ್ತು ನಿಂದನೀಯ ಟ್ರೋಲಿಂಗ್ ಮತ್ತು ಅವರ ಬಾಯಿ ಮುಚ್ಚಿಸುವುದು ಅಸಹ್ಯಕರವಾಗಿದೆ. ಮಹಿಳೆಯರಿಗೆ ರಕ್ಷಣೆ ಮತ್ತು ಕಾನೂನು ನೆರವು ನೀಡುವುದು ಸರ್ಕಾರದ ಕರ್ತವ್ಯ.

ಅತ್ಯಾಚಾರ ಬಿಕ್ಕಟ್ಟು ಕೇಂದ್ರಗಳನ್ನು ಸ್ಥಾಪಿಸುವ ಮತ್ತು ನಿರ್ಭಯಾ ನಿಧಿಯ ಬಳಕೆ ಮಾಡುವ ಬಿಜೆಪಿ ಸರ್ಕಾರದ ಭರವಸೆ ಹುಸಿ ಕನಸಾಗಿಯೇ ಉಳಿದಿದೆ. 2018 ರಲ್ಲಿ ಆರ್‌ಟಿಐ ವಿಚಾರಣೆಗೆ ನೀಡಿದ ಉತ್ತರದ ಪ್ರಕಾರ, ಒಟ್ಟು ನಿಧಿಯ ಕೇವಲ 30 ಪ್ರತಿಶತವನ್ನು ಮಾತ್ರ ಬಳಸಲಾಗಿದೆ. ಮಕ್ಕಳ ಲಿಂಗ ಅನುಪಾತದಲ್ಲಿನ ಸುಧಾರಣೆಯ ಕೊರತೆಯು ಮೋದಿ ಸರ್ಕಾರದ ಬೇಟಿ ಬಚಾವೋ, ಬೇಟಿ ಪಢಾವೋ ಘೋಷಣೆಯ ಸುಳ್ಳು ಪ್ರಚಾರವನ್ನು ಬಹಿರಂಗಪಡಿಸುತ್ತದೆ. ಸಾಂಕ್ರಾಮಿಕದ ನಂತರ ಮಾನವ ಕಳ್ಳಸಾಗಣೆ ವಿಶೇಷವಾಗಿ ಹೆಣ್ಣು ಮಕ್ಕಳ ಕಳ್ಳಸಾಗಣೆ ಹೆಚ್ಚಿದೆ ಎಂದು ಅನೇಕ ವರದಿಗಳು ಸೂಚಿಸುತ್ತವೆ.

ಪ್ರತಿಗಾಮಿ ಸಿದ್ಧಾಂತಗಳು ಶೋಷಣೆಯ ವ್ಯವಸ್ಥೆಯನ್ನು ಸಮರ್ಥಿಸಲು, ಸ್ವೀಕಾರಾರ್ಹಗೊಳಿಸಲು, ಬಲಪಡಿಸಲು ಮತ್ತು ಶಾಶ್ವತಗೊಳಿಸಲು ಪ್ರಯತ್ನಿಸುತ್ತವೆ. ಅವರು ಪಿತೃಪ್ರಾಧಾನ್ಯತೆ, ಶ್ರೇಣಿವ್ಯವಸ್ಥೆ ಮತ್ತು ಖಾಸಗಿ ಆಸ್ತಿಯನ್ನು ಅನುಮೋದಿಸುತ್ತಾರೆ. ಮನುಸ್ಮೃತಿಯು ಬ್ರಾಹ್ಮಣ ಧರ್ಮ ಪ್ರಾಬಲ್ಯವನ್ನು ಪಡೆಯಲು ಮತ್ತು ದೇಶದ ವಿಶಾಲ ಭಾಗಗಳಲ್ಲಿ ವರ್ಣಾಶ್ರಮ ಧರ್ಮದ (ಜಾತಿ ವ್ಯವಸ್ಥೆ) ಸಾಮಾಜಿಕ ರಚನೆಯನ್ನು ಹೇರಲು ಕೊಡುಗೆ ನೀಡಿತು. ಬೇರೆ ಯಾವುದೇ ಪ್ರಚಲಿತ ಧಾರ್ಮಿಕ–ಸಾಮಾಜಿಕ ವ್ಯವಸ್ಥೆಯು ಮನುಸ್ಮೃತಿಗಿಂತಲೂ ಹೆಚ್ಚು ಅಸಮಾನತೆ, ಪಿತೃಪ್ರಧಾನ್ಯತೆ ಮತ್ತು ಶೋಷಣೆಯನ್ನು ಉತ್ತೇಜಿಸುವುದಿಲ್ಲ.

ಆರೆಸ್ಸೆಸ್–ಬಿಜೆಪಿ ಸರ್ಕಾರಗಳು ತನ್ನ ಮನುವಾದಿ ಅಜೆಂಡಾವನ್ನು ಪಟ್ಟುಬಿಡದೆ ಅನುಷ್ಠಾನಗೊಳಿಸುವುದರಿಂದ ಮಹಿಳೆಯರು ಕಷ್ಟಪಟ್ಟು ಗಳಿಸಿದ ಎಲ್ಲಾ ಹಕ್ಕುಗಳು, ಅವರ ಸಮಾನತೆಯ ಹಕ್ಕು ಮತ್ತು ಜೀವನೋಪಾಯದ ಹಕ್ಕನ್ನು ಕಸಿದುಕೊಳ್ಳುವ ಬೆದರಿಕೆ ಇದೆ. ಈಗಾಗಲೇ, ಕಾರ್ಮಿಕ ಮಾರುಕಟ್ಟೆಯನ್ನು ಪ್ರವೇಶಿಸಲು ಸಾಧ್ಯವಾಗಿರುವ ಮಹಿಳೆಯರು ಪ್ರಮಾಣ ಹಿಂದೆಂದಿಗಿಂತಲೂ ಕೆಳಗಿಳಿದಿದೆ.

ನವ–ಉದಾರವಾದಿ ನೀತಿಗಳನ್ನು ಉತ್ತೇಜಿಸುವ ಅತಿ–ಶೋಷಣೆಯಿಂದ ಅತ್ಯಂತ ಹೆಚ್ಚಾಗಿ ಬಳಲುತ್ತಿರುವವರು ಮಹಿಳೆಯರು. ಅವರ ಅಗ್ಗದ ದುಡಿಮೆಯು ಅತಿ ಲಾಭ ಮತ್ತು ಅತಿ ಶೋಷಣೆಯ ಸಂಪೂರ್ಣ ಸಂರಚನೆಯನ್ನು ಕಾಪಾಡಿಕೊಳ್ಳಲು ಹೆಚ್ಚು ಹೆಚ್ಚು ಅವಶ್ಯಕವಾಗಿದೆ. ನೈತಿಕ ಪೊಲೀಸ್‌ಗಿರಿ, ಲವ್ ಜಿಹಾದ್‌ನ ಆರೋಪಗಳು, ಮತಾಂತರ ವಿರೋಧಿ ಕಾನೂನುಗಳನ್ನು ಬಳಸಿಕೊಂಡು ಕುಟುಂಬಗಳಿಗೆ ಕಿರುಕುಳ, ಅವನ್ನು ಜಾರಿಗೊಳಿಸಲು ಸಂಘಪರಿವಾರದ ಸಂಘಟನೆಗಳಿಗೆ ನೀಡಿದ ರಕ್ಷಣೆ. ವಸ್ತ್ರಸಂಹಿತೆಗಳು ಇತ್ಯಾದಿಗಳು ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಸಾಮಾನ್ಯ ಸಂಗತಿಗಳಾಗಿ ಬಿಟ್ಟಿವೆ.

ದೇಶಾದ್ಯಂತ ಮಹಿಳೆಯರು ಮತ್ತು ಬಾಲಕಿಯರ ಮೇಲಿನ ದೌರ್ಜನ್ಯದ ಈ ಪರಿಯ ಅಗಾಧತೆಯನ್ನು ಗಮನದಲ್ಲಿಟ್ಟುಕೊಂಡು, ಸಿಪಿಐ(ಎಂ)ನ 23ನೇ ಮಹಾಧಿವೇಶನ ಪ್ರತಿ ರಾಜ್ಯದಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಪುರುಷರು ಮತ್ತು ಮಹಿಳೆಯರನ್ನು ಅನ್ಯಾಯ ಮತ್ತು ಹಿಂಸೆಯ ವಿರುದ್ಧ ಮತ್ತು ಮಹಿಳಾ ಸಮಾನತೆಗಾಗಿ ಅಣಿಗೊಳಿಸುವ ಮೂಲಕ ಇನ್ನಷ್ಟು ತ್ವರಿತ, ದೃಢನಿರ್ಧಾರದ ಮತ್ತು ಪರಿಣಾಮಕಾರಿ ಮಧ್ಯಪ್ರವೇಶವನ್ನು ಮಾಡಲು ನಿರ್ಣಯಿಸಿದೆ.

ಪೆಟ್ರೋಲ್ ಬೆಲೆ ಏರಿಕೆ ಅನಿವಾರ್ಯವೇನಲ್ಲ... ಪುಟ 13 ರಿಂದ

ಹೆಚ್ಚಿಸುತ್ತಾರೆ. ಹಾಗಾಗಿ, ಪೆಟ್ರೋ–ಉತ್ಪನ್ನಗಳ ಬೆಲೆ ಹೆಚ್ಚಳವು ಬಡವರನ್ನು ನೋಯಿಸುತ್ತದೆ. ಹಣದುಬ್ಬರದಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಶ್ರೀಮಂತರು ಕೆಲವು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವುದರಿಂದ ಪೆಟ್ರೋ–ಉತ್ಪನ್ನಗಳ ಬೆಲೆ ಹೆಚ್ಚಳವು ಅವರನ್ನು ಅಷ್ಟಾಗಿ ನೋಯಿಸುವುದಿಲ್ಲ.

ಶ್ರೀಮಂತರ ಮೇಲೆ ವಿಧಿಸುವ ನೇರ ತೆರಿಗೆಗಳನ್ನೇ ಅವಲಂಬಿಸಿದ ಒಂದು ಪರ್ಯಾಯ ವಿತ್ತೀಯ ಕಾರ್ಯತಂತ್ರವನ್ನು ಅನುಸರಿಸುವ ಮೂಲಕ, ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಗಳು ಏರಿದರೂ ಸಹ, ಪೆಟ್ರೋ–ಉತ್ಪನ್ನಗಳ ಬೆಲೆಗಳನ್ನು ಬದಲಾಯಿಸದೆ ಉಳಿಸಿಕೊಳ್ಳುವುದು (ಅವುಗಳ ಬೆಲೆಯನ್ನು ಇಳಿಸುವುದೂ ಸಹ ಸಾಧ್ಯವಿದೆ) ಮತ್ತು ಸರ್ಕಾರದ ಆದಾಯವನ್ನು ಹೆಚ್ಚಿಸಿಕೊಳ್ಳುವುದೂ ಸಾಧ್ಯವಿದೆ. ಅಂತಹ ನೇರ ತೆರಿಗೆಗಳಲ್ಲಿ ಪ್ರಮುಖವಾದುದು ಸಂಪತ್ತು ತೆರಿಗೆ ಮತ್ತು ಉತ್ತರಾಧಿಕಾರದ ತೆರಿಗೆ. ಅದೇನೋ ಸರಿಯೇ. ಆದರೆ, ಕಚ್ಚಾ ತೈಲದ ಬೆಲೆಗಳು ಡಾಲರ್ ಕರೆನ್ಸಿಯಲ್ಲಿ ಏರಿಕೆಯಾದಾಗ, ಅತಿ ಅಗತ್ಯದ ಪೆಟ್ರೋ–ಉತ್ಪನ್ನಗಳ ಆಂತರಿಕ/ದೇಶೀಯ ಬಳಕೆಯನ್ನು ಕಡಿಮೆ ಮಾಡುವುದು ಹೇಗೆ ಮತ್ತು ಅವುಗಳ ಬೆಲೆಯನ್ನೂ ಏರಿಸದೇ ಅದನ್ನು ಸಾಧಿಸುವುದಾದರೂ ಹೇಗೆ? ಎಂದು ಕೇಳಬಹುದು.

ಯಾರು "ಬೆಲೆ ತೆರುವವರು" ಅಲ್ಲವೊ ಅವರು (ಇಲ್ಲಿ ಅವರು ಅಂದರೆ "ಬೆಲೆ–ನಿರ್ಧರಿಸುವವರು" ಎಂದರ್ಥ) ಪೆಟ್ರೋ–ಉತ್ಪನ್ನಗಳ ಬೆಲೆ ಏರಿಕೆಯಾದಾಗಲೂ ಅವುಗಳ ಬಳಕೆಯನ್ನು ತಮ್ಮ ಹಿಂದಿನ ಮಟ್ಟದಲ್ಲೇ ಉಳಿಸಿಕೊಳ್ಳಬಲ್ಲರು. ನಾವು ನೋಡಿರುವಂತೆ, ಅಂತಹ ಉತ್ಪನ್ನಗಳ ಬಳಕೆಯು ಯಾವ ಗುಂಪಿನಲ್ಲಿ ಕುಗ್ಗುವುದು ದುಡಿಯುವ ಜನರಲ್ಲಿ ಮಾತ್ರ. ಅವರೂ ಸಹ, ಪೆಟ್ರೋ ಉತ್ಪನ್ನಗಳ ತಮ್ಮ ಬಳಕೆಯನ್ನು ಹಿಂದಿನ ಮಟ್ಟದಲ್ಲೇ ಉಳಿಸಿಕೊಳ್ಳಲು ಇತರ ಸರಕುಗಳ ಬಳಕೆಯನ್ನು ಕಡಿಮೆ ಮಾಡಿಕೊಳ್ಳುತ್ತಾರೆ. ಹಾಗಾಗಿ, ಅರ್ಥವ್ಯವಸ್ಥೆಯಲ್ಲಿ ಒಂದು ಹಿಂಜರಿತ ಸೃಷ್ಟಿಯಾಗುತ್ತದೆ. ಈ ಹಿಂಜರಿತವು ಇನ್ನೂ ಹೆಚ್ಚಿನ ನಿರುದ್ಯೋಗಕ್ಕೆ ಕಾರಣವಾಗುತ್ತದೆ ಮತ್ತು ವಾಸ್ತವವಾಗಿ ಇದು ಬಳಕೆಯನ್ನು ಕಡಿತಗೊಳಿಸುವ ಸಾಧನವೇ ಆಗುತ್ತದೆ. ಆದರೆ, ಪೆಟ್ರೋ–ಉತ್ಪನ್ನಗಳ ಬಳಕೆಯಲ್ಲಿ ಕಡಿತವನ್ನು ಉಂಟುಮಾಡದ, ಹಣದುಬ್ಬರ–ರಹಿತವಾದ ಮತ್ತು ಆರ್ಥಿಕ ಹಿಂಜರಿತ ಉಂಟುಮಾಡದ ವಿಧಾನ ಯಾವುದು ಎಂದರೆ, ಅದು ಬೆಲೆ–ನಿಯಂತ್ರಣದ ಶಾಸನಬದ್ಧ ಪಡಿತರ ಪದ್ಧತಿಯೇ.

ಪೆಟ್ರೋ–ಉತ್ಪನ್ನಗಳ ವಿತರಣೆಯಲ್ಲಿ ಸರ್ವ ಜನರಿಗೂ ನ್ಯಾಯ ಸಿಗುವಂತೆ ನೋಡಿಕೊಳ್ಳುವ ಒಂದು ಸಾಧನವೆಂದರೆ, ಅದು ಪಡಿತರ ವ್ಯವಸ್ಥೆಯೇ. ಬೆಲೆ–ಏರಿಕೆಯ ಮೂಲಕ ಜಾರಿಯಾಗುವ ಇಂಗಿತ–ಪಡಿತರವು ಸಾರಭೂತವಾಗಿ ಅಸಮಾನತೆಯಿಂದ ಕೂಡಿರುತ್ತದೆ. ಆದರೆ, ಪೆಟ್ರೋ–ಉತ್ಪನ್ನಗಳ ಚಿಲ್ಲರೆ ಬೆಲೆಯನ್ನು ನಿಯಂತ್ರಿಸಿದ ಒಂದು ನೇರ ಪಡಿತರ ವಿತರಣೆಯು, ಸರ್ವ ಜನರಿಗೂ ಸಮಾನ ನ್ಯಾಯ ಒದಗಿಸುತ್ತದೆ.

ಕಚ್ಚಾ ತೈಲ ಬೆಲೆಗಳ ಜಾಗತಿಕ ಏರಿಕೆಯಿಂದ ಉಂಟಾದ ಪರಿಸ್ಥಿತಿಯನ್ನು ನಿಭಾಯಿಸಲು ಕೆಲವು ನೀತಿಗಳ ಸಂಯೋಜನೆ ಅಗತ್ಯವಾಗುತ್ತದೆ. ಶ್ರೀಮಂತರ ಮೇಲೆ ವಿಧಿಸುವ ನೇರ ತೆರಿಗೆಗಳನ್ನೇ ಅವಲಂಬಿಸಿದ ಒಂದು ವಿತ್ತೀಯ ನೀತಿ; ಪೆಟ್ರೋ ಉತ್ಪನ್ನಗಳ ಚಿಲ್ಲರೆ ಬೆಲೆಗಳ ಮೇಲೆ ನಿಯಂತ್ರಣ ಮತ್ತು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳ ಇಳಿಕೆ; ಮತ್ತು, ಕಚ್ಚಾ ತೈಲದ ಒಟ್ಟು ಆಮದನ್ನು ಮಿತಿಗೊಳಿಸುವುದು ಮತ್ತು ಆ ಉದ್ದೇಶಕ್ಕಾಗಿ ಅವುಗಳ ಬೆಲೆ–ಏರಿಕೆಯನ್ನು ಅವಲಂಬಿಸುವ ಬದಲು, ಪೆಟ್ರೋಲ್ ಮತ್ತು ಡೀಸೆಲ್‌ಗಳ ವಿತರಣೆಯಲ್ಲಿ ಒಂದು ಪರಿಮಾಣಾತ್ಮಕ ಪಡಿತರದ ನೀತಿ, ಇವುಗಳನ್ನು ಅನುಸರಿಸಬೇಕಾಗುತ್ತದೆ. ಇಂತಹ ಸಂಯೋಜಿತ ನೀತಿಗಳನ್ನು ಅಳವಡಿಸಿಕೊಳ್ಳುವುದರ ಬದಲು, ಇಲ್ಲಿಯವರೆಗೆ ನಾವು ಅನುಸರಿಸಿದ ನೀತಿಗಳಿಗೇ ಕಟ್ಟುಬಿದ್ದರೆ, ದೇಶವು ತುಂಬಾ ಪರಿತಪಿಸುವ ಸಮಯದತ್ತ ಸಾಗಲಿದೆ.

ಜನಹೋರಾಟಗಳ ಇತಿಹಾಸದ ಬುತ್ತಿಯನ್ನು ಹಂಚುವ ಪ್ರದರ್ಶನ....... ಪುಟ 16 ರಿಂದ

ಪ್ರದರ್ಶನದ ಆರಂಭದಲ್ಲೇ ಇರುವ ಕೇರಳದ ಕಮ್ಯುನಿಸ್ಟ್ ಸ್ಥಾಪನಾ ಸಮ್ಮೇಳನದ, ಕರಿವೆಳ್ಳೂರು, ಮಲಬಾರ್, ಕಯ್ಯೂರು ಮುಂತಾದ ಪ್ರಮುಖ ಹೋರಾಟಗಳ ಶಿಲ್ಪ ವಿಶೇಷ ಗಮನ ಸೆಳೆಯುತ್ತದೆ. ಇವಲ್ಲದೆ ಎ.ಕೆ.ಗೋಪಾಲನ್, ಅಯ್ಯಂಕಾಳಿ ಮುಂತಾದ ನಾಯಕರ ಜೀವಂತ ಸೃಜಿನ ಶಿಲ್ಪಕೃತಿಗಳೂ ಜನತೆಯನ್ನು ಆಕರ್ಷಿಸುತ್ತಿದ್ದವು. ಶಿಲ್ಪಕೃತಿಗಳ ಜತೆ ಹಿರಿಯರು ಮಕ್ಕಳೆನ್ನದೆ ನೋಡುಗರು ಸೆಲ್ಫಿ ತೆಗೆದುಕೊಳ್ಳುವುದು ಸಾಮಾನ್ಯವಾಗಿತ್ತು.

ಈ ಪ್ರದರ್ಶನದ ಪೋಸ್ಟರುಗಳನ್ನು ಒಳಗೊಂಡ ಪುಸ್ತಕವನ್ನೂ ಪ್ರಕಟಿಸಲಾಗಿದೆ. ಈ ಪುಸ್ತಕ ಉತ್ತಮ ಮಾಹಿತಿಯನ್ನು ಒದಗಿಸುತ್ತಿದೆ. ಪ್ರದರ್ಶನದ ಹಿಂದೆ ಕಮ್ಯುನಿಸ್ಟ್ ಚಳುವಳಿಯ ಇತಿಹಾಸದ ಕುರಿತು ಇನ್ನಷ್ಟು ಸಂಶೋದನೆ, ಸಾಮಗ್ರಿ ಸಂಗ್ರಹಕ್ಕೆ ಶ್ರಮ ವಹಿಸಿದ್ದು ಕಂಡು ಬರುತ್ತದೆ. ಈ ಪ್ರದರ್ಶನಕ್ಕೆ ಮಾಹಿತಿ ಒದಗಿಸಲು ಇತಿಹಾಸಕಾರರ ಸಮಿತಿ ಕೆಲಸ ಮಾಡಿತ್ತು. ನೂರಾರು ಕಲಾವಿದರು ಕೆಲಸ ಮಾಡಿದ್ದಾರೆ.

ಈ ಪ್ರದರ್ಶನ ಮಾರ್ಚ್ 30 ರಿಂದ ಏಪ್ರಿಲ್ 10ರ ವರೆಗೆ ತೆರೆದಿತ್ತು; ಲಕ್ಷಾಂತರ ಜನ ಪ್ರದರ್ಶನಕ್ಕೆ ಭೇಟಿ ನೀಡಿದ್ದಾರೆ ಎನ್ನಲಾಗಿದೆ. ನಡೆಯಲು ಸಾಧ್ಯವಾಗದ ವಯೋವೃದ್ಧ, ಕೆಲವು ತಿಂಗಳುಗಳ ಹಸುಗೂಸುಗಳು ಸೇರಿದಂತೆ ಇಡೀ ಕುಟುಂಬಗಳು ಉತ್ಸಾಹದಿಂದ ಪ್ರದರ್ಶನಕ್ಕೆ ಭೇಟಿ ಕೊಡುವುದು ಸ್ಫೂರ್ತಿದಾಯಕವೂ, ಆಶ್ಚರ್ಯಕರವೂ ಆಗಿತ್ತು. ಕೊನೆಯ 2–3 ದಿನಗಳಂತೂ ಪ್ರದರ್ಶನದ ಒಳಗೆ ಹೋಗಲು ಒಂದು ಗಂಟೆಯ ವರೆಗೆ ಕಾಯಬೇಕಾಗಿತ್ತು. ಆದರೂ ನೋಡುಗರು ಕ್ಯೂ ನಿಂತು ಪ್ರದರ್ಶನಕ್ಕೆ ಹೋಗುವುದು ಕಂಡು ಬಂತು.

ಒಟ್ಟಿನಲ್ಲಿ ಈ ಪ್ರದರ್ಶನ ನೋಡಿ ಹೊರಗಡೆ ಬರುವವರು ಜನಚಳುವಳಿಗಳ ಇತಿಹಾಸದ ಜ್ಞಾನದ ಬುತ್ತಿಯನ್ನು ಹೊತ್ತು, ಸ್ಫೂರ್ತಿಯಿಂದ ಸಾಗುತ್ತಿರುವುದು ಕಂಡು ಬಂತು.

ಬಯಲು ಸೀಮೆ ಜಿಲ್ಲೆಗಳ ಜನರ ಬಾಯಾರಿಕೆ ನೀಗಿಸುವ ಉದ್ದೇಶದಿಂದ ಕೈಗೊಂಡಿರುವ ಎತ್ತಿನಹೊಳೆ ಯೋಜನೆಗಾಗಿ ಸಕಲೇಶಪುರ ತಾಲೂಕಿನ ಎರಡು ಕಡೆ ನಿರ್ಮಿಸಿರುವ ಸುರಂಗ ಮಾರ್ಗದಿಂದ ಹಾನಿಯಾಗಿರುವ ಮನೆಗಳಿಗೆ ಎರಡು ವರ್ಷ ಕಳೆದರೂ ಪರಿಹಾರ ಸಿಕ್ಕಿಲ್ಲ. ಈ ಹಿನ್ನೆಲೆ ಸಂತ್ರಸ್ತ ಕುಟುಂಬಗಳು ಪರಿಹಾರಕ್ಕಾಗಿ ಸರ್ಕಾರಿ ಕಚೇರಿಗೆ ಅಲೆದು ಅಲೆದು ಹೈರಾಣಾಗಿವೆ.

ಬಡವರ ಮನೆಗಳಿಗೆ 'ಸುರಂಗ ಸಂಕಟ' ನಿವಾಸಗಳ ಸ್ಥಳಾಂತರವೂ ಆಗಿಲ್ಲ: ಸೂಕ್ತ ಪರಿಹಾರವೂ ಸಿಕ್ಕಿಲ್ಲ

ಬಾನುಗೊಂದಿ ಲಿಂಗರಾಜು

*** ಸುರಂಗ ನಿರ್ಮಾಣದಿಂದ 13 ಮನೆಗಳಿಗೆ ಹಾನಿ**

*** ಎರಡು ವರ್ಷ ಅಲೆದಾಡಿದರೂ ಒಂದು ಪೈಸೆ ಪರಿಹಾರ ಸಿಕ್ಕಿಲ್ಲ**

ಹಾದು, ಬಯಲು ಸೀಮೆಯ ಏಳು ಜಿಲ್ಲೆಗಳಿಗೆ ಕುಡಿಯುವ ನೀರೊದಗಿಸುವ ಮಹತ್ವದ ಎತ್ತಿನಹೊಳೆ ಯೋಜನೆಗಾಗಿ ಸಕಲೇಶಪುರ ತಾಲೂಕಿನ ಮೂಗಲಿ ಹಾಗೂ ಹೆಬ್ಬನಹಳ್ಳಿ ಗ್ರಾಮದಲ್ಲಿ ಸುರಂಗ ಮಾರ್ಗ ನಿರ್ಮಿಸಲಾಗುತ್ತಿದೆ. ಇದರಿಂದ ಎರಡೂ ಗ್ರಾಮದ 13 ಮನೆಗಳಿಗೆ ಹಾನಿಯಾಗಿವೆ. ಸಂಬಂಧಪಟ್ಟ ಅಧಿಕಾರಿಗಳು ಕೂಡ ಹಾನಿಯಾಗಿರುವ ಮನೆಗಳ ಸಮೀಕ್ಷೆ ನಡೆಸಿ ಪರಿಹಾರ ನೀಡುವ ಭರವಸೆ ನೀಡಿದ್ದರು. ಆದರೆ ಇದುವರೆಗೂ ಪರಿಹಾರ ಸಂತ್ರಸ್ತರ ಕೈ ಸೇರಿಲ್ಲ.ಇದರಿಂದ ಸಂತ್ರಸ್ತ ಕುಟುಂಬಗಳು ಪರಿಹಾರ ಹಣಕ್ಕಾಗಿ ಚಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ.

100 ಅಡಿ ಆಳದಲ್ಲಿ ಸುರಂಗ:

ಎತ್ತಿನಹೊಳೆ ಯೋಜನೆಯ ಗುರುತ್ವಾ ಕಾಲುವೆಯ ಸರಪಳಿ 0.000 ಕಿ.ಮೀ. ನಿಂದ 1.156 /1.500 ಕಿ.ಮೀ ವರೆಗೆ ಸುರಂಗ ಮಾರ್ಗ ನಿರ್ಮಿಸಲಾಗುತ್ತಿದೆ. ನಾಲಾ ಪಂಕ್ತೀಕರಣದ ಮಧ್ಯಭಾಗದಿಂದ ಎರಡೂ ಬದಿಗಳಲ್ಲಿ ಒಟ್ಟು 9 ವಾಸದ ಮನೆಗಳಿದ್ದು, ಈ ಮನೆಗಳು ಸುರಂಗ ಮಾರ್ಗದಿಂದ ಕೇವಲ 15 ಮೀಟರ್‌ನಿಂದ 120 ಮೀ. ದೂರದಲ್ಲಿ ಇವೆ. ಅಲ್ಲದೆ ಸುರಂಗ ಮಾರ್ಗದ ನಾಲಾ ಪಂಕ್ತೀಕರಣದ



ಮೇಲ್ಭಾಗದಲ್ಲಿ 2 ಮನೆಗಳಿವೆ.

ಮನೆಗಳಿಗೆ ಭಾರೀ ಹಾನಿ:

ಸುರಂಗ ಮಾರ್ಗ ಕಾಮಗಾರಿ ನಿರ್ವಹಿಸುವ ಸಂದರ್ಭದಲ್ಲಿ ಡ್ರಿಲ್ಲಿಂಗ್, ಬ್ಲಾಸ್ಟಿಂಗ್ ಹಾಗೂ ಇತರೆ ಕೆಲಸಗಳಿಂದ ಉಂಟಾದ ಕಂಪನದಿಂದಾಗಿ ಸುರಂಗ ಮಾರ್ಗದ ಎರಡೂ ಬದಿಗಳಲ್ಲಿ ಸುಮಾರು 15 ಮೀಟರ್‌ನಿಂದ 120 ಮೀಟರ್ ದೂರ ಇರುವ ಮನೆಗಳಲ್ಲಿ ಬಿರುಕು ಉಂಟಾಗಿ ಭಾರೀ ಹಾನಿಯಾಗಿದೆ.

2 ಮನೆ ಸ್ಥಳಾಂತರಕ್ಕೆ ನಿರ್ಲಕ್ಷ್ಯ:

ಸುರಂಗ ಮಾರ್ಗದ ಕ್ಯಾವಿಟಿಯು ಗುರುತ್ವಾ ಕಾಲುವೆ ಸರಪಳಿ 0+265 ಕೀಮೀನಲ್ಲಿದ್ದು ಈ ಸ್ಥಳದಿಂದ ಸುಮಾರು 8 ರಿಂದ 20 ಮೀಟರ್ ಹಿಂಭಾಗಕ್ಕೆ ಪಂಕ್ತೀಕರಣದ ಮೇಲ್ಭಾಗದಲ್ಲೇ ಲೋಕೇಶ್ ಎಂಬುವವರ ಮನೆ ಇದೆ. ಈ ಭಾಗದಲ್ಲಿ ಮಣ್ಣು ಹೆಚ್ಚು ವಿಘಟಿತವಾಗಿದೆ. ಈ ಭಾಗವು ಹೆಚ್ಚು ಮಳೆ ಬೀಳುವ ಪ್ರದೇಶವಾಗಿದ್ದು ಹೆಚ್ಚು ಮಳೆಯಾದಲ್ಲಿ ಸುರಂಗ ಮಾರ್ಗದ ಒಳಗೆ ಬಸಿನೀರು ಹೆಚ್ಚು ಹರಿದು ಬರುತ್ತದೆ.ಇದರಿಂದ ಮಣ್ಣು ಕುಸಿಯುವ ಸಂಭವವಿದ್ದು ಕೆಲಸ ಮಾಡುವ ಸಂದರ್ಭದಲ್ಲಿ ಸುರಂಗದ ಮೇಲ್ಭಾಗದಲ್ಲಿರುವ ಎರಡು ಮನೆಗಳಿಗೆ ಹೆಚ್ಚು ಹಾನಿಯಾಗುವ ಸಂಭವವಿದ್ದು ಮುನ್ನೆಚ್ಚರಿಕಾ ಕ್ರಮವಾಗಿ ಎರಡೂ ಮನೆಗಳನ್ನೂ ಸ್ಥಳಾಂತರಿಸುವಂತೆ ಎತ್ತಿನಹೊಳೆ ಉಪವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಸರ್ಕಾರಕ್ಕೆ ವರದಿ ನೀಡಿದ್ದಾರೆ. ಆದರೆ ಇದುವರೆಗೂ ಈ ಎರಡೂ ಮನೆಗಳನ್ನೂ ಸ್ಥಳಾಂತರಿಸಿಲ್ಲ. ಇತ್ತೀಚೆಗೆ ಸುರಿದ ಮಳೆಯಿಂದ ಸುರಂಗ ಮಾರ್ಗದ ಸಮೀಪ ಭೂ ಕುಸಿತ ಉಂಟಾಗಿದ್ದು ಎರಡೂ ಕುಟುಂಬದವರು ಆತಂಕದಿಂದ ಜೀವನ ಸಾಗಿಸುತ್ತಿವೆ.

13 ಮನೆಗಳಿಗೆ 38 ಲಕ್ಷ ಪರಿಹಾರ ನಿಗದಿ:

ಸುರಂಗ ಮಾರ್ಗದಿಂದಾಗಿ ಹೆಬ್ಬನಹಳ್ಳಿ ಗ್ರಾಮದ ಸದಾಶಿವ, ಯಶೋಧಮ್ಮ, ಮೂಗಲಿ ಗ್ರಾಮದ ಲೋಕೇಶ್, ನರಸಮ್ಮ, ಸರೋಜಾ, ಶೇಷಪ್ಪ, ಅಕ್ಕಮ್ಮ, ರಾಮಾ, ಸೋಮಶೇಖರ್, ನಿರ್ವಾಣಯ್ಯ, ಬಸಯ್ಯ, ಪುಟ್ಟರಾಜು ಹಾಗೂ ಕಾವೇರಿ ಸೇರಿದಂತೆ ಒಟ್ಟು 13ಮನೆಗಳಿಗೆ ಹಾನಿಯಾಗಿದ್ದು ಮನೆ ಮಾಲೀಕರು 2019 ರ ನ.5ರಂದು ಹೆಬ್ಬನಹಳ್ಳಿಯಲ್ಲಿ ಅಪರ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪರಿಹಾರ ನೀಡುವಂತೆ ಮನವಿ ಮಾಡಿದ್ದರು. ಅದರಂತೆ ಹಾನಿಯಾಗಿರುವ 13 ಮನೆಗಳ ಮೌಲ್ಯಮಾಪನ ಮಾಡಿಸಿ ಲೋಕೋಪಯೋಗಿ ಇಲಾಖೆ ನಿಬಂದನೆಗಳನ್ವಯ ಒಟ್ಟು 38, 47,548ರೂ. ಪರಿಹಾರ ಮೊತ್ತ ನೀಡುವಂತೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆದರೆ ಇದುವರೆಗೂ ಪರಿಹಾರದ ಹಣ ಸಂತ್ರಸ್ತರ ಕೈ ಸೇರಿಲ್ಲ.

ಪರಿಹಾರ ಹಣ ನೀಡುವಂತೆ ಸಂತ್ರಸ್ತ ಕುಟುಂಬಗಳು ವಿಶ್ವೇಶ್ವರಯ್ಯ ಜಲ ನಿಗಮ, ಜಿಲ್ಲಾಧಿಕಾರಿ ಕಚೇರಿ ಸೇರಿದಂತೆ ಜಿಲ್ಲಾ ಉಸ್ತುವಾರಿ ಸಚಿವರನ್ನು ಭೇಟಿ ಮಾಡಿ ಪರಿಪರಿಯಾಗಿ ಕೇಳಿಕೊಂಡರೂ ಕೇವಲ ಭರವಸೆ ನೀಡುತ್ತಾರೆ ಹೊರತು ಇದುವರೆಗೂ ಸಂತ್ರಸ್ತರ ಕೈ ಸೇರಿಲ್ಲ. ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಬಡ ಕುಟುಂಬಗಳಿಗೆ ಪರಿಹಾರ ಹಣ ಕೊಡಿಸಲು ಮುಂದಾಗಬೇಕಿದೆ.



ಪರ್ಯಾಯ ಚುನಾವಣಾ ಪದ್ಧತಿಗಳು...

ಪುಟ 11 ರಿಂದ

ರೇಸ್ ಪದ್ಧತಿಯನ್ನು ಬಿಟ್ಟುಕೊಡಲು ತಯಾರಿಲ್ಲ. ಕಾಂಗ್ರೆಸ್ ದಶಕಗಟ್ಟಲೆ ನಿರಂತರವಾಗಿ ಈಗಿನ ಪದ್ಧತಿಯ ಪ್ರಕಾರ ಬಹುಮತ ಪಡೆಯುತ್ತಾ ಬರುವಾಗ, ತನಗೆ ಸಿಕ್ಕ ಒಟ್ಟು ಮತಗಳಿಗೆ ತಕ್ಕಷ್ಟು ಸೀಟು ಸಿಗದ ಸಂದರ್ಭದಲ್ಲಿ ಬಿಜೆಪಿ ಈ ಪದ್ಧತಿಯನ್ನು ಬದಲಾಯಿಸಿ ಓಟಿಗೆ ತಕ್ಕಂತೆ ಸೀಟು ಪದ್ಧತಿ ಜಾರಿಗೆ ತನ್ನಿ ಎಂದು ಒತ್ತಾಯಿಸುತ್ತಿತ್ತು. ಆದರೆ ಈಗ ಬಿಜೆಪಿಗೇ ಈ ಪದ್ಧತಿಯ ಅತಿ ಹೆಚ್ಚು ಲಾಭ ಸಿಕ್ಕುತ್ತಿರುವಾಗ ಅದರ ಸೊಲ್ಲೇ ಇಲ್ಲ. ಅವರೇಕೆ ಬದಲಾಯಿಸುವ ಯೋಚನೆ ಮಾಡುತ್ತಾರೆ?

ಜಾತಿ ವ್ಯವಸ್ಥೆಯಲ್ಲಿ ಪಟ್ಟಿ ಪದ್ಧತಿ:

ಭಾರತದ ಜಾತಿ ಪದ್ಧತಿಯ ಸಮಾಜ ರಚನೆಯ ಸ್ಥಿತಿಯಲ್ಲಿ ಓಟಿಗೆ ತಕ್ಕಂತೆ ಸೀಟು ಪದ್ಧತಿ ಹಾನಿಕರ ಎಂಬ ಒಂದು ವಾದ ಇದೆ. ಈ ಪದ್ಧತಿಯಲ್ಲಿ ಆಯಾ ಜಾತಿಯವರು ಒಟ್ಟಾಗಿ ತಮ್ಮ ಜಾತಿಯವರಿಗೇ ಓಟು ಹಾಕಿಕೊಳ್ಳುವ ಅನುಕೂಲ ಇರುವುದರಿಂದ ಜಾತಿವಾರು ಪಕ್ಷಗಳು ಹುಟ್ಟುವುದಕ್ಕೆ ಉತ್ತೇಜನ ದೊರಕುತ್ತದೆ, ಜಾತಿವಾದ ಹೆಚ್ಚಾಗುತ್ತದೆ ಎನ್ನುವುದವರ ವಾದ. ಆದರೆ ಈಗೇನು ಜಾತಿವಾದ ಕಡಿಮೆಯಾಗಿದೆಯೇ? ನಾವು ಭಾರತ ವ್ಯಾಪಿ, ಎಲ್ಲ ಜಾತಿ, ಧರ್ಮಗಳನ್ನು ಪ್ರತಿನಿಧಿಸುವವರು ಎಂಬ ಕಾಂಗ್ರೆಸ್ಸೂ, ಹಿಂದೂ ನಾವೆಲ್ಲ ಒಂದು ಎನ್ನುವ ಬಿಜೆಪಿಯೂ ಪ್ರತಿ ಚುನಾವಣೆಯಲ್ಲಿಯೂ,ಪ್ರತಿ ಕ್ಷೇತ್ರದಲ್ಲಿಯೂ ಧರ್ಮ, ಜಾತಿ ವಿಭಜನೆಯ ಮೂಲಕವೇ ಮತ ಪಡೆಯುತ್ತಿರುವುದು. ಇನ್ನು ಹಲವು ಪ್ರಾದೇಶಿಕ ಪಕ್ಷಗಳು ಜಾತಿಗೆ ಸೀಮಿತವಾಗಿ ಬಿಟ್ಟಿವೆ.

ಕ್ಷೇತ್ರ ಕೇಂದ್ರಿತ ಹಾಗೂ ಕುದುರೆ ರೇಸ್ ಚುನಾವಣಾ ಪದ್ಧತಿಯಲ್ಲಿ ಆಯಾ ಪ್ರದೇಶದ ಪ್ರಬಲ ಜಾತಿಗಳವರಿಗೇ ಹಣ ಚೆಲ್ಲಿ, ಇತರ ಜಾತಿಗಳವರ ದುರ್ಬಲ ಸ್ಥಿತಿಯನ್ನು, ಅವರ ಕಡಿಮೆ ಜನಸಂಖ್ಯೆಯನ್ನು ಬಳಸಿಕೊಂಡು ಗೆಲ್ಲುವ ಅವಕಾಶ ಹೆಚ್ಚು. ಇದು ಪ್ರತಿ ಚುನಾವಣೆಯ ಸಂದರ್ಭದಲ್ಲೂ ಮತ್ತೆ ಮತ್ತೆ ಸಾಬೀತಾಗುತ್ತಿದೆ. ಆದರೆ ಓಟಿಗೆ ತಕ್ಕ ಸೀಟು ಪದ್ಧತಿಯಲ್ಲಿ ದುರ್ಬಲ ಸಮುದಾಯಗಳೂ ವಿಧಾನ ಸಭೆ,ಲೋಕಸಭೆಗಳಲ್ಲಿ ಒಂದಿಷ್ಟು ಪ್ರಾತಿನಿಧ್ಯ ಪಡೆಯುವ ಅವಕಾಶ ದಕ್ಕುತ್ತದೆ. ಅಷ್ಟೇ ಅಲ್ಲ ಒಂದು ಜಾತಿಗೆ ಸೀಮಿತವಾದ ಪಕ್ಷಗಳೂ ತನಗೆ ಮತ ನೀಡುವ ಸಮುದಾಯದ ಸಮಸ್ಯೆಗಳನ್ನು, ಯಾವ ರೀತಿ ಪರಿಹರಿಸುತ್ತದೆ ಎಂಬುದನ್ನು ಆಯಾ ಜನ ಸಮುದಾಯದ ಮುಂದಿಡಬೇಕಾಗುತ್ತದೆ. ಅಂತಹ ನೀತಿ, ಯೋಜನೆಗಳ ಮೂಲಕ ಆಯಾ ಸಮುದಾಯವನ್ನು ಓಲಿಸಿಕೊಳ್ಳುವುದು ಮುಖ್ಯವಾಗುವುದರಿಂದ ಆಯಾ ಸಮಯದಾಯದಲ್ಲಿ ನೀತಿ, ಧೋರಣೆಗಳ ಬಗ್ಗೆ ಚರ್ಚೆ ಆರಂಭವಾಗುತ್ತದೆ. ಇದು ಒಟ್ಟಾರೆ ಸರ್ಕಾರಗಳ ನೀತಿ, ಧೋರಣೆಗಳನ್ನು ರೂಪಿಸುವಲ್ಲಿ ಸಹಾಯಕವಾಗುತ್ತದೆ. ತಮ್ಮ ಸಮುದಾಯದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲಾದರೂ ಇಂತಹುದೇ ಸಮಸ್ಯೆಗಳಿಂದ ಬಾಧಿತರಾದ ಇತರ ಸಮುದಾಯಗಳೊಡನೆ ಸೇರಬೇಕಾಗುತ್ತದೆ. ಜನರ ರಾಜಕೀಯ ಪ್ರಜ್ಞೆ ಬೆಳೆಯಲು ಅವಕಾಶವಾಗುತ್ತದೆ.

ಒಟ್ಟಿನಲ್ಲಿ ಪಟ್ಟಿ ಅಥವಾ ಓಟಿಗೆ ತಕ್ಕಂತೆ ಸೀಟು ಪದ್ಧತಿ ಜನರ ಮತ ಯಾ ಅಭಿಪ್ರಾಯವನ್ನು ಪ್ರತಿನಿಧಿಸಲು ಅತ್ಯಂತ ಸೂಕ್ತ. ದೇಶದ ಪ್ರಜಾಪ್ರಭುತ್ವ ಹೆಚ್ಚು ಪ್ರಜಾಪ್ರಭುತ್ವೀಯ ವಾಗುವುದಕ್ಕೆ ಅವಕಾಶವಾಗುತ್ತದೆ. ಅಂದ ಮಾತ್ರಕ್ಕೆ ಚುನಾವಣಾ ಪದ್ಧತಿಯ ಬದಲಾವಣೆ ಸಮಾಜದಲ್ಲಿ ಮೂಲಭೂತ ಬದಲಾವಣೆಯನ್ನು ಉಂಟು ಮಾಡುತ್ತದೆ ಎಂಬ ಭ್ರಮೆ ಇಟ್ಟುಕೊಳ್ಳಬಾರದು. ಪ್ರಜಾಪ್ರಭುತ್ವವನ್ನು ವಿರೂಪಗೊಳಿಸಿರುವ, ವಿರೂಪಗೊಳಿಸುತ್ತಿರುವ ಹಲ ಹಲವು ಅಂಶಗಳಲ್ಲಿ ಚುನಾವಣಾ ಪದ್ಧತಿ ಎಂಬುದು ಒಂದು ಅಂಶ ಮಾತ್ರ ಎಂಬುದನ್ನು ಮರೆಯಬಾರದು.

ಪಟ್ಟಿ ಪದ್ಧತಿಯೊಂದಿಗೆ ಇನ್ನೂ ಕೆಲ ಚುನಾವಣಾ ಪದ್ಧತಿಗಳನ್ನು ವಿಶ್ವದ ಕೆಲ ದೇಶಗಳು ಅಳವಡಿಸಿಕೊಂಡಿವೆ. run off ಪದ್ಧತಿ, right to recall ಪದ್ಧತಿ. ಒಂದು ಕ್ಷೇತ್ರದಲ್ಲಿ ಹಲವು ಅಭ್ಯರ್ಥಿಗಳು ನಿಂತು ಯಾರಿಗೂ ಶೇ.50 ರಷ್ಟು ಮತಗಳು ದೊರಕದ ಪರಿಸ್ಥಿತಿಯಲ್ಲಿ ಹೆಚ್ಚು ಮತ ಗಳಿಸಿದ ಮೊದಲ ಎರಡು ಅಭ್ಯರ್ಥಿಗಳ ನಡುವೆ ಮತ್ತೆ ಚುನಾವಣೆ ನಡೆಯುವುದು, ಅವರಲ್ಲಿ ಒಬ್ಬರು ಶೇ.50 ಕ್ಕಿಂತ ಹೆಚ್ಚು ಮತ ಗಳಿಸುವ ಮೂಲಕ ಕ್ಷೇತ್ರವನ್ನು ಪ್ರತಿನಿಧಿಸಲು ಹೆಚ್ಚು ಅರ್ಹರಾಗುತ್ತಾರೆ ಎಂಬುದು run off ಪದ್ಧತಿ. ಇದು ಅಧ್ಯಕ್ಷೀಯ ಮಾದರಿಯ ಪ್ರಜಾಪ್ರಭುತ್ವ ಇರುವ ಕಡೆ ಹೆಚ್ಚು ಪ್ರಚಲಿತವಾಗಿದೆ. ಆದರೂ ಕ್ಷೇತ್ರ ಕೇಂದ್ರಿತ ಪ್ರತಿನಿಧಿಗಳ ಚುನಾವಣೆ ಇರುವ ಕೆಲ ದೇಶಗಳಲ್ಲಿ ವಿಧಾನ ಸಭಾ, ಲೋಕಸಭಾ ಸದಸ್ಯರ ಚುನಾವಣೆಗಳಿಗೂ ಅನ್ವಯಗೊಳಿಸಲಾಗಿದೆ.

Right to recall ಅಥವಾ ವಾಪಸ್ ಕರೆಸಿಕೊಳ್ಳುವ ಪದ್ಧತಿ ಎಂದರೆ ಒಬ್ಬ ಚುನಾಯಿತ ಪ್ರತಿನಿಧಿ ಭ್ರಷ್ಟನಾದರೆ, ತಾನು ಚುನಾವಣಾ ಸಮಯದಲ್ಲಿ ನೀಡಿದ ಭರವಸೆಗಳನ್ನು ಈಡೇರಿಸದೇ ಹೋದರೆ ಆಯಾ ಕ್ಷೇತ್ರದ ಜನತೆ ಚುನಾವಣಾ ಆಯೋಗಕ್ಕೆ ತಮ್ಮ ಪ್ರತಿನಿಧಿಯನ್ನು ವಾಪಸ್ ಕರೆಸಿಕೊಳ್ಳಬಯಸುತ್ತೇವೆ ಎಂದು ಅರ್ಜಿ ಸಲ್ಲಿಸುವುದು. ಚುನಾವಣಾ ಆಯೋಗ ಸಂಬಂಧಿಸಿದ ಕಾನೂನುಗಳು ನಿರ್ದೇಶಿಸಿದ ಸಂಖ್ಯೆಯ ಜನರು ಈ ಅರ್ಜಿ ಸಲ್ಲಿಸಿದ್ದಾರೆಯೇ ಎಂದು ಪರಿಶೀಲಿಸಿ ಆ ಕ್ಷೇತ್ರದಲ್ಲಿ ಮತ್ತೆ ಚುನಾವಣೆ ನಡೆಸುವುದು. ಪಟ್ಟಿ ಪದ್ಧತಿಯ ಜೊತೆಗೆ ಈ ಪದ್ಧತಿ ಚುನಾವಣಾ ಭ್ರಷ್ಟಾಚಾರವನ್ನು, ಪ್ರತಿನಿಧಿಗಳ ಹಾಗೂ ಪಕ್ಷಗಳ ಬೇಜವಾಬ್ದಾರಿ ವರ್ತನೆಯನ್ನು ತಡೆಯಲು ಹೆಚ್ಚು ಸಹಾಯಕ.

ನಮ್ಮ ದೇಶದ ಪ್ರಜಾಪ್ರಭುತ್ವವನ್ನು ಹೆಚ್ಚು ಪ್ರಜಾಪ್ರಭುತ್ವೀಯವಾಗಿಸಲು, ಜನಪರ ಚಳುವಳಿಗಳು, ದುರ್ಬಲ ಸಮುದಾಯಗಳು ಹೆಚ್ಚು ಪ್ರಾತಿನಿಧ್ಯ ಪಡೆಯಲು ಪ್ರಯೋಜನಕಾರಿಯಾದ ಓಟಿಗೆ ತಕ್ಕಂತೆ ಸೀಟು ಅಥವಾ ಪಟ್ಟಿ ಪದ್ಧತಿ, ವಾಪಸ್ ಕರೆಸಿಕೊಳ್ಳುವ ಪದ್ಧತಿಗಾಗಿ ಕಮ್ಯುನಿಸ್ಟ್ ಪಕ್ಷಗಳು, ಸಮಾಜವಾದಿ ಪಕ್ಷಗಳು ಒತ್ತಾಯಿಸುತ್ತಾ ಬಂದಿವೆ. ಆದರೆ ಆಳುವವರಿಗೆ ಮುಖ್ಯವಾಗಿ ಕಾರ್ಪೋರೇಟ್ ಅಡಿಯಾಳು ಪಕ್ಷಗಳಿಗೆ ಬಾಧಕವಾಗುವಂತಹ ಇಂತಹ ಮುಖ್ಯ ಬದಲಾವಣೆಗಳು ಬರಬೇಕಾದರೆ ಒಂದು ಬೃಹತ್ ಜನ ಚಳುವಳಿಯಿಂದ ಮಾತ್ರ ಸಾಧ್ಯ. ಅದ್ದರಿಂದ ಯಾವುದೇ ಚಳುವಳಿ ತನ್ನೆಲ್ಲಾ ಒತ್ತಾಯಗಳು, ಹೋರಾಟಗಳ ಜೊತೆಗೆ ಈ ಮುಖ್ಯ ಒತ್ತಾಯಗಳ ಬಗ್ಗೆ ಜನರಿಗೆ ಮನವರಿಕೆ ಮಾಡುವುದು ಅಗತ್ಯ. ಇಂದು ಪ್ರಜಾಪ್ರಭುತ್ವವನ್ನೇ ನಾಶ ಮಾಡುವಂತಹ ಪ್ರವೃತ್ತಿಗಳು ಮೇರೆ ಮೀರುತ್ತಿರುವಾಗ ಈ ಸುಧಾರಣೆಗಳ ಬಗ್ಗೆ ಜನರನ್ನು ಅಣಿನೆರಸುವುದು ಅಗತ್ಯವಾಗಿದೆ.

JANASHAKTHI KANNADA VARA PATRIKE APRIL 18-24, 2022 Price: Rs. 10/- Date of Publication: 15 APRIL 2022 RNI No. KARKAN /2006/17926 Posted on 18-04-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2







ಜನಹೋರಾಟಗಳ ಇತಿಹಾಸದ ಬುತ್ತಿಯನ್ನು ಹಂಚುವ ಪ್ರದರ್ಶನ

ವಸಂತರಾಜ ಎನ್.ಕೆ.

ಕಣ್ಣೂರಿನಲ್ಲಿ ನಡೆದ ಸಿಪಿಐ(ಎಂ) 23 ನೇ ಮಹಾಧಿವೇಶನ ನೋಡಲು ಬಂದವರಿಗೆ ಪ್ರಮುಖ ಆಕರ್ಷಣೆ ಜನಚಳುವಳಿಗಳ ಇತಿಹಾಸ ತಿಳಿಸುವ ಚಿತ್ರ ಮತ್ತು ಶಿಲ್ಪಕಲಾ ಪ್ರದರ್ಶನವಾಗಿತ್ತು. ಕಣ್ಣೂರಿನ ಕಲೆಕ್ಟರೇಟ್ ಮೈದಾನದಲ್ಲಿ ಪ್ರದರ್ಶಿತವಾದ ಈ ಪ್ರದರ್ಶನ ವಿಶಿಷ್ಟವಾಗಿದ್ದು ಜನಹೋರಾಟಗಳ ಜ್ಞಾನದ ಬುತ್ತಿಯನ್ನು ಹಂಚುತ್ತಿದೆ. ಈ ಹಿಂದೆ ಕಲ್ಲಿಕೋಟೆಯಲ್ಲಿ ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿಯ ನೂರು ವರ್ಷಗಳ ಇತಿಹಾಸದ ವಿಷಯದ ಪ್ರದರ್ಶನಕ್ಕೆ ಹೋಲಿಸಿದರೆ ಈ ಪ್ರದರ್ಶನ ಬಹಳ ಭಿನ್ನ ಮತ್ತು ವಿಶಿಷ್ಟವಾಗಿತ್ತು.

ಅಂತರರಾಷ್ಟ್ರೀಯ, ರಾಷ್ಟ್ರೀಯ, ಕೇರಳದ, ಮತ್ತು ಕಣ್ಣೂರು ಜಿಲ್ಲೆಯ ಜನಹೋರಾಟಗಳ, ಜನಚಳುವಳಿಗಳ, ಕಮ್ಯುನಿಸ್ಟ್ ಚಳುವಳಿಯ ಇತಿಹಾಸವನ್ನು ನಿರೂಪಿಸುವ ಪೋಸ್ಟರುಗಳು ಸರಣಿ ಪ್ರದರ್ಶನದ ಮುಖ್ಯಭಾಗವಾಗಿವೆ. ಅಂತರರಾಷ್ಟ್ರೀಯ, ರಾಷ್ಟ್ರೀಯ, ಕೇರಳದ, ಮತ್ತು ಕಣ್ಣೂರು ಜಿಲ್ಲೆಯ ಹೋರಾಟಗಳ, ಚಳುವಳಿಗಳ ಪೋಸ್ಟರುಗಳನ್ನು ಸಮಯಾನುಕ್ರಮವಾಗಿ ಇಡಲಾಗಿದೆ. ಕೇರಳದ ಸಾಮಾಜಿಕ ಸುಧಾರಣಾ ಚಳುವಳಿಯ ಮುಖ್ಯ ಮಜಲುಗಳ ಮತ್ತು ಸುಧಾರಕರ ಪೋಸ್ಟರ್ ಗಳ ಸರಣಿ ಈ ಪ್ರದರ್ಶನದ ವಿಶಿಷ್ಟತೆ. ಕೇರಳ, ರಾಷ್ಟ್ರೀಯ, ಅಂತರರಾಷ್ಟ್ರೀಯ ಜನ ಮತ್ತು ಕಮ್ಯುನಿಸ್ಟ್ ಚಳುವಳಿಗಳ ಮಹಿಳಾ ನಾಯಕರ ವಿಶೇಷ ಪೋಸ್ಟರುಗಳ ಸರಣಿ ಇನ್ನೊಂದು ವಿಶಿಷ್ಟತೆ. ಕಣ್ಣೂರು ಜಿಲ್ಲೆಯ ಪ್ರಮುಖ ಹೋರಾಟಗಳ, ಆರ್ಥಿಕ ಇತಿಹಾಸ ದ ನಿರೂಪಣೆಗಳನ್ನು ಒಳಗೊಂಡಿರುವುದು ಮತ್ತೊಂದು ವಿಶೇಷತೆ. ಹಲವು ಹೋರಾಟಗಳಲ್ಲಿ ಹುತಾತ್ಮರಾದವರ ಕುರಿತು ವಿಶೇಷ ಪೋಸ್ಟರುಗಳೂ ಗಮನ ಸೆಳೆದವು. ಪೋಸ್ಟರುಗಳಲ್ಲಿ ಮುಖ್ಯ ಬರಹ ಮಲಯಾಳಂನಲ್ಲಿ ಇದ್ದು, ಅದರ ಸಾರಾಂಶ ಮಾತ್ರ ಇಂಗ್ಲೀಷಿನಲ್ಲಿ ಇತ್ತು.

ಚರಿತ್ರೆಯ ಪ್ರಮುಖ ಚಳುವಳಿಗಳ ಪೋಸ್ಟರುಗಳಲ್ಲದೆ, ಅವೇ ಥೀಮ್ ನ ಸುತ್ತ ಇರುವ ಸೃಜನಶೀಲ ಚಿತ್ರ (ಪೈಂಟಿಂಗ್) ಮತ್ತು ಶಿಲ್ಪ ಕಲಾಕೃತಿಗಳೂ ಈ ಪ್ರದರ್ಶನದ ವಿಶಿಷ್ಟತೆಯಾಗಿತ್ತು. ಕೇರಳದ ಪ್ರಮುಖ ಹೋರಾಟಗಳ ಜೀವಂತ ಸೃಜಿನ ಶಿಲ್ಪ ಕೃತಿಗಳಿದ್ದವು. ಇಂತಹ ಶಿಲ್ಪಕೃತಿಗಳ ಹತ್ತಿರ ಆಡಿಯೋ ಮೂಲಕ ಪುನರಾವರ್ತನೆಯಾಗುವ ನಿರೂಪಣೆ ಮಾಡಲಾಗುತ್ತಿದೆ. ಪುಟ 14 ಕ್ಕೆ









131 ನೇ ಅಂಬೇಡ್ಕರ್ ಜಯಂತಿ ಡಿಎಚ್ಎಸ್ ನಿಂದ ರಾಜ್ಯಾದ್ಯಂತ ಆಚರಣೆ

ಡಾ. ಭೀಮರಾವ್ ಅಂಬೇಡ್ಕರ್ 1891 ರ ಏಪ್ರಿಲ್ 14 ರಂದು ಜನಿಸಿದರು. ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ರವರ 131ನೇ ಜಯಂತಿಯನ್ನು ಏಪ್ರಿಲ್ 14, 2022 ರಂದು ಡಿಎಚ್ಎಸ್/ಡಿ.ಎಸ್.ಎಂ.ಎಂ. ವತಿಯಿಂದ ರಾಜ್ಯಾದ್ಯಂತ ಆಚರಿಸಲಾಯಿತು.

ಡಿ.ಎಸ್.ಎಮ್.ಎಮ್. ನ ರಾಷ್ಟ್ರೀಯ ನಾಯಕರಾದ ಬಿ.ವಿ. ರಾಘವಲು ತೆಲಂಗಾಣದಲ್ಲಿ ಅಂಬೇಡ್ಕರ್ ಪ್ರತಿಮೆಗೆ ಪುಷ್ಪಗುಚ್ಛ ಅರ್ಪಿಸಿದರು.

ಬೆಂಗಳೂರಿನಲ್ಲಿ ಎಲ್.ಐ.ಸಿ. ಇಂದಿರಾನಗರ ಮತ್ತು ಜೆ.ಸಿ. ರಸ್ತೆಯಲ್ಲಿರುವ ಕಚೇರಿಯಲ್ಲಿ ಮತ್ತು ಆ ನಂತರ ವಿಧಾನಸೌಧದ ಮುಂದಿರುವ ಅಂಬೇಡ್ಕರ್ ಪ್ರತಿಮೆಗೆ ಪುಷ್ಪಹಾರ ಅರ್ಪಿಸಿದ ನಂತರ, ಡಿ.ಎಸ್.ಎಮ್.ಎಮ್. ನ ಎನ್. ನಾಗರಾಜ ರವರು ಮಾತನಾಡಿದರು.

ಶ್ರೀರಾಮಪುರಂ ನಲ್ಲಿರುವ ಅಂಬೇಡ್ಕರ್ ರವರ ಪ್ರತಿಮೆಗೆ ಡಿಎಚ್ಎಸ್ ನ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಹರಳಹಳ್ಳಿಯವರು ಪುಷ್ಪ ಮಾಲ ಅರ್ಪಿಸಿ ಮಾತನಾಡಿದರು.

ಡಿಎಸ್ಎಸ್ ನ ಬೆಂಗಳೂರಿನ ಪೂರ್ವ ವಲಯ ಸಮಿತಿಯಿಂದ ಮಡಿವಾಳದಲ್ಲಿ ಸಂಜೆ ಅಂಬೇಡ್ಕರ್ ಜಯಂತಿಯ ಪ್ರಯುಕ್ತ ವಿಚಾರ ಸಂಕಿರಣವನ್ನು ಆಯೋಜಿಸಿತ್ತು. ಡಿ.ಎಸ್.ಎಮ್.ಎಮ್. ನ ನಾಯಕರಾದ ಎನ್. ನಾಗರಾಜ ರವರು, ಸಂವಿಧಾನ ಸಂರಕ್ಷಣೆ, ದಲಿತರ ಹಕ್ಕುಗಳು ಮತ್ತು ಖಾಸಗೀ ಕ್ಷೇತ್ರದಲ್ಲಿ ಮೀಸಲಾತಿ ಅಗತ್ಯತೆ ಕುರಿತಂತೆ ಉಪನ್ಯಾಸ ನೀಡಿದರು.

ಡಿಎಚ್ಎಸ್ ಮೂಡಬಿದ್ರೆ ತಾಲೂಕಿನಲ್ಲಿ ವಿಚಾರ ಸಂಕಿರಣವನ್ನು ಆಯೋಜಿಸಿತ್ತು. ಹೊಸಪೇಟೆಯಲ್ಲಿ ನಾಗಮೋಹನ್ ದಾಸ್ ಆಯೋಗದ ಶಿಪಾರಸ್ಸು ಜಾರಿಗಾಗಿ ಒತ್ತಾಯಿಸಿ ಧರಣಿ ನಡೆಸಲಾಯಿತು.

ಉತ್ತರ ಪ್ರದೇಶದ ಬಹ್ರೈಚ್ ಮತ್ತು ಒಡಿಶಾದ ಬರ್ಗಾದಲ್ಲಿ ಅಂಬೇಡ್ಕರ್ ಜಯಂತಿ ಆಚರಣೆ ವೇಳೆ ದಲಿತರ ಮೇಲೆ ನಡೆದ ಹಲ್ಲೆಗಳನ್ನು ಡಿ.ಎಸ್.ಎಮ್.ಎಮ್. ತೀವ್ರವಾಗಿ ಖಂಡಿಸಿದೆ. ಬಹ್ರೈಚ್ನ ಕಾಸಿಮ್ಗಂಜ್ನಲ್ಲಿ, ಠಾಕೂರ್ಗಳು ಆಚರಣೆಗಳ ಮೇಲೆ ದಾಳಿ ಮಾಡಿದರು ಮತ್ತು ಬಾಬಾಸಾಹೇಬರ ಪ್ರತಿಮೆಯನ್ನು ಒಡೆದರು. ಒಡಿಶಾದ ಬರ್ಗಾದಲ್ಲಿ ಕೇಸರಿ ವಸ್ತ್ರಧಾರಿ ಸಂಘಿಗಳು ದಲಿತರ ಮೇಲೆ ಹಲ್ಲೆ ನಡೆಸಿ, ಥಳಿಸಿ ವಾಹನಗಳನ್ನು ಧ್ವಂಸ ಮಾಡಿದ್ದಾರೆ. ಇದು ಮನುವಾದಿ ಹಿಂದುತ್ವದ ನಿಜವಾದ ಮುಖ, ಡಿ.ಎಸ್.ಎಮ್.ಎಮ್/ಡಿ.ಎಚ್.ಎಸ್. ಅಪರಾಧಿಗಳ ವಿರುದ್ಧ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದೆ.









JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**